ಮಧ್ಯೆದಲ್ಲಿ ಇವರೆಲ್ಲರೂ ಇರುತ್ತಾರೆ ತಾವುಗಳಲ್ಲಿ ಚರ್ಚೆ ಮಾಡಿ kindly come back with some valid suggestions

9) ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಭಾಷಣ

+ ಎನ್. ರಾಜಣ್ಣ (ಭಾರತಿ ನಗರ) : ಸನ್ಮಾನ್ಯ ಅಧ್ಯಕ್ಷರೇ ಆಡಳಿತ ಪಕ್ಷದಲ್ಲಿ ಮೊದಲನೇಯದಾಗಿ ನನಗೆ ಮಾತನಾಡುವುದಕ್ಕೆ ಅವಕಾವಶವನ್ನು ಕೊಟ್ಟಿದ್ದೀರಿ ಅದಕ್ಕೆ ಬಹಳವಾಗಿ ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು :ನನ್ನೆ ದಿವಸ ನಿಮಗೆ ಮೀನಿನ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಬೇರೆ ಕೊಟ್ಟಿಲ್ಲ; ಅದಕ್ಕೆ ಆರೋಪ ಬೇರೆ ಬೇರೆ ಇದೆ. ಇವೋತ್ತು ಮಾತನಾಡಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಒಬ್ಬರು ಮಾತನಾಡಿದರೆ ಆಡಳಿತ ಪಕ್ಷದಲ್ಲಿ ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಆದರೆ ಆಡಳಿತ ಪಕ್ಷದವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದೀರಿ . ಸಂತೋಷ ಅದರೆ ಈಗ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದೀರಿ. I am very thankful to you and all the members. Before touching the budget, I want to touch few words about our Governors's Address.

ಶ್ರೀ ಎನ್. ರಾಜಣ್ಣ : ಲಾಸ್ಟ್ ಟೈಮ್ ನಮಗೆ ಮಾತನಾಡುವುದಕ್ಕೆ ನೀವು ಬಿಡಲಿಲ್ಲ. Only few words sbout Governor's Address.

ಅಧ್ಯಕ್ಷರು : ಇಲ್ಲ ಮಾನ್ಯ ರಾಜಣ್ಣನವರೇ, ರಾಜ್ಯಪಾಲರು ಮಾಡಿದಂತಹ ಭಾಷಣದ ಮೇಲೆ ಸದನದಲ್ಲಿ ಚರ್ಚೆಗೆ ತೆಗೆದುಕೊಂಡು ಅದಕ್ಕೆ ವಂದನೆಯನ್ನೂ ಕೂಡ ಸಲ್ಲಿಸಿ ಅದಮೇಲೆ ಮತ್ತೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದನ್ನು ಬಿಟ್ಟು ಆಯವ್ಯಯದ ಮೇಲೆ ಮಾತನಾಡಿ, ಮುಂದಿನ ವರ್ಷ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇವೆ. I know, you are a new Member. I must guide you. If you have valid information, please make use of that.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, 1997-98ರ ಆಯವ್ಯಯ ಬಜೆಟ್ ಪುಸ್ತಕವನ್ನು ಬಹಳ ಚೆನ್ನಾಗಿ ಪ್ರಿಂಟ್ ಮಾಡಿದ್ದಾರೆ. ಇದರ ಮೇಲೆ ವಿಧಾನಸೌಧ ಚಿತ್ರ ಇರತಕ್ಕಂತಹ

ಅರ್ಥ ಏನೆಂದರೆ ವಿಧಾನಸೌಧದಲ್ಲಿ ನಾವುಗಳೆಲ್ಲರೂ ಇಲ್ಲ ಕುಳಿತುಕೊಂಡುಮಾಡತಕ್ಕಂತಹ ಕೆಲಸ ಈ 5 ಕೋಟಿ ಜನರಿಗೆ ಸುಬಭವಾಗಿಮುಟ್ಟುತ್ತದೆಂದು ಅರ್ಥ ಧೀಮಂತ ನಾಯಕರಾದ ಸನ್ಮಾನ್ಯ ಶ್ರೀ ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯನವರು ಕಟ್ಟಿ ಸಿರತಕ್ಕಂತಹ ಈ ಕೊಠಡಿಯಲ್ಲಿ ನಾವು ಇಲ್ಲ ಕುಳಿತುಕೊಂಡು in this decorated hall, wehave to maintain the decorum of the House. Our Hon ble Deputy chief Minister and the Finance Minister Mr. siddaramsiah has ut all his efforts to make this budget book contsining 218 paragragraphs, which is not aneasy job. It requires efficiency, cleverness and all his efforts. Theis budget cannot be presented so easily. All the 218 paregraphs indi cat of about the benefits trat are going to reach the citizens of this Karnataka, - five crores of people. Late pandit jawaharlal Nehru once remanked `` Planning is application of your intellect to a loj cal, responsible and better way of doing things whether it is in economics of doing things. whether it is in econmics or in politics or anything else, Planning will never cease to end. However the quality of support and the review have to be upgraded and made more relevant to the style of work of the Advisers and the individual of the planning Commission should be changed to encourage greater conciliation and co-ordination, The programme elevation organised and Department of Programme implementation should evolve a procedure for joint monitoring and elevation wih the States which are creditable and effective. What we need is not equivalent in our resolution and discussion, but dynamism." yes, there is dynamism in our government, in our finance Minister, in our Gandhian Government."

ಅಧ್ಯಕ್ಷರು : ಇದೆಲ್ಲಾ ನೆಹರೂ ಅವರು ಹೇಳಿದ್ದು. ನೀವೇನು ಹೇಳುತ್ತೀರಿ ಅದನ್ನು ಹೇಳಿ.

SRI N. RAJANNA : ``Dynamism in our activity and inclination'' ಇದನ್ನು ನಾನು ಹೇಳಿದ್ದು ಅಲ್ಲ, ಪಂಡಿತ್ ಜವಾಹರ್‌ಲಾಲ್ ನೆಹರು ಅವರು ಹೇಳಿದ್ದು. ಬಡ್ಜೆಟ್ ಮಾಡುವುದು ಅಷ್ಟು ಸುಲಭ ಅಲ್ಲ Architect is important. Planning is not so important. ಹನುಮಂತಯ್ಯನವರು ಕಟ್ಟಿದಂತಹ ಒಂದು ಕಟ್ಟಡದಲ್ಲಿ ಅವರು ಪ್ಲಾಸ್ ಮಾಡಬೇಕಾದರೆ he has applied his mind with senior officers for nearly three months. I Know what efforts he had made. ಇಲ್ಲ ಸ್ವಾಮಿ, ಶುರುವಾದ ದಿನದಿಂದ ನಾನು ನೋಡುತ್ತಿದ್ದೇನೆ. ಸನ್ಮಾನ್ಯ ಸಿದ್ಧರಾಮಯ್ಯನವರು ಈ ಪುಸ್ತಕದಲ್ಲಿ ಇರತಕ್ಕಂತಹ218 ಪ್ಯಾರಗಳನ್ನು ಓದಬೇಕಾದರೆ 100 ನಿಮಿಷ ತೆಗೆದು ಕೊಂಡರು. ನೀವು ಸಹನೆಯಿಂದ ಕೇಳಲಿಲ್ಲ ವಲ್ಲಾಸ್ವಾಮಿ Where is the decorum of this House : That is what I wan to say Mr. Speaker, You are equal to t he God.

ಸ್ವಾಮಿ ನಾವು ಏನು ಹೇಳುವುದು, ಹೋದವಾರ ದೇವರ ಬಗ್ಗೆ ಚರ್ಚೆ ಆಯಿತು. ದೇವರು ಎಲ್ಲಿ ಇದ್ದಾನೆ ಎಂದರೆ ಈ ವಿಧಾನ ಸೌಧದ ಟಾಪ್‌ನಲ್ಲಿ ದೇವರು ಇದ್ದಾನೆ. ಗಾಂಧೀಜಿಯವರ ತಲೆ ಮೇಲೆ ಆ ತಂಡಿ ಇದೆಯಲ್ಲ , ಅಲ್ಲಿದೇ Where there is justice, there is God. ನ್ಯಾಯ ಎಲ್ಲಿ ಇದೆಯೋ, ನ್ಯಾಯ ಧರ್ಮಮಿರುವ ಕಡೆ ದೇವರು ಇರುವುದು : ದೇವರನ್ನೇ ಮರೆತು ಬಿಟ್ಟೆವು. ಇಲ್ಲಿ ದೇವರ ಬಗ್ಗೆ ಸಹ ಚರ್ಚೆ ಆಯಿತು. Where is justice? Justice is in the Balabce. Who is real God ? ಈಗ ನಮಗೆ ಬಂದು ಸ್ಪೀಕರ್ ದೇವರು, ಅವರ ಮನಸ್ಸು ನೊಂದು ಬಿಟ್ಟಿತ್ತು. He Kept quiet for hundred minutes listening to all indisciplined behaviour of creating problem in this decorated house.

ಇಲ್ಲಿ ಎಲ್ಲಾ ಹಿರಿಯರು ಬಂದಿರುತ್ತೀರಿ. ಸನ್ಮಾನ್ಯರು ನೀವೇನು ಹೇಳುತ್ತೀರಿ ಎಂದು ಕೇಳಿಕೊಂಡು ಜನರಿಗೆ ಒಳ್ಳೆಯದು ಮಾಡೋಣವೆಂದು ನಾವು ಬಂದಿದ್ದೇವೆ. We want to listen to the senior leaders ನೀವು ಈ ಪುಸ್ತಕವನ್ನು ಹರಿಯುವ ಹಾಗೆ ಗಲಾಟೆ ಮಾಡುತ್ತೀರಿ, ಗಲಾಟೆ ಮಾಡಬೇಕಾದದ್ದೇ; ವಿಷಯ ಇರುವಾಗ ಗಲಾಟೆ ಮಾಡಬೇಕು. ಒಂದು ಮುಖ್ಯವಾಗಿ ಬಜೆಟ್ ಮಂಡಿಸುವಾಗ, ಗಲಾಟೆ ಮಾಡಿ 100 ನಿಮಿಷ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿ ಟೀಕೆ ಮಾಡುವುದು ಸರಿಯಲ್ಲ ರಾಜಣ್ಣನವರೇ ಒಂದು ಕಡೆ ನೀವು ಸಾಯಂಕಾಲ ಆರೂವರೆಗೆ ಊಟಕ್ಕೆ ಇನ್‌ವೈಟ್ ಮಾಡುತ್ತೀರಿ, ಇನ್ನೊಂದು ಕಡೆ ಬೈಯುತ್ತೀರಿ, ನಾವುಹೇಗೆ ನಿಮ್ಮ ಪಾರ್ಟಿಗೆ ಬರುವುದು ?

ಶ್ರೀ ಎನ್. ರಾಜಣ್ಣ : ನಾನು ಬೈಯುತ್ತಾ ಇಲ್ಲಾ ಸಾರ್ we want to learn more things from the senior leaders.

ಶ್ರೀ ಎಲ್ ಆರ್. ಶಿವರಾಮೇಗೌಡ : ರಾಜಣ್ಣನವರು ಬೈಯುತ್ತಾ ಇಲ್ಲ, ಅವರು ನೊಂದ ಮನಸ್ಸಿನಿಂದ ಹೇಳುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಎವಿಡೆನ್ಸ್ ನಮಗೇಕೆ.

ಅಧ್ಯಕ್ಷರು : ನೋಡಿನೀವು ನಾಗಮಂಗಲದಲ್ಲಿರುವ ಬೆಂಗಳೂರು ಗೌಡರು ಇವರು ಬೆಂಗಳೂರಿನಲ್ಲಿರುವ ನಾಗಮಂಗಲದ ಗೌಡರು; ನಿಮ್ಮ ಸೊಫೆಸ್ಟಿಕೇಷನ್ ಅವರಿಗೆ ಬಂದಿಲ್ಲ ನೀವು ಮಾತನಾಡಿ.

ಶ್ರೀ ಎನ್. ರಾಜಣ್ಣ : ಸೀನಿಯರ್ಸ್ ಲೀಡರ್ಸ್‌ನಿಂದ ಕಲಿಯುವುದು ಜಾಸ್ತಿ ಇದೆ. ಅವರಿಂದ ಕಲಿತು ಜನರಿಗೆ ಏನಾದರೂ ಸೇವೆ ಮಾಡಬೇಕು ಎಂದು ಬಂದಿದ್ದೇವೆ. ಆದರೆ ಸನ್ಮಾನ್ಯರುಗಳು ನೂರು ನಿಮಿಷ ಗಲಾಟೆ ಮಾಡಿದ್ದಾದರೆ ಅದಕ್ಕೆ ಮನಸ್ಸು ನೊಂದು ಹೇಳುತ್ತಾ ಇದ್ದೇನೆ...

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಲೈವ್ ಟಿವಿ ಮಾಡಿದ್ದರಿಂದಲೇ ಸ್ವಲ್ಪ ಗಲಾಟೆ ಆಯಿತು. ಒಂದು ಮಾತು ಹೇಳಬೇಕಾಗುತ್ತದೆ. ಕಷ್ಟಪಟ್ಟು ಮಾಡಿದಂತಹ ಬಜೆಟ್ ಅನು ವಿರೋಧ ಪಕ್ಷದವರಾಗಲಿ, ಯಾರೇ ಅಗಲಿ ಕೇಳುವುದಕ್ಕೆ ಅವಕಾಶ ಎಂದು, ಬೇಡ ಎಂದು ಹೇಳುವುದಿಲ್ಲ. ಆದರೆ ಚರ್ಚೆ ಕಾಲದಲ್ಲಿ ಮಾಡಬಹುದಾಗಿತ್ತು ಓದತಕ್ಕಂಥ ಕಾಲದಲ್ಲಿ ಬಹಳ ಅವ್ಯವಸ್ಥೆ ಮಾಡಿದಿರಲ್ಲಾ ಎಂಬ ನೋವಿನಿಂದ ರಾಜಣ್ಣನವರು ಹೇಳುತ್ತಿದ್ಧರೆ ಅದಕ್ಕೆ ತಾವು ಸಹ ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನಾನು ಇರುವುದೇ ನಿಮ್ಮ ರಕ್ಷಣೆಗೆ ಬರುವುದಕ್ಕೆ.

ಶ್ರೀ ಎನ್. ರಾಜಣ್ಣ ಈ ವರ್ಷದ ಬಜೆಟ್ ವಿಚಾರ, ಅಡಿಗೆ ಮನೆಗೆ ಹೋಗ ಬೇಕಾದರೆ ಅಡುಗೆ ಮಾಡುವುದಕ್ಕೆ ಸಾಮಾನು ಇದ್ದರೆ ಶುದ್ಧವಾಗಿ ಅಡಿಗೆ ಮಾಡಿ ಬಡಿಸಬಹುದು. ನಾವು ಬಂದಾಗ ಮಾನ್ಯ ಸಿದ್ದರಾಮಯ್ಯನವರು ಛಾರ್ಜ್ ತೆಗೆದುಕೊಂಡಾಗ ಅಡಿಗೆ ಮನೆಯಲ್ಲಿ ಸಾಮಾನೇ ಇರಲಿಲ್ಲ; ಅಡಿಮಾಡಿ ಇಡುವುದಕ್ಕೆಆರುನೂರು ಕೋಟಿ ಸಾಲ ಇಟ್ಟಿದ್ದಿರಿ ಅಂತಹದರಲ್ಲಿ ಅಡಿಗೆಮನೆಯಲ್ಲಿಸಾಮಾನು ಇಲ್ಲದಿದ್ದರೂ ಸಹಿತ ಚೆನ್ನಾಗಿಅಡಿಗೆ ಮಾಡಿಬಡಿಸಿದ್ದಾರಲ್ಲಾ ಅದಕ್ಕೆ ನೀವು ತಾರೀಫ್ ಮಾಡಿ. For 1995 - 96, we have cleared 600 crores. ಅಡಿಗೆ ಮನೆಯಲ್ಲಿ ಊಟ ಮಾಡಬೇಕಾದರೆ ಧವಸ ಧಾನ್ಯ

ಇದ್ದರೆ ಅಡಿಗೆ ಹೇಗೆ ಮಾಡುತ್ತಾರೆ ? ಅಡಿಗೆ ನೇ ಮಾಡುವುದಕ್ಕೆ ಆಗುವುದಿಲ್ಲ ಅಂತಹದರಲ್ಲಿ ಅಡಿಗೆ ಮಾಡಿ ಇರತಕ್ಕಂಥ ಸಾಲ ತೀರಿಸಿದ್ದೇವೆ ಧವಸ ಧಾನ್ಯ ಎಲ್ಲಾ ಇದ್ದರೆ ಚೆನ್ನಾಗಿ ಅಡಿಗೆ ಮಾಡುವುದಕ್ಕೆ ಆಗುವುದು;

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜ್ : ಅಡಿಗೆ ಮಾಡಿ ನೀವು ಎಲ್ಲರಿಗೂ ಹಂಚಲಿಲ್ಲ, ಅದನೆಲ್ಲಾ ತಾವೇ ತಿಂದ್ರಲ್ಲಾ.

(ಗೊಂದಲ)

ಶ್ರೀ ಎನ್. ರಾಜಣ್ಣ : 5 ಕೋಟಿಜನರೆಲ್ಲರಿಗೂ ಹಂಚುತ್ತಾ ಇದ್ದೇವೆ. ಇದುಉದಾಹರಣೆಗೆ ಹೇಳುವುದು, ಅಡಿಗೆ ಮನೆಗೆ ಹೋದರೆ ನಾವು ಅಡಿಗೆ ಮಾಡಿ ಇಡಬೇಕಾದರೆ ಅಲ್ಲಿ ಹಿಟ್ಟು, ಬೇಳೆ ನೀರು ಎಲ್ಲಾ ಇದ್ದರೆ ತಾನೇ ಶುದ್ಧವಾಗಿ ಅಡಿಗೆ ಮಾಡಿ 5 ಕೋಟಿ ಜನಸಂಖ್ಯೆಗೆ ಬಡಿಸಿ ಇವತ್ತು ಹೆಸರು ಗಳಿಸಿರತಕ್ಕಂಥ ಸರ್ಕಾರ ಈ ಗಾಂಧಿವಾದಿಗಳ ಸರ್ಕಾರ.

ಅಧ್ಯಕ್ಷರು : ನೀವು ಅವರ ಕಡೆ ನೋಡಬೇಡಿ ರಾಜಣ್ಣನವರೇ ಈ ಕಡೆ ನೋಡಿ ಸ್ವಲ್ಪ ಮೈಕ್‌ಗೆ ಮುಖ ಮಾಡಿ ಮಾತನಾಡಿ.

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜ್ : ನೀವು ರಕ್ಷಣೆಗೆ ಯಾವಾಗಲೂ ಇರುತ್ತೀರಿ ನಾನು ಅಧ್ಯಕ್ಷರನ್ನು ಕೇಳುತ್ತಾ ಇದ್ದೇನೆ, ಮಧ್ಯದಲ್ಲಿ ನೀವು ಏಕೆ ಮಾತನಾಡುತ್ತೀರಿ? ಅವರು ಗಾಂಧಿವಾದಿಗಳ ಸರ್ಕಾರ ಅಂದ್ರದಲ್ಲಾ ಅದರ ಬಗ್ಗೆ ಒಂದೇ ಒಂದು ಸ್ಪಷ್ಟೀಕರಣ ರಾಜಣ್ಣನವರನ್ನು ಕೇಳಬೇಕಾಗಿದೆ. ಗಾಂಧಿಯವರು ಏನು ಮಾಡಿದ್ದಾರೆ ಅಂದರೆ ನಿಷೇಧವನ್ನು ಮಾಡಿ ಅವಾಗ ಮಾತ್ರ ಗಾಂಧಿವಾಧಿಗಳು ಆಗುತ್ತೀರಿ ಎಂದರು. ತಾವು ಅಧಿಕಾರಕ್ಕೆ ಬರುವಾಗ ನಾವು ಮಾಡುತ್ತೇವೆ ಎಂದು ಹೇಳಿದಿರಿ.

ಅಧ್ಯಕ್ಷರು : ನೋಡೋಣ ಸಾಯಂಕಾಲ ಅವರ ಫಾರಂನಲ್ಲಿ ಯಾರ‍್ಯಾರು ಗಾಂಧಿವಾದಿಗಳು ಎನ್ನುವುದು ಗೊತ್ತಗುತ್ತದೆ.

ಶ್ರೀ ಜಿ. ಬಿ. ಶಿವಕುಮಾರ್ : ಮೆಜಾರಿಟಿ ಆ್ಯಂಟಿ ಗಾಂಧಿಗಳು ಅಲ್ಲಿಗೆ ಹೋಗುತ್ತಾರೆ. ರಾಜಣ್ಣನವರೇ, ನೀವು ಅಧ್ಯಕ್ಷರನ್ನು ನೋಡಿಕೊಂಡು ಮಾತನಾಡಿ.

ಶ್ರೀ ಎನ್. ರಾಜಣ್ಣ : ಪುಟ ನಂ . 14 ರಲ್ಲಿ Budget for 1997-98 ಸಾರ್, ದಯವಿಟ್ಟು ಇಂಗ್ಲೀಷಿನಲ್ಲಿ ಟೈಪ್ ಇರುವುದನ್ನು ಓದುತ್ತೇನೆ.

"1997-98 is able to pass the economic growth fo the state and the people. Keeping this in view the finance minister has allotted over 51% - Rs. 5,545 crores for plan-outlay, giving priority to infrastructure sector. Infrastructure for economic growth was not given any importance in the past by any Government in the past. resulting in slow progress. The budget provided for the Investors friendly environment in the State fund has been set up for upgradation of land development of roads network in the State, Rs. 10 Crores are provided towards the land acquisition cost for Airport road. Global tenders have been invited for development of port of katwar and old Mangalore Port and also offers have been invited from private sectors for developing minorports. offers received are very encouraging for energy generation Rs. 672 Crores. Which Works out to 14.79% which has been totally allotted, towards transportation Rs. 300.74 Crores.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜಣ್ಣನವರೇ ಅದೆಲ್ಲಾ ಸಿದ್ಧರಾಮಯ್ಯ ನವರ ಭಾಷಣ, ನಿಮ್ಮ ಭಾಕ್ಷಣ ಕೇಳಬೇಕು ಎಂದು ಕುಳಿತಿದ್ದೇವೆ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡಿ ನೆಹರೂ; ಸಿದ್ಧರಾಮಯ್ಯನವರ ಭಾಷಣವನ್ನು ಪಕ್ಕಕ್ಕೆ ಇಟ್ಟು ಬಿಡಿ; ನಿಮ್ಮ ಭಾಷಣ ಶುರು ಮಾಡಿ. ಇವರೇನು ಆಕ್ಷೇಪಣೆ ಮಾಡುವುದು? ನೀವು ಮಾತಾಡುತ್ತಾರೆ, ಅವರಿಗೆ ಎಲ್ಲಾ ವಿಚಾರ ಗೊತ್ತಿದೆ.

ಶ್ರೀ ಎನ್. ರಾಜಣ್ಣ : ಸ್ವಾಮಿ, ಈ ಸಧನದಲ್ಲಿ ನಾವು ಕೇಳುತ್ತಾ ಇರುವುದು ಮೊದಲನೆಯದಕ್ಕೆ ವ್ಯತ್ಯಾಸ ಬರಲು ಕಾರಣ ಏನೆಂದರೆ we have touched evcerything-most of our senior leaders have touched all the subjects. except family planning in this state and the country.

MR. SPEAKER : Family planning. Tree Planting Dairy...

ಶ್ರೀ ಎನ್. ರಾಜಣ್ಣ : ಇದಕ್ಕೆ ಕಾರಣ ಏನು ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಇದರ ಬಗ್ಗೆಯಾರೂ ಟಚ್ ಮಾಡುತ್ತಾ ಇಲ್ಲ I wanted to give some brief note. ಫ್ಯಾಮಿಲಿ ಪ್ಲಾನಿಂಗ್‌ಗೆ ಈಗ ನಾವುಕಾದಿರಿಸಿರುವುದು 548 ಕೋಟಿ ರೂಪಾಯಿ; ಅದು ಐಪಿಪಿ ಪ್ರಾಜೆಕ್ಟ್‌ನಲ್ಲಿ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಂಗ್‌ಗೆ. ಸ್ವಾತಂತ್ರ್ಯ ಬಂದಾಗ ನಮ್ಮ ಜನಸಂಖ್ಯೆ 30 ಕೋಟಿ ಇತ್ತು now we have reached 95 crores and we are reaching 100 criores shortly. ಒಂದು ಕಡೆ ನಮ್ಮ ಪುಟ್ಟಣ್ಣಯ್ಯನವರು ಹೇಳುತ್ತಾರೆ. ನಮ್ಮ ಕಡೆ ಕಾಡಿನಿಂದ ಕಾಡು ಹಂದಿಗಳು ಬಂದು ನಮ್ಮ ಊರಿನಲ್ಲಿ ಗದ್ದೆ, ಕಬ್ಬು ತಿಂದು ಹಾಕುತ್ತವೆ ಎಂದು. ಇದಕ್ಕೆ ಕಾರಣ ಏನು ಎಂದು ಅವರಿಗೂಗೊತ್ತಿದೆ. ಇನ್ನೊಂದು ಕಡೆ ನಮ್ಮ ರಾಮಸ್ವಾಮಿಯವರು ಹೇಳುತ್ತಾರೆ, ಊರಿಗೆ ಆನೆಗಳು ಬಂದು ಊರಿನಲ್ಲೆಲ್ಲಾ ಹಾವಳಿ ಮಾಡಿ ತೊಂದರೆ ಕೊಟ್ಟು ಜನಗಳನ್ನೆಲ್ಲಾ ಸಾಯಿಸುತ್ತಿವೆ, ಕಬ್ಬು ಬೆಳೆಯನ್ನೆಲ್ಲಾ ತಿನ್ನುತ್ತಾ ಇದೆ ಎಂದು ಅವರು ಹೇಳುತ್ತಾ ಇದ್ದಾರೆ, ಮತ್ತೊಂದು ಕಡೆ ತುಮಕೂರು ಆಚೆ ಕಡೆ ಪಾವಗಡದಲ್ಲಿ ತೋಳಗಳು ಬಂದು ಮಕ್ಕಳನ್ನೆಲ್ಲಾ ಹೊತ್ತು ಕೊಂಡು ಹೋಗುತ್ತಿವೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಏನು ಎಂದು ಎಲ್ಲರಿಗೂ ಗೊತ್ತಿದೆ. ಆದರೆ ನಮ್ಮ ಮುಖ್ಯಮಂತ್ರಿಗಳು ಮೊನ್ನೆ ಅವರು ಉತ್ತರ ಕೊಡುವಾಗ ಹೇಳಿದರು ಗಾಯಕ್ಕೆ ಮುಲಾಮ್ ಹಾಕುವ ಕೆಲಸ ಮಾತ್ರ ನಡೆಯುತ್ತದೆ, ಸರಿಯಾದ ಮೆಡಿಸಲ್ ಕೊಟ್ಟು ಹೋಲ್ ಬ್ಲಡ್ ಸರ್ಕುಲೇಷನ್ ಛೇಂಜ್ ಆಗಬೇಕೆಂದು ಹೇಳಿದರು ಅದನ್ನು ಮಾಡಿದರೆ ಇಷ್ಟು ತೊಂದರೆಗಳು ಏನು ಇರೆ, ಆನೆಗಳು ಬರುವುದು ಇರಲಿ ಕಾಡು ಹಂದಿ ಬರುವುದು ಇರಲಿ, ತೋಳ ಇರಲಿ ಇವೆಲ್ಲಾ ನಿಂತು ಹೋಗಿ ಬಿಡುತ್ತದೆ.

ಇದಕ್ಕೆ ಕಾರಣ ನಮ್ಮ ದೇಶದಲ್ಲಿ to-day is deforestation. This is number one. Then, illegal timber felling Then, illegal quarrying.

ಕಾಡು ಶೇಕಡ 80 ರಷ್ಟು ಇದ್ದುದ್ದು ಶೇಕಡ 20ಕ್ಕೆ ಇಳಿದ್ದೆ. ಶೇಕಡ 80ರಷ್ಟು ಜನಸಂಖ್ಯೆ ಆಗಿದೆ. ಸಾಮಾನ್ಯವಾಗಿ ಇವೊತ್ತಿನ ದಿವಸ ನಮ್ಮದೇಶ ನರಳುತ್ತಿರುವುದು ಪರಿಸರದ ಅಸಮತೋಲನದಿಂದ ಮತ್ತು ಪ್ರಕೃತಿ ವಿಕೋಪದಿಂದ. ಬಹುಶಃ ನನಗೆ ತಿಳಿದ ಹಾಗೆ ಆನೆ ಕಾಡಿರಬಹುದು, ಹಂದಿ ಕಾಟ ಇರಬಹುದು, ತೋಳದ ಕಾಟ ಇರಬಹುದು. ಯಾವಾಗ ಕಾಡು ಕಡಿಮೆಯಾಯಿತು ಆಗ ಆ ಮೃಗಗಳು ಊರಿಗೆ ಬರಲಾರಂಬಿಸಿದವು ಪಕ್ಷಿಗಳು ಕಾಡನ್ನು ಬೆಳೆಸುತ್ತಿದ್ದವು, ಆದರೆ ಇವತ್ತು ಆ ಪಕ್ಷಿಗಳು ಕಡಿಮೆಯಾಗಿವೆ. ಪ್ರಾಣಿಗಳು ಕಾಡನ್ನು ಬೆಳೆಸುತ್ತಿದ್ದವು, ಈಗ ಅವೂ ಕೂಡ ಕಡಿಮೆಯಾಗಿವೆ. ಪ್ರಾಣಿಗಳು ಕಾಡನ್ನು ಬೆಳೆಸುತ್ತಿದ್ದವು;

ಈಗ ಅವೂ ಕೂಡ ಕಡಿಮೆಯಾಗಿವೆ. ಇವತ್ತಿನ ದಿವಸ ನಗರಗಳಲ್ಲಿ ಒಂದು ಗಿಡ ಬೆಳೆಸಬೇಕಾದರೆ ಬಹಳ ಕಷ್ಟ ಇದೆ. ಸಾವಿರ ಗಿಡ ಇದ್ದರೆ 10 ಗಿಡಗಳು ಬೆಳೆಯುತ್ತಿವೆ. ಸಾವಿರ ಗಿಡಗಳಿಗೆ ನಾವು ಖರ್ಚು ಮಾಡಬೇಕಾದುದು ಒಂದು ಲಕ್ಷ ರೂಪಾಯಿ. ಅರಣ್ಯ ಸಂಪತ್ತು ಹಾಳಾಗಿದೆ, ಪ್ರಾಣಿ ಸಂಪತ್ತು ಹಾಳಾಗಿದೆ. ಪಕ್ಷಿ ಸಂಪತ್ತು ಹಾಳಾಗಿದೆ, ಮನುಷ್ಯ ಸಂಪತ್ತು ಮಾತ್ರ ಉಳಿದುಕೊಂಡಿದೆ. ಇದರ ಬಗ್ಗೆ ನಾವು ಪಕ್ಷಭೇಧ ಬಿಟ್ಟು ಚರ್ಚೆ ಮಾಡಬೇಕಾಗಿದೆ. ಇವತ್ತು ಈ ಕುಟುಂಬ ಯೋಜನೆ ಏನಿದೆ (ಐ.ಪಿ.ಪಿ - 8 ಮತ್ತು 9) ಅದನ್ನು ಜಾರಿಗೆ ತಂದು ನಮ್ಮ ರಾಜ್ಯ ಉಳಿಸೋಣ, ನಮ್ಮ ದೇಶ ಉಳಿಸೋಣ ಎಂದು ನಾನು ಎಲ್ಲಾಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ತಾವು ದೊಡ್ಡ ಮನಸ್ಸು ಮಾಡಿ ಈ ಕುಟುಂಬ ಯೋಜನೆ ಕರ್ನಾಟಕದಿಂದಲೇ ಪ್ರಾರಂಭ ಮಾಡೋಣ. ತಾವು ಈ ಬಾಬಿಗೆ 540 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಬೇಕೆಂದಿದ್ದೀರಿ, ಅದರಿಂದ ನಿಜವಾಗಿ ದೇಶಕ್ಕೆ ಅನುಕೂಲವಾಗುತ್ತದೆ. ಈ ಕಾರ್ಯಕ್ರಮ ಕರ್ನಾಟಕದಿಂದ ಪ್ರಾರಂಭವಾಗಿ 95 ಕೋಟಿ ಇರತಕ್ಕ ಜನಸಂಖ್ಯೆಯನ್ನು ಕಡಿಮೆ ಮಾಡಲಿಲ್ಲವೆಂದರೆ ಆನೆ ಕಾಟ ನಿಲ್ಲುವುದಿಲ್ಲ, ಹಂದಿ ಕಾಟ ನಿಲ್ಲುವುದಿಲ್ಲ, ತೋಳದ ಕಾಟ ನಿಲ್ಲುವುದಿಲ್ಲ. ನೀರು ಇಲ್ಲದೆ ಬಾವಿಗಳು ಒಣಗುವುದು ನಿಲ್ಲುವುದಿಲ್ಲ. ನಮ್ಮಗೆ ನಾವೇ ಒಣಗಿ ಹೋಗುವ ಕಾಲ ಕೂಡ ಬರುತ್ತದೆ. ಅದಕೋಸ್ಕರ ನಾವು ಖರ್ಚೆ ಭೇಧ ಬಿಟ್ಟು ನಾವು ಐ.ಪಿ.ಪಿ. ಪ್ರಜೆಕ್ಟ್ ಯಶಸ್ವಿಯಾಗುವಂತೆ ಮಾಡಬೇಕೆಂದು ತಮ್ಮಲ್ಲಿ ನನ್ನ ಕಳಕಳಿಯ ಮನವಿ. ಮನುಷ್ಯ ಚಟುವಟಿಕೆಗಳಿಂದ ಉಂಟಾಗತಕ್ಕ ಅಹಿತಕರ ಪರಿಸರ ಬದಲಾವಣೆಗೆ ಪರಿಸರ ಮಾಲಿನ್ಯ ಅನ್ನುತ್ತೇವೆ. ಅಂದು ಕಟ್ಟಿರುವುದು ಜೈವಿಕ ಪರಿಸರ ಮಾತ್ರವಲ್ಲ, ಸಾಮಾಜಿಕ ಮತ್ತು ರಾಜಕೀಯ ಪರಿಸರ ಕೂಡ ಕೆಟ್ಟಿದ. That is the main problem, we are shouting here. That is the cause. Imbalance in our body. That is the main cause, we are shouting each other. ಮುಖ್ಯವಾಗಿ ಮನುಷ್ಯನ ಮಾನಸಿಕ ಪರಿಸರಿ ಕೆಟ್ಟಿದೆ. ನಾಗರೀಕತೆಯ ಹೆಸರಿನಲ್ಲಿ ಸೃಷ್ಟಿಯಾಗಿರತಕ್ಕ ಅವಶ್ಯ ಕತೆಯನ್ನು ತೆಗೆದುಕೊಂಡು ನಾವು ಕೈಗಾರಿಕಾ ಜೀವನಕ್ಕಾಗಿ ಸದಾ ಭವ್ಯ ವಸ್ತುಗಳನ್ನು ಅವಲಂಬಿಸಿ ಮಾನಸಿಕ ಕ್ಷೋಭೆಯಲ್ಲಿ ಇಡೀ ಮಾನವಕುಲ, ನಗರವಾಸಿಜನ ನರಳುವಂತೆ ಮಾಡಿದೆ. ಇಂಥ ಪರಿಸರದಲ್ಲಿ ಹುಚ್ಚಿದ ಮಾನಸಿಕ ಬೆಳಣಿಗೆಯೂ ಸಹ ಈ ಪರಿಸರಕಕೆ ಅನುಗುಣವಾಗಿರುತ್ತದೆ. The present generation produces mentally, bodilly weak persons. ನಾನು ಏನು ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಮಕ್ಕಳು ಮತ್ತು ತಾಯಂದಿರಿಗಾಗಿ ಖರ್ಚು ಮಾಡುತ್ತಿದ್ದೇವೆ ಅದು ನಿಜವಾಗಿ ಪ್ರಯೋಜನವಾಗುತ್ತಿಲ್ಲ ಆದು ಪ್ರಯೋಜನವಾಗಬೇಕಾದರೆ We must see that again forest belt should be

increased. ಅರಣ್ಯ ಉಳಿಸಿದರೆ ಮಾತ್ರ ಅದುಸಾಧ್ಯ ಇನ್ನು ಕೊಳವೆ ಬಾವಿಗಳ ಸಮಸ್ಯೆ ಇರಬಹುದು, ವಿದ್ಯುತ್ ಸಮಸ್ಯೆ ಇರಬಹುದು, ನೀರಿನ ಸಮಸ್ಯೆ ಇರಬಹುದು, ಇವೆಲ್ಲಾ ಸಮಸ್ಯೆಗಳು ನಿವಾರಣೆ ಯಾಗಬೇಕಾದರೆ ಅರಣ್ಯ ಸಂಪತ್ತು ಅಭಿವೃದ್ಧಿಯಾಗಬೇಕು. ಅರಣ್ಯ ಸಂಪತ್ತು ಇಲ್ಲವೆಂದರೆ ನಾವು ಮುಂದೆ ಇನ್ನೂ ತೊಂದರೆಪಡುವ ಪರಿಜಸ್ಥಿತಿ ಬರುತ್ತದೆ. ನಾನು ನೋಡಿದ ಹಾಗೆ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ ಇಂಥ ಪ್ರಮುಖ ಸಮಸ್ಯೆಗಳು ಇವೆ. ನಗರಗಳಲ್ಲ ವಿದ್ಯುತ್ ಮತ್ತು ನೀರಿನ ಸಮಸ್ಯೆ ಬಹಳವಾಗಿದೆ. ವಿದ್ಯುತ್ ಬಗ್ಗೆ ಇಷ್ಟು ಹೊತ್ತು ಚರ್ಚೆಯಾಗುತ್ತಿತ್ತು; ಮಂತ್ರಿಗಳು ಉತ್ತರ ನೀಡುತ್ತಿದ್ದರು. ಮಾನ್ಯ ಪಾಟೀಲರುಕೇಳಿದ ಪ್ರಶ್ನೆಗೆ ಉತ್ತರ ಬರುತ್ತಿತ್ತು ನಗರಗಳಲ್ಲಿ ವಿದ್ದುತ್ ಸಮಸ್ಯೆ ಬರಬೇಕಾದರೆ ಕಾರಣವೇನು ? ನಮ್ಮ ಜೀವನವನೆಲ್ಲಾ ಮೋಜಿನ ತರಹ ಮಾಡಿಕೊಂಡಿದ್ದೇವೆ. Life is in electric switch. Life is in switch, bron with electric power. ಮಗು ಜನನವಾದ ತಕ್ಷಣ ಇನ್‌ಕ್ಯೂಬರ್‌ನಲ್ಲಿ ಹಾಕಿ ಅದಕ್ಕೆ ಅಲ್ಲಿ 15 ದಿವಸಕ್ಕೆ 15 ಸಾವಿರ ರೂಪಾಯಿ ವಿದ್ಯುತ್‌ಗಾಗಿ ಖರ್ಚು. ಬಾಗಿಲುತೆಗೆಯಬೇಕಾದರೆ, ಬೆಲ್ ಹೊಡೆಯಬೇಕಾದರೆ ಎಲೆಕ್ಟ್ರಿಕ್ ಸ್ವಿಚ್. ಒಳಗಡೆ ಹೋದರೆ ಹೀಟರ್, ಹೀಟರ್ ಹಾಕಿದರೆ ಊಟ ತಯಾರು. ಹೀಟರ್ ಆದಮೇಲೆ ಫ್ರಿಡ್ಜ್ ಫ್ಯಾನ್, ಏರ್ ಕಂಡೀಷನ್ ಹೀಗೆ ಎಲ್ಲಾ ರೆಡಿ ಮೋಜಿನ ಜೀವನ ಮಾಡಿಕೊಂಡು ಬಿಟ್ಟಿದ್ದೇವೆ ಬೆಂಗಳೂರು ನಗರದಲ್ಲಿ ಶವದಹನ ಕ್ರಿಯೆಗೆ 700 ಡಿಗ್ರಿಯಲ್ಲಿ ವಿದ್ಯುತ್ 24 ಗಂಟೆಗಳ ಕಾಲ ವ್ಯರ್ಥವಾಗುತ್ತಿರುತ್ತದೆ. ಹೆಣಗಳು ಅಲ್ಲಿ ಸಾಲುಗಟ್ಟಿ ನಿಂತಿರುತ್ತವೆ. ವಿದ್ಯುತ್ ವಿದ್ಯುತ್ ಅಂದರೆ ಎಲ್ಲಿಂದ ಬರುತ್ತದೆ? ಹೆಣ ಸುಡಬೇಕಾದರೆ ನಾವು ಚಾರ್ಜ್ ಮಾಡುವುದು 75 ರೂಪಾಯಿಗಳಾದರೆ ಆದಕ್ಕೆ ಒಟ್ಟು 4 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಕ್ರಿಮೇಷನ್ ಪ್ಲಾಂಟೇಷನ್ 700 ಡಿಗ್ರಿ ಶಾಖದಲ್ಲಿ 24 ಗಂಟೆಗಳ ಕಾಲವುಕಾಯುತ್ತಿರಬೇಕು. ಹಾಗಾದರೆ ವಿದ್ಯುತ್ ಎಲ್ಲಿ ಉಳಿಯುತ್ತದೆ ?

ಶ್ರೀ ಜಿ. ಬಿ. ಶಿವಕುಮಾರ್ : ಮಾನ್ಯ ರಾಜಣ್ಣನವರು ಜನಸಂಖ್ಯಾ ನಿಯಂತ್ರಣ ವೆಂದು ಹೇಳಿದರು. ಅವರ ಅನುಭವದಲ್ಲಿ ಇರತಕ್ಕ ಎಲ್ಲಾ ಸದನಸ್ಯರು ಅಂದರು. ಇಲ್ಲಿ ಯಾರಾದರೂ ಕುಟುಂಬ ಯೋಜನೆಯನ್ನು ಆಳವಡಿಸಬೇಕಂದು ಇದ್ದರೆ ಹೇಳ ಬೇಕೆಂಬುದು ಒಂದು ಅಥವಾ ಏನು ಮಾಡಿದರೆ ಸರಿಹೋಗುತ್ತದೆಂದು ಹೇಳದೆ ಅನುಮಾನದಲ್ಲಿ ಇಟ್ಟುಕೊಂಡು ಹೋಗುತ್ತಿದ್ದಾರೆ. ಆದುದರಿಂದ ತಾವು ಇದಕ್ಕೆ ಉತ್ತರ ದೊರಕಿಸಿಕೊಂಡುವುದಕ್ಕೆ ಪ್ರಯತ್ನ ಮಾಡಬೇಕು.

ಅಧ್ಯಕ್ಷರು: ಯಾರೂ ಅವರಿಗೆ ಅಡಚಣೆ ಉಂಟು ಮಾಡಲಬಾರದು. ಅವರು ಏನೋ ಒಂದು ಅಲೋಚನೆ ಮಾಡಿಕೊಂಡು ಬಂದಿರುತ್ತಾರೆ. ಅವರೊಬ್ಬರು, ಇವರೊಬ್ಬರು ಮಧ್ಯ

ಪ್ರವೇಶ ಮಾಡಿದರೆ ಅವರ ಆಲೋಚನಾ ಸರಣಿಯಿಂದ ಅದು ಬ್ರೇಕ್ ಆಗುತ್ತದೆ. Please allow him to speak.

ಶ್ರೀ ಎನ್. ರಾಜಣ್ಣ : ಸಾಮಾನ್ಯವಾಗಿ 3 ಎಕರೆ ಜಮೀನು ಇರತಕ್ಕ ಒಬ್ಬ ರೈತ 10 ಹೆಚ್. ಪಿ. ಪಂಪ್‌ಸೆಟ್ ಇಟ್ಟು ಕೊಂಡಿರುತ್ತಾನೆ. ಅವನಿಗೆ ಸಾಕಷ್ಟು ವಿದ್ಯುತ್ ದೊರೊಯುವುದಿಲ್ಲ. ಈ ವಿದ್ಯುತ್ ಸಮಸ್ಯೆ ಎಲ್ಲಾಕಡೆಯೂ ಇದೆ. ನಗರಗಳಲ್ಲಿ ಮೋಜಿನಜೀವನದಿಂದ ವಿದ್ಯುತ್ ಪರಿಸ್ಥಿತಿಯಾವ ಮಟ್ಟಕ್ಕೆ ಬಂದಿದೆ ಎಂದು ಹೇಳಿದೆ. ಇಲ್ಲಿ ಒಂದು ಹೆಣ ಸುಡಬೇಕಾದರೆ ನಾಲ್ಕು ರೂಪಾಯಿ ವಿದ್ಯುತ್ ವ್ಯರ್ಥ ಮಾಡುತ್ತಿದ್ದೇವೆ. ಪ್ರಕೃತಿಯಿಂದ ಕೂಡಿದ ನಮ್ಮ ದೇಹ ಮತ್ತೆ ಭೂಮಿಗೆ ಹೋಗಬೇಕು. ಎಲ್ಲಾ ಕ್ರಿಯೇಟ್ ಮತ್ತು ಎಕ್ಸ್‌ಟ್ರಾಕ್ಟ್‌ನಲ್ಲಿ ಜೀವನ ಮಾತ್ತಿದ್ದೇವೆ. ಇದು ಅಧಿಕಾರಿಗಳಿಗೆ ಗೊತ್ತಿದೆ. ಬಿಸಿನಸ್‌ಮ್ಯಾನ್ ನಮ್ಮನ್ನು ಕ್ರಿಯೇಟ್ ಮಾಡಿ ಎಕ್ಸ್‌ಟ್ರಾಕ್ಟ್ ಮಾಡುತ್ತಿದ್ದಾನೆ. 4 ಸಾವಿರ ರೂಪಾಯಿ ಒಂದು ಹೆಣ ಸುಡುವುದಕ್ಕೆ; ಆದನ್ನು ಮಣ್ಣಿನಲ್ಲಿ ಹೂಳ್ಳಿ ಒಂದು ಮರ ನೆಟ್ಟರೆ, ಆ ಮರ ದೊಡ್ಡದಾದ ಮೇಲೆ 50 ಸಾವಿರ ಮಿಲಿಯನ್ ಗ್ಯಾಲನ್ ವಾಟರ್ ಅನ್ನ ಪ್ರಿಸರ್ವ್ ಮಾಡುತ್ತದೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಹೆಣಸುಡುವುದಕ್ಕೆ 4 ಸಾವಿರ ರೂಪಾಯಿಗಳು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ, ಅದು ಒಪ್ಪಿಕೊಳ್ಳುವ ವಿಚಾರ. ಹೆಣದ ತೂಕದ ಮೇಲೆ ಎಷ್ಟಾಗುತ್ತಿದೆಂದು ನೀವು ಲೆಕ್ಕಾಚಾರ ಹಾಕಿದ್ದೀರೋ, ಅದರ ಬಗ್ಗೆ ಒಂದು ಮಾಹಿತಿ ಕೊಡಿ.

ಶ್ರೀ ಎನ್. ರಾಜಣ್ಣ : ಮಾನ್ಯ ಸಗೀರೆ ಅಹಮದ್ ಅವರೇ, ನೀವು ಯಾವಾಗಲಾದರೂ ಒಂದು ದಿನ ಬೆಳಗ್ಗಿ 6 ಗಂಟೆಗೆ ನನ್ನ ಮನೆಗೆ ಬನ್ನಿ ನಾನು ಬೆಳಗ್ಗಿ ಎದ್ದರೆ ಹೊರಗಡೆ ಹೋಗುತ್ತೇನೆ. ಇವತ್ತು ಮನ್ನುಷ್ಯ ಸತ್ತಮೇಲೆ ಫೈನಲ್ ರೆಸ್ಟಿರ್‌ಗ್ ಪ್ಲೇಸ್ ಎಂದು ಹೇಳುವುದು. ಅಲ್ಲೂ ನೆಮ್ಮದಿಯಾಗಿಲ್ಲ. ಇದು ನನ್ನ ಸರ್ಕಾರ ಬಂದಾಗಲ್ಲ ಆಗಿದ್ದು. ಇದು 20 ವರ್ಷದಿಂದ ಆಗುತ್ತಾ ಬರುತ್ತಿದೆ.

ಶ್ರೀ ಸಿ. ಆರ್, ಸಗೀರ್ ಅಹಮದ್ : ಸಾರ್, ಇವರು ಹೇಳುವುದು ಸರೀನಾ ಸಾರ್. ನನಗೆ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಅಂತಾರಲ್ಲಾ.

ಅಧ್ಯಕ್ಷರು: ಅದೂ ನೀವು ಯಾವಾಗ ಅಂದರೆ ಆಗ ಹೋಗುವ ಹಾಗಿಲ್ಲ. ಬೆಳಗ್ಗೆ 6 ಗಂಟೆಗೇ ಹೋಗಬೇಕು.

SRI N. RAJANNA : I will take you to the burial ground and show you. ಅವನೂ ನೆಮ್ಮದಿಯಾಗಿಲ್ಲ. ನನ್ನ ಸಲಹೆ ಏನೆಂದರೆ all bodies should go t o t he soil ಮಣ್ಣಲ್ಲೇ ಹೂಳಬೇಕು. ಅದರ ಮೇಲೆ ಮರ ಬಂದರೆ ಆ ಮರ 50,000 ದಿಂದ 5 ಲಕ್ಷ ಗ್ಯಾಲನ್ಸ್ ವಾಟರನ್ನು ಪ್ರಿಸರ್ವ್ ಮಾಡುತ್ತದೆ. ಒಂದು ಮರ ಇದ್ದರೆ ಕನಿಷ್ಠ ನೂರು ಜನಕ್ಕೆ ಆಕ್ಸಿಜನ್ ಪ್ರೊಡ್ಯೂಸ್ ಮಾಡುತ್ತದೆ. ಇದನ್ನೆಲ್ಲಾ ನಾವು ಲೆಕ್ಕ ಹಾಕಬೇಕು. ಸುಮ್ಮನೆ ಬಂದೆವು, ಮಾತನಾಡಿದೆವು, ಚರ್ಚೆ ಮಾಡಿದೆವು, ಹೋಗಿಬಿಟ್ಟೆವು, ನಾವೂ ವಿರೋಧ ಮಾಡಿದೆವು ಎಂದು ರಾಜಕೀಯದಲ್ಲೇ ದೇಶ ಮುಳುಗಿಸುತ್ತಿದ್ದೇವೆ ನಾವು. ಈ ಕಡೆ ಬೆಂಗಳೂರಿನಲ್ಲಿ ಹೀಗೆ. ರೈತರಿಗೆ ಮೂರು ಎಕರೆ ಜಾಗ ಇರುತ್ತದೆ. ಎರಡು ಬೋರೆವೆಲ್ ಇರುತ್ತದೆ. ಅವನು ಬೋರ್‌ವೆಲ್‌ನಲ್ಲಿ ನೀರು ಬರುತ್ತಿದೆ ಎಂದು 10 ಎಕರೆಗೆ ಡೆವಲಪ್ ಮಾಡುತ್ತಾನೆ. ಸಾಲ ತೆಗೆದುಕೊಳ್ಳುತ್ತಾನೆ. ಸಾಲ ತೆಗೆದು ಕೊಂಡು 10 ಎಕರೆ ಡೆವಲಪ್ ಮಾಡಿದ ಹಾಗೆ, ಇಲ್ಲಿ ಬೇಸಿಗೆ ಕಾಲ ಬಂತು. ಮಳೆಯೂ ಇಲ್ಲ, ಪವರೂ ಇಲ್ಲ, 10 ಎಕರೆಯಲ್ಲಿ 7 ಎಕರೆ ಒಣಗಿತು. ಆ ಸಾಲವನ್ನೂ ಕಟ್ಟುವ ಪರಿಸ್ಥಿತಿ ಬಂತು. ರೈತರ ಕಷ್ಟ ಇದು.

ಅಧ್ಯಕ್ಷರು : ಬಜೆಟ್‌ನ ಯಾವ ಪೋರ್ಷನ್‌ನಲ್ಲಿ ಇದೆಲ್ಲಾ ಹೇಳಿದ್ದಾರೆ ಈ ಬರಿಯಲ್ ಗ್ರೌಂಡೆದೂ ಇದೆಲ್ಲಾ ? ಎಷ್ಟನೇ ಪೇಜಿನಲ್ಲಿದೆ ?

ಶ್ರೀ ಎನ್. ರಾಜಣ್ಣ : ಪೀಠಿಕೆ ಹೇಳಿಬಿಟ್ಟು ಬರುತ್ತೇನೆ. ಅದೇ ತರಹ ಉದಾಹರಣೆ ಒಂದು ಕೊಡುತ್ತೇನೆ. ನಾನು ಒಂದು ದಿನ ಕಾರಿನಲ್ಲಿ 10 ಗಂಟೆಗೆ ನಮ್ಮ ದೇಶಪಾಂಡೆ ಸಾಹೇಬರ ಮನೆಯ ಮುಂದುಗಡೆ ಅಡ್ರೆಸ್ ಹುಡುಕುತ್ತಾ ಇದ್ದೆ. ಅಲ್ಲ, ಪರಿಸ್ಥಿತಿ ಬೆಂಗಳೂರಿನಲ್ಲಿ ಏನಾಗಿದೆ ಎಂಬುದನ್ನು ಸ್ವಲ್ಪ ಯೋಜನೆ ಮಾಡಬೇಕು. ಒಬ್ಬ ಕೆಲಸ ಮಾಡತಕ್ಕ ಆಯಾಗೆ 50 ವರ್ಷ ಇರಬಹುದು ಸಾರ್, ಆಯಮ್ಮ ಮೂಟೆ ತುಂಬಾ ಚಿಕ್ಕೆಪುಡಿ ತೆಗೆದುಕೊಂಡುಬಂದು ಈ ಡಸ್ಟ್‌ಬಿನ್ ಹತ್ತಿರ ಹಾಕುತ್ತಾ ಇದ್ದೇಯಲ್ಲಾ, ಮನೆಗೆ ಹೊತ್ತಿಕೊಂಡು ಹೋಗಿ ಒಲೆ ಉರಿಸಿದರೆ ಮೂರು ನಾಲ್ಕು ದಿನಕ್ಕೆ ನಿನಗೆ ಕೆರೋಸಿನ್ ಉಳಿಯುತ್ತದಲ್ಲಮ್ಮ ಅಂದರೆ, ಅಕೆ, ಯಾರು ಸ್ವಾಮಿ ಉರಿಸುವುದಕ್ಕೆ ಹೋಗುತ್ತಾರೆ, ನಮ್ಮ ಮನೆಯಲ್ಲಿ ಕೆರೋಸಿನ್ ಇದೆ, ಕೆರೋಸಿನ್‌ನಲ್ಲಿ ಉರಿಸುತ್ತೇನೆ ಎಂದು ಹೇಳಿದಳು. ಆದರೆ ಹಣವಂತರ ಮನೆಯವರು ಆ ಚಿಕ್ಕೆಪುಡಿ ಹೊರಗಡೆ ಕಳುಹಿಸಿ ಡಸ್ಟ್‌ಬಿನ್ ಹತ್ತಿರ ಹಾಕಿಸಿ ಕಚಡಾ ಮಾಡುತ್ತಾ ಇದ್ದಾರೆ. ಅದನ್ನು ಬಾಯ್ಲರ್‌ಗೆ ಹಾಕಿದರೆ ಕಡೇಪಕ್ಷ 5 ಯೂನಿಟ್ ಪವರ್ ಉಳಿತಾಯ ಮಾಡಬಹುದು. whether it is power, or wheter it is water. That is the main reason.

ಅಧ್ಯಕ್ಷರು : ಈಗ ಎಂ. ಎಸ್. ಪಾಟೀಲರು ಬಂದರು ಈ ಗಾಂಧಿಯನ್ ವಿಚಾರ ಅವರಿಗೂ ಗೊತ್ತಿದೆ ಹೇಳ. ಅವರೇ ಎಂದು ಹೇಳಿದರೂ ಹೇಳಬಹದು.

ಶ್ರೀ ಎನ್. ರಾಜಣ್ಣ : ನಮ್ಮ ಬಜೆಟ್ಟಿನಲ್ಲಿ ಪ್ಯಾರಾ 22ರಲ್ಲಿ ಹೀಗೆ ಹೇಳಿದ್ದಾರೆ. "ಕರ್ನಾಟಕ ತನ್ನ ಜನರಿಗೆ ಉತ್ತಮ ಗುಣಮಟ್ಟವನ್ನು ಜೀವನದಲ್ಲಿ ಕಲ್ಪಿಸುವಲ್ಲಿ ಒಳ್ಳೆಯ ಸ್ಥಾನಗಳಿಸಿದೆ. ನಮ್ಮಸರ್ಕಾರ ಕಳೆದ ಎರಡು ವರ್ಷಗಳಿಂದ ಸಾಮಾಜಿಕ ವಲಯಕ್ಕೆ ಗಣನೀಯ ಪ್ರಮಾಣದಲ್ಲಿ ಮಾಡಿರುವ ವೆಚ್ಚದ ನೇರ ಫಲ ಇದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕುಡಿಯುವ ನೀರಿಗಾಗಿ ಮಾಡಿರುವ ವೆಚ್ಚ 176 ಕೋಟಿಗಳಿಂದ 240 ಕೋಟಿಗೆ ಹೆಚ್ಚಿದೆ. ಎಲ್ಲಾ ಇನ್‌ಕ್ರೀಸಾಗಿದೆ." ಎಂದು ಹೇಳಿದ್ದಾರೆ, ಆದರೆ ನಾವು ಇಲ್ಲಿ ನೋಡುತ್ತಿದ್ದೇನೆ, ಪ್ಲಾನಿಂಗ್‌ನಲ್ಲಿ ಎಲ್ಲಾ ಇನ್‌ಕ್ರೀಸ್‌ಆಗಿದೆ. ಎಷ್ಟು ಇನ್‌ಕ್ರೀಸ್ ಮಾಡಿದರೂ ಬೋರ್‌ವೆಲ್‌ನಲ್ಲಿ ನೀರಿಲ್ಲ. ನಮ್ಮ ಮಂತ್ರಿಗಳು ಏನುಮಾಡುತ್ತಾರೆ ? ಅದಕ್ಕೋಸ್ಕರ ಕೊನೆಯದಾಗಿ ನಾವೆಲ್ಲಾ ಕುರ್ಚಿಗೆ ಆಸೆ ಬಿಡೋಣ ಈ ಫ್ಯಾಮಿಲಿ ಪ್ಲಾನಿಂಗ್ ಒಂದು ಸಕ್ಸೀಡೆ ಆಗಬೇಕು. ಕಂಫಲ್ಸರಿ ಆಗಬೇಕು. ನಾನು ಜೋರಾಗಿ ಹೇಳುತ್ತೇನೆ, ಕಂಫಲ್ಸರಿ ಆಗಬೇಕು; 50 ವರ್ಷಕ್ಕೆ ಹಿಂದೆ ಪ್ರಕೃತಿಯೇ ಕಂಟ್ರೋಲ್ ಮಾಡುತ್ತಿತ್ತು. ಪ್ರಕೃತಿ ಕೈಯಲ್ಲೇ 20 ವರ್ಷ ಬಿಟ್ಟುಬಿಡೋಣ. ಎಲ್ಲರೂ ಒಂದಾಗೋಣ. ಆಗ ದೇಶ ಸರಿಹೋಗುತ್ತದೆ.

ಶ್ರೀ ಹೆಚ್. ಎಸ್ ಶಂಕರಲಿಂಗೇಗೌಡ : ರಾಜಣ್ಣನವರೇ, ಫ್ಯಾಮಿಲಿ ಪ್ಲಾನಿಂಗ್ ಪ್ರಕಾರ ಎಷ್ಟು ಮಕ್ಕಳಿರಬೇಕು ? ನಿಮಗೆಷ್ಟು ಮಕ್ಕಳು ?

ಶ್ರೀ ಎನ್. ರಾಜಣ್ಣ : 1970ಕ್ಕೆ ಹಿಂದೆ ಆಗಿದ್ದು ಮೂರೇ ಮಕ್ಕಳು ನನಗೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : 1970ರ ಹಿಂದೆ ಮೂರು. ಆಮೇಲೆ ?

ಅಧ್ಯಕ್ಷರು : ನೋಡಿ. ದಯಮಾಡಿ ಸ್ವಲ್ಪ ಅವರಿಗೆ ಡಿಸ್ಟರ್ಬ್ ಮಾಡಬೇಡಿ. ಈಗ ಫ್ಯಾಮಿಲಿ ಪ್ಲಾನಿಂಗ್ ವಿಚಾರವೆಲ್ಲಾ ಹೇಳಿದ್ದೀರಿ. ನಾನು ಆಮೇಲೆ ಹೇಳುತ್ತೇನೆ. ಈ ನಂಜಪ್ಪನವರಿಗೆ, ಮಂಜುನಾಥ್ ಅವರಿಗೆ ಇವರಿಗೆಲ್ಲಾ ಕರೆದುಹೇಳುತ್ತೇನೆ ಫ್ಯಾಮಿಲಿ ಪ್ಲಾನಿಂಗ್ ವಿಚಾರ. ನೀವು ಮುಂದುವರೆಸಿ

ಶ್ರೀ ಜಿ. ಬಿ. ಶಿವಕುಮಾರ್ : ಅಧ್ಯಕ್ಷರೇ, ರಾಜೇಂದ್ರನ್ ಅಂಥವರಿಗೆ ಶ್ರೀರಾಮರೆಡ್ಡಿಯಂಥವರಿಗೆ ಹುಷಾರಪ್ಪ ಎಂದುಹೇಳುವುದು ಬಿಟ್ಟುಬಿಟ್ಟು ನೀವೆಲ್ಲಾಪೂರ್ತಿ ರಿಟೈರ್ಡ್ ಆಗಿರುವವರಿಗೇ ಹೇಳಿದರೆ ಏನು ಪ್ರಯೋಜನ ಹೇಳಿ.

ಅಧ್ಯಕ್ಷರು : ಈಗ ಇನ್ನು ಎಷ್ಟು ಸಮಯ ಬೇಕಾಗಬಹುದು ತಮಗೆ ?

ಶ್ರೀ ಎನ್. ರಾಜಣ್ಣ : ಅಟ್‌ಲೀಸ್ಟ್ ಒಂದು ಗಂಟೆ ಸಾಕು ಸಾರ್. ಕೆಲವರೆಲ್ಲಾ ನಮ್ಮ ಸ್ನೇಹಿತರು ಒಪ್ಪಿಕೊಂಡಿದ್ದಾರೆ ಸಾರ್. ಆರೋಗ್ಯ ಮತ್ತು ಕುಟುಂಬಕಲ್ಯಾಣಕ್ಕೆ ಮಾಡಿರುವ ವೆಚ್ಚ 385 ಕೋಟಿ ರೂ. ಗಳು 385 ಕೋಟಿಯಿಂದ 481 ಕೋಟಿಗೆ ಹೆಚಿಸಿದ್ದಾರೆ. ಇನ್ ಕ್ರೀಸ್ ಮಾಡಿದ್ದಾರೆ. ಕಡಿಮೆ ಏನೂ ಮಾಡಿಲ್ಲ. ಸ್ವಾಮಿ, ಆ ಬಜೆಟ್ ಓದುವಾಗ ತಾವು ನೆಮ್ಮದಿಯಾಗಿಕೇಳಲಿಲ್ಲ. 100 ಮಿನಟ್ಸ್ ಓದಿದಾಗ ನಿಮ್ಮಲೀಡರೆಗಳುಈ ಕಡೆಯಿಂದ ಆ ಕಡೆಗೆ ಓಡಾಡಿ ಏನು ಪ್ರಯೋಜನ ವಾಗುತ್ತದೆ ? See, there are great people, geat leaders, ಮಹಾತ್ಮಾಗಾಂಧಿ,ಜವಾಹರಲಾಲ್ ನೆಹರೂ, ವಲ್ಲಭಾಯ್ ಪಟೇಲ್ ಡಾ।। ಅಂಬೇಡ್ಕರ್, ಡಾ।। ರಾಧಾಕೃಷ್ಣನ್ ಮಾನ್ಯ ಕೆಂಗಲ್ ಹನುಮಂತಯ್ಯ. Great people are there. We have to follow them. We have to see that we do good things to the people. ಅಧ್ಯಕ್ಷರ ಬಗ್ಗೆ ನಾನು ಹೇಳಿದೆನಲ್ಲಾ. He is equal to the God. Where there is a justice there is a God. ದೇವರ ಬಗ್ಗೆ ಚರ್ಚೆ ಮಾಡುವುದೇ ಬೇಡ. Where there is a justice, there is a God. Where there is a Nyaya there is a God. ದೇವರು ಎಲ್ಲೋ ಇದ್ದಾರೆ. ಕಾಯಕವೇ ಕೈಲಾಸ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅಧ್ಯಕ್ಷರೆ ಇವರ ಭಾಷಣ ಕೇಳಿ ಸಿದ್ದರಾಮಯ್ಯನವರು ಓಡಿಹೋದರು.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ರಾಜಣ್ಣನವರು ಹೇಳುತ್ತಿದ್ದಾರೆ ಎಲ್ಲರೂ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಳ್ಳಬೇಕು ಎಂದು. ತಮ್ಮನ್ನು ನೋಡಿ ದೇವರು ತರಹ ಎಂದು ಹೇಳುತ್ತಾರೆ. ತಮ್ಮನ್ನೂಸೇರಿಸಿ ಹೇಳುತ್ತಾರಾ ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು : ನನಗೆಯಾವತ್ತೋ ಆಗಿಹೋಗಿಬಿಟ್ಟಿದೆಯಪ್ಪ.

ಶ್ರೀ ಎಸ್ ರಾಜೇಂದ್ರನ್ : ಎಲ್ಲರೂ ಮಾಡಬೇಕು ಫ್ಯಾಮಿಲಿ ಪ್ಲಾನಿಂಗ್‌ಅಂದರೆನಾವು ಬ್ಯಾಚುಲರ್. ನಾವು ಏತಕ್ಕೆ ಮಾಡಿಸಿಕೊಳ್ಳಬೇಕು ? ನಾವು ಬ್ಯಾಚುಲರ್ ಮಾಡಿಸಿಕೊಳ್ಳಬೇಕೆಂದರೆ it is a violation of the rule

ಅಧ್ಯಕ್ಷರು : ಈಗ ಫ್ಯಾಮಿಲಿ ಪ್ಲಾನಿಂಗ್ ಅಗತ್ಯ ನಮಗೆಲ್ಲಾ ಏನೂ ಬೇಕಾಗಿಲ್ಲ. ಬೇಕಾಗಿರುವುದೇ ನಿಮಗೆ ಮತ್ತು ವಯಸ್ಸಾದವರಿಗೆ.

ಶ್ರೀ ಎನ್. ರಾಜಣ್ಣ : ಪ್ಯಾರಾ 27ರಲ್ಲಿ ಪ್ರಾಥಮಿಕ ಶಿಕ್ಷಣ ವೆಚ್ಚ 1375 ಕೋಟಿ ರೂಪಾಯಿಗಳಿಂದ 1826 ಕೋಟಿಗೆ ಹೋಗುತ್ತಿದ್ದೇವೆ ನಾವು. That means we have increased nearly Rs. 400 and odd crores for the education. ಜಾಸ್ತಿ ಮಾಡಿದ್ದೇವೆಯೇ ಹೊರತು ಕಡಿಮೆ ಮಾಡಿಲ್ಲ. ಇಷ್ಟೆಲ್ಲಾ ಸರ್ಕಸ್ ಮಾಡಿ ಈಪ್ಲಾನಿಂಗ್‌ಮಾಡಿದರೆಸಾರ್ ಅಲ್ಲಿಗೂ ನೀವು ಎಷ್ಟು ಡಿಸ್ಬರ್ಬೆನ್ಸ್ ಮಾಡಿದಿರಿ ಅಂದರೆ.... ನನ್ನದೊಂದು ರಿಕ್ವೆಸ್ಟ್ Let us do good thing to the 5 crore people House. ಸಾರ್, 500 ಕೋಟಿ ರೂಪಾಯಿ ಇನ್‌ಕ್ರೀಸ್ ಆಗಿದೆ. Mr. Govinde Gowda and Mr Somashekhar as the Education Ministers, they are trying their level best to tone up the administration. It is not so easy to develop within a few days, within a few years. It will take its own time. ತಮಗೆ ಗೊತ್ತಿದೆ ಗೋವಿಂದೇಗೌಡರು ಗಾಂಧಿ ತರಹದಲ್ಲಿ ಬಹಳ ಪ್ರಯತ್ನ ಮಾಡಿ ಬಿಲ್ಡ್ ಅಫ್ ಮಾಡುತ್ತಾ ಇದ್ದಾರೆ. ಆದರೆ ಇವತ್ತು ಎಜ್ಯುಕೇಷನ್ ಸಿಸ್ಟಂ ಏನಾಗಿದೆ? ಏನಾಗಿದೆ ಎಂದು ನಿಮಗೇ ಗೊತ್ತಿದೆ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ಏನಾಗಿದೆ ? ರ್‍ಯಾಗಿಂಗ್ ಏನಾಗಿದೆ? ಈ ಎಜ್ಯುಕೇಷನ್ ಸರಿಪಡಿಸಬೇಕೆಂದರೆ ನಮ್ಮ ಮುಖ್ಯಮಂತ್ರಿಗಳು ಹೇಳಿದರಲ್ಲಾ ಹಾಗೆ ಗಾಯಕ್ಕೆ ಮುಲಾಮು ಹಾಕುವುದು ಬೇಡ ಸರಿಪಡಿಸಬೇಕಾದರೆ ಬೇಸಿಕೆ ಗ್ರಾಸೆರೂಟ್‌ನಲ್ಲೇ ಸರಿಪಡಿಸಬೇಕು. The baby should be educated before the birth of tahe child.

ಶ್ರೀ ಸಿ. ಆರ್. ಸಗೀರ್ ಅಹಮದೆ : ಅಧ್ಯಕ್ಷರೆ, before the birth ಶಾಲೆಗಳನ್ನು ಪ್ರಾರಂಭ ಮಾಡಬೇಕಂತೆ ಅದು ಹೇಗೆ ಎಂದು ಸ್ವಲ್ಪ ಸರ್ಕಾರಕ್ಕೆದಯಮಾಡಿ ಯಾವರೀತಿಯಲ್ಲಿ ಆ ಕಾರ್ಯಕ್ರಮ ಮಾಡಬಹುದು ಎನ್ನುವ ಬಗ್ಗೆ ಮಾಹಿತಿ ಕೊಡಿ ರಾಜಣ್ಣನವರೇ

ಶ್ರೀ ಎಸ್. ರಾಜೇಂದ್ರನ್ : ಮಹಾಭಾರತದಲ್ಲಿ ಅಭಿಮನ್ಯವಿಗೆ ಮಾತ್ರ ಹುಟ್ಟುವುದಕ್ಕಿಂತ ಮೊದಲೇ ಕಲಿಸಲಾತ್ತು.

ಶ್ರೀ ಬಿ. ಎನ್. ಬಚ್ಚೇ ಗೌಡ : ಸಗೀರ್ ಅಹಮದ್‌ರವರೇ, ಅಭಿಮನ್ಯುವಿಗೆ ಹೇಗೆ ಇಂದಿನ ಮಕ್ಕಳಿಗೂ ಶಿಕ್ಷಣ ಕೊಡಬೇಕೆಂದು ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳುತ್ತಿದ್ದಾರೆ.

ಶ್ರೀ ಎಚ್ ಡಿ. ಬಸವರಾಜು : ಅದೇ ರೀತಿಯ ಶಿಕ್ಷಣ ಕೊಡಬೇಕೆಂದು ಹೇಳುತ್ತಿರುವುದರಿಂದ ರಾಜಣ್ಣನವರನ್ನು ಆದಷ್ಟು ಬೇಗ ಮಂತ್ರಿಗಳನ್ನಾಗಿಮಾಡಬೇಕೆಂದು ನಾರೆಲ್ಲರೂ ಕೇಳಿಕೊಳ್ಳುತ್ತೇವೆ.

SRI N. RAJANNA : We are spending money for child and mother care, but it is not properly spent according to the plan. That is mistake No. 1. ಮಗುವನ್ನು ಸ್ಕೂಲಿಗೆ ಕಳಿಸಿದಾಗ ಟೀಚರ್ ಹೇಳಿದ್ದನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬರುತ್ತದೆ. ಆದರೆ, ಹುಟ್ಟುವಾಗಲೇ if the child has weaker body, weaker mind, then we have to spend crores of rupees for the development of body and mind of children.

ಅಧ್ಯಕ್ಷರು: ರಾಜಣ್ಣನವರೇ, ಈಗ ಶ್ರೀನಿವಾಸ ಗೌಡರು ಸದನಕ್ಕೆ ಬಂದಿದ್ದಾರೆ. ಮಕ್ಕಳು ಸ್ಟ್ರಾಂಗ್‌ಆಗಿ ಹುಟ್ಟಲು ಏನಾದರೂ ಗೊಬ್ಬರಸಿಗುತ್ತದೆಯೇ ಎಂದು ಅವರನ್ನು ಕೇಳಿ ತಿಳಿದುಕೊಳ್ಳಿ. ಅವರು ಏನಾದರೂ ಗೊಬ್ಬರ ಸಿಗುತ್ತದೆಯೇ ಎಂದು ಅವರನ್ನು ಕೇಳಿ ತಿಳಿದುಕೊಳ್ಳಿ. ಅವರು ಕ್ರಿಬ್ಕೊದಿಂದ ಏನಾದರೂ ಮಾಡುತ್ತಾರಾ ಎಂದು ಕೇಳಿ...

SRI. N. RAJANNA : I am coming to the agriculture later on. If you ask me afterwards ಎಲ್ಲಿ ತಪ್ಪಾಗಿದೇ ಎಂಬುದನ್ನುಹೇಳುತ್ತೇನೆ. ಮಗುವಿನ ಜನನದಅಂದರೆ ಬಗ್ಗೆ ತಾಯಿ -ತಂದೆ ಬುದ್ಧಿವಂತರಾಗಿ, If mother care has been taken properly before the birth of the child, the child born will be healthy and after 5 years, 14 years, if you provide proper food and proper atmosphere, that child will become perfect. Then it will become a good child. ಅಂಥಾದ್ದರಲ್ಲಿ ನಮ್ಮ ಸರ್ಕಾರ ಇವತ್ತು ಐದು ನೂರು ಕೋಟಿ ರೂಪಾಯಿ ಜಾಸ್ತಿ ಇಟ್ಟರೂ ಸಹ ನೀವು ಅದು ಸಾಲದು ಎಂದು ಹೇಳಿಈ ಕೊನೆಯಿಂದ ಆ ಕೊನೆಗೆ ಸರ್ಕಸ್ ಮಾಡಿ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯನವರು 97-98ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಓದುವ ಸಂದರ್ಭದಲ್ಲಿ ಎಷ್ಟು ತೊಂದರೆಯಾಯಿತು. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಹೇಳುತ್ತೇನೆ. ಅದಕೋಸ್ಕರ ಶಿಕ್ಷಣ ಬಹಳ ಮುಖ್ಯ. ಎಲ್ಲರಿಗೂ ಶಿಕ್ಷಣ ಕೊಡುವುದಕೋಸ್ಕರ ಶಿಕ್ಷಣ ಬಹಳ ಮುಖ್ಯ. ಎಲ್ಲರಿಗೂ ಶಿಕ್ಷಣ ಕೋಡುವುದಕೋಸ್ಕರ ನಮ್ಮ ಸರ್ಕಾರ ಎಫರ್ಟ್ ಹಾಕಿದೆ. ಆ ದಿಕ್ಕಿನಲ್ಲಿ ನಾವು ಒಳ್ಳೆಯ ಶಿಕ್ಷಣವನ್ನು ಕೊಡುತ್ತರೀರೆಂದು ನಮಗೂ ನಂಬಿಕೆ ಇದೆ, ನಿಮಗೂ ನಂಬಿಕೆ ಇದೆ. ಆದರೂ ನೀವು ಗಲಾಟೆ ಮಾಡುತ್ತಿದ್ದೀರಿ, ಎರಡನೆಯದಾಗಿ, ನಮ್ಮ ಸರ್ಕಾರ ಕೊಟ್ಟಿರತಕ್ಕಂಥ ಕೆಲವು ಅನುದಾನಗಳ ಸಹಾಯದಲ್ಲಿ we have given more benefits to the employees of Karnataka. ಅದರಲ್ಲೂ ಸರ್ಕಾರಿ ನೌಕರರ ಚರಿತ್ರೆಯಲ್ಲಿ ಪುಟ 82ರಲ್ಲಿ ತಿಳಿಸಿರುವಂತೆ

ರೂ.1,500 ಸಂಬಳ ತೆಗೆದುಕೊಳ್ಳುವವರಿಗೆ ಪ್ರೋಫೆಷನಲ್ ತೆರಿಗೆಯಿಂದ ವಿನಾಯಿತಿ ಮಾಡಿದ್ದೀರಿ, ಅದೇ ರೀತಿ 2,000 ರೂ. ಮತ್ತು 3,000 ರೂ. ಸಂಬಳ ತೆಗೆದುಕೊಳ್ಳುವವರಿಗೆ ವಿನಾಯಿತಿ ಕೊಟ್ಟು ನಿಲ್ ಎಂದು ಮಾಡಿದ್ದೀರಿ, ಅದೇ ರೀತಿ ಕೊಟ್ಟು ನಿಲ್ ಎಂದು ಮಾಡಿದ್ದೀರಿ ಅದರರ್ಥ ಇವತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಕೇಂದ್ರದ ಉದ್ದಿಮೆಗಳಲ್ಲಿ, ರಾಜ್ಯಸರ್ಕಾರಿ ನೌಕರರಿಗೆ, is it not a benefit to the employees of the state? Nearly 10 lakh people are benefited. 10 ಲಕ್ಷ ನೌಕರರುಗಳಿದ್ದಾರೆ. ಆ ಬೀಡಿ ಕಾರ್ಮಿಕನಿರಬಹುದು, ಕಾಫಿ ಎಸ್ಟೇಟ್ನಲ್ಲಿ ಕೆಲಸಮಾಡುವವನಿರಬಹುದು, ಒಂದು ಸಣ್ಣ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿರಬಹುದು. is it not profitable to them? ನಿಮಗೆ ಗೊತ್ತಿದೆ ಆದರೂ ನೀವುವಿರೋಧ ಮಾಡಬೇಕೆಂದು ಮಾಡುತ್ತೀದ್ದೀರಷ್ಟೆ. ಇನ್ನೇನೂ ಇಲ್ಲ.

ಇದೇ ತರಹ we must appreciate our government. The budget presenter by Mr. Siddaramaiah is a very good budget as Mr. nehru has said ಯಾವದೇ ಅಗಲೀ ಪ್ಲಾನಿಂಗ್ ಇರಬೇಕು. ನಾಳೆ ನಾವು ಒಂದು ಮನೆ ಕಟ್ಟಬೇಕೆಂದರೂ ಅದಕ್ಕೆ ಒಂದು ಪ್ಲಾನ್ ಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ರಾಜಣ್ಣನವರೇ, ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಬಜೆಟ್ಟ ಮಂಡನೆ ಮಾಡಿರುವಂಥ ಸಂದರ್ಭದಲ್ಲಿ ದಿವಂಗತ ನೆಹರೂಜಿ ಅವರು ಎಲ್ಲಿಂದ ಬಂದರು? ಅದಕ್ಕೆ ಅವರು ಅಪ್ರೀಸಿಯೇಷನ್ ಏಕೆ ಕೊಟ್ಟರು? ದಯಮಾಡಿ ಹೇಳಬೇಕು. ಅವರು ಈಗ ಇಲ್ಲ ಅವರು ಎಲ್ಲಿಂದ ಬಂದರು ? ಹೇಳಿ.

SRI N. RAJANNA : I am coming to that point at the end. ಕೊನೆಯಲ್ಲಿ ನನ್ನ ಮಾತುಗಳನ್ನು ಮುಗಿಸುವಾಗ ಆ ವಿಷಯಕ್ಕೆ ಬರುತ್ತೇನೆ. I don't what to take more time. ನಾನು ಬಜೆಟ್ ಬಗ್ಗೆ ಸ್ವಲ್ಪ ಪಾಯಿಂಟ್ಸ್ ಮಾತ್ರ ಹೇಳುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನೂ ಬೆಂಗಳೂರು ನಗರದ ವಿಷಯಕ್ಕೆ ಬರುತ್ತೇನೆ.

ಅಧ್ಯಕ್ಷರು : ರಾಜಣ್ಣನವರೇ, ತಾವು ಈಗಾಗಲೇ 41 ನಿಮಿಷಗಳ ಕಾಲ ಮಾತನಾಡಿದ್ದೀರಿ ಈ ದಿವಸ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿ ಅವರು ಮಾತನಾಡುವವರಿದ್ದಾರೆ. ಜೊತೆಗೆ ಮೂರು ಜನ ವಿರೋಧ ಪಕ್ಷದವರು ಮಾತನಾಡುವುದಿದೆ. ಅದು ಆದಮೇಲೆ ಹಣಕಾಸಿನ ಮಂತ್ರಿಗಳು ಇವತ್ತೇ ಉತ್ತರ ಕೊಡಬೇಕು. ನಂತರ ಕ್ಲಾರಿಫಿಕೇಷನ್ಸ್ ಕೇಳಬೇಕು. ಮತಕ್ಕೆ ಹಾಕಬೇಕು. ಏಕೆಂದರೆ, ನಾಳೆ ಬೆಳಿಗ್ಗೆಧನ ವಿನಿಯೋಗ ವಿಧೇಯಕ

ವಿಧಾನ ಪರಿಷತ್ತಿಗೆ ಹೋಗಿ ವಾಪಸ್ಸ ಬರಬೇಕು. ಆದ್ದರಿಂದ, ತಾವು ಇನ್ನೂ ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಎನ್. ರಾಜಣ್ಣ : ಅಧ್ಯಕ್ಷರೇ, ನಾನುತಮ್ಮಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಬೆಂಗಳೂರು ನಗರದ ಬಗ್ಗೆ ಇನ್ನೂ ನಾನು ಪ್ರಾರಂಭಿಸಿಲ್ಲ. 20 ನಿಮಿಷ ಆದರೂ ಟೈಮ್ ಕೊಡಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ರಾಜಣ್ಣನವರೇ, ಬೆಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಬಹಳ ಹದಗೆಟ್ಟು ಹೋಗಿರುವುದರಿಂದ ಅದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಎನ್. ರಾಜಣ್ಣ : ಬೆಂಗಳೂರು ನಗರದ ಬಗ್ಗೆ ಹೇಳುವುದಾದರೆ ನಾನು ಹುಟ್ಟಿ ಬೆಳದದ್ದೇ ಬೆಂಗಳೂರಿನಲ್ಲಿ ಆದರೆ, ಇವೊತ್ತಿನ ಬೆಂಗಳೂರು ಓರಿಜನಲ್ ಬೆಂಗಳೂರು ಅಲ್ಲ. ಇದು ದಿಕ್ಕು ತಪ್ಪಿ ಬೆಳೆದು ನಿಂತಿರುವ ಹುಚ್ಚು ಬೆಂಗಳೂರು. ಹುಚ್ಚು ಬೆಳವಣಿಗೆಯ ಬೆಂಗಳೂರು ನಗರ.

ಅಧ್ಯಕ್ಷರು : ಬೆಂಗಳೂರಿಗೆ ಹುಚ್ಚೋ ಅಥವಾ ಬೆಂಗಳೂರಿನಲ್ಲಿ ಇರುವವರಿಗೆ ಹುಚ್ಚೋ?

SRI N. RAJANNA : The development is hapazard without proper planning. ಇವತ್ತು ಈ ಮಟ್ಟಕ್ಕೆ ಬೆಂಗಳೂರು ಬಂದಿದೆ. ಉದಾಹರಣೆಗೆ ಎಚ್.ಎ.ಎಲ್. ರೋಡಿನಲ್ಲಿ ಮಲ್ಟಿಸ್ಟೋರ್ಡ್ ಬಿಲ್ಡಿಂಗ್ಸ್ 2 ಸಾವಿರದಷ್ಟು ಸಂಖ್ಯೆಯಲ್ಲಿಬಂದಿದೆ. ಇವತ್ತು ಸರ್ಕಾರಕ್ಕೆಕಡಿಮೆ ಎಂದರೂ ಈ ರಸ್ತೆಯಿಂದ ಸುಮಾರು 2 ಸಾವಿರ ಕೋಟಿ ರೂಪಾಯಿಗಳಷ್ಟು ಬೆಟರ್‌ಮೆಂಟ್ ಚಾರ್ಜು ಬರುವುದು ಲಾಸ್‌ಆಗಿದೆ. ಎಚ್.ಎ.ಎಲ್ ಏರಪೋರ್ಟ ಆಸ್ಪತ್ರೆಯಿಂದ ಎಚ್.ಎ.ಎಲ್ ಫ್ಯಾಕ್ಟರಿವರೆಗೆನೂ ಇರುವ ಅನ್‌ಅಥರೈಸ್ಡ್ ಮಲ್ಟಿ ಸ್ಟೋರೀಗ್ ಬಿಲ್ಡಿಂಗ್ಸ್ ನಿಂದ ಇವತ್ತು ಬರಬೇಕಾದ ಮಲೆ ಅಲ್ಲಿ ಪರ್ಮಿಷನ್ ಕೊಟ್ಟು ಇವತ್ತು 2 ಸಾವಿರ ಬಿಲ್ಡಿಂಗ್ಸ್ ನಿಂದ 2 ಸಾವಿರ ಕೋಟಿಯಷ್ಟು ಹಣ ಸರ್ಕಾರಕ್ಕೆಲಾಸ್ ಮಾಡಿದ್ದಾರೆ ಎಂದರೆ ಇದರ ಬಗ್ಗೆ ತನಿಖೆಯಾಗಬೇಕಲ್ಲಿ ಕಟ್ಟಿರತಕ್ಕಂಥ ಬಿಲ್ಡಿಂಗ್ಸ್‌ನವರಿಗೆ ಬೆಟರ್‌ಮೆಂಟ್ ಚಾರ್ಜು ಹಾಕಬೇಕು. ಅವರಿಗೆ ಫೈನ್ ವಿಧಿಸಿ ಕಲೆಕ್ಟ್ ಮಾಡಿದರೆ ಮಾತ್ರ ಸರ್ಕಾರಕ್ಕೆ ಹಣ ಬರಲು ಸಾಧ್ಯ. ಇವತ್ತು ಕಾರ್ಪೊರೇಷನಲ್ಲಿ ಹಣ ಇಲ್ಲ. ಬಿ.ಡಿ.ಎ.ನಲ್ಲಿ ಹಣ ಇಲ್ಲ. ಆದ್ದುದರಿಂದ ಎಲ್ಲಿಂದ ತರುವುದಕ್ಕಾಗುತ್ತದೆ.? ಅವರಿಗೆ ಫೈನ್ ಹಾಕಬೇಕು, ಅವರುಗಳಿಂದ ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಕಲೆಕ್ಟ ಮಾಡ ಬೇಕು. ಎರಡನೆಯದು. ಕಾರ್ಪೋರೇಷನ್‌ದಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ದುರ್ಬಲವಾಗಿದೆ. 1995ರಲ್ಲಿ ಕಾರ್ಪೋರೇಷನ್ ಕೌನ್ಸಿಲರ್‌ಗಳು ಅಧಿಕಾಂದಿಂದ ಇಳಿಯುವಾಗ 70 ಕೋಟಿ ರೂಪಾಯಿ ಸಾಲ towards payment of

bills. ಇತ್ತೊ 1990ರಲ್ಲಿ ಸರ್ಕಾರ ಒಂದು ಆದೇಸ ಹೊರಡಿಸಿತು. ಏನೆಂದರೆ ಫೀಸ್ ವರ್ಕ ಮಾಡಬಾರದು, ಲಾಸ್ ಆಗುತ್ತದೆ ಎಂದು. 1991-92ರಲ್ಲಿ ನೂರು ಕೋಟಿರೂಪಾಯಿಗಳು ಫೀಸ್ ವರ್ಕನಲ್ಲಿ ಖಾಲಿಯೂಯಿತು. 1992-93 ಮತ್ತು 94-95ರಲ್ಲಿ ಒಟ್ಟು 400ಕೋಟಿ ರೂಪಾಯಿಗಳು ಫೀಸ್ ವರ್ಕ್‌ಗೆ ಅಲ್ಲಿ ಖಾಲಿಯಾಯಿತು. ಈ ಬಗ್ಗೆ ಸರ್ಕಾರದ ಆದೇಶ ಹೊರಡಿಸಿದರೂ ನಿಲ್ಲಲಿಲ್ಲ. ಅಲ್ಲಿ ಕಾರ್ಪೊರೇಷನ್‌ಗಳು ಬಂದಿದ್ದಾರೆ. ಶಾಟ್ ಮಾಡುತ್ತಿದ್ದಾರೆ. ಹಣ ಇಲ್ಲ ಎಂದು ಆದರೂ ಕಾರ್ಪೊರೇಷನ್‌ನಲ್ಲಿ ಏನಾಗಿದೆಯೆಂದರೆ.....

ಅಧ್ಯಕ್ಷರು : ಈಗ ವಿಧಾನಸಭೆಗೆ ಸಂಬಂಧಿಸಿದ್ದನ್ನು ಹೇಳಿ ಕಾರ್ಪೊರೇಷನ್ ಬಿಟ್ಟು ಬಿಡಿ ಅಲ್ಲಿಂದ ಇಲ್ಲಿಗೆ ಬಂದು ಬಿಟ್ಟಿರಲ್ಲ.

ಶ್ರೀ ಎನ್. ರಾಜಣ್ಣ : ಅದು ಕೂಡ ಬರುತ್ತದೆ ಸರ್, ಹಣಕಾಸಿನ ಪರಿಸ್ಥಿತಿ...

ಶ್ರೀ ಸಿ. ಆರ್ ಸಗೀರ್ ಅಹಮದ್ : ರಾಜಣ್ಣನವರು ಹೇಳುವುದು ಏನೆಂದರೆ ಈ ಒಳಚರಂಡಿಯ ನೀರು ದೇವರ ಕೊಠಡಿಗಳಿಗೆ ಬರುತ್ತದೆಯೆಂದು ವಾದ ಮಾಡುವುದಕ್ಕೆ ಅವರು ಹೊರಟಿದ್ದಾರೆ.

ಶ್ರೀ ಎನ್. ರಾಜಣ್ಣ : ಒಳಚರಂಡಿ ವಿಚಾರಕ್ಕೆಈಗ ಬರುತ್ತೇನೆ. ಕಾರ್ಪೊರೇಷನ್‌ನಲ್ಲಿ ಕಳೆದ ವರ್ಷ ಅಂದರೆ 1996-97ನೇ ಸಾಲಿನ ಬಜೆಟ್ ಹಣ 240 ಕೋಟಿ ರೂಪಾಯಿಗಳು, ಆದರಲ್ಲಿ ಸಂಬಳಕ್ಕಾಗಿ1-2ಕೋಟಿ ರೂಪಾಯಿಗಳು, ಪೆನ್‌ಷನ್‌ಗೆ 14 ಕೋಟಿ ರೂಗಳು, ಬಟ್ಟೆಗಳಿಗೆ 125 ಲಕ್ಷ ರೂ.ಗಳು, ವಾಹನಗಳ ದುರಸ್ತಿ ಕಾರ್ಯಕ್ಕೆ 150 ಲಕ್ಷರೂ ಪೆಟ್ರೋಲಿಗೆ 300ಲಕ್ಷರೂ. ಹೀಗೆ 122 ಕೋಟಿರೂಪಾಯಿಗಳು ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆನ್ಸಸೆಗೆ ಹೋಗುತ್ತದೆ.

4.30 ಪಿ ಎಂ

2400ರಲ್ಲಿ 120 ಖಾಲಿ. ಅಮೇಲೆ ಉಳಿಯುವುದು 120ರಲ್ಲಿ ಆಗುವುದು ಐವತ್ತೇ ಕೋಟಿ 120 ರಲ್ಲಿ 60 ಕೋಟಿ ಕೆಲಸ ಆಗುವುದು. ಇನ್ನು 60 ಕೋಟಿ ಅಡ್ಜಸ್ಟ್‌ಮೆಂಟ್. ಎಲ್ಲಾ ಜೇಬುಗಳಿಗೆ ಅಡ್ಜಸ್ಟ್ ಆಗಿ ಕೆಲಸ ಏನು ಆಗುತ್ತಿದೆ ಎಂಬುದನ್ನು ಚಿಂತನೆ ಮಾಡಬೇಕು.

This is the position of the corporation for 1996-97 ಬೇಗ ಮುಗಿಸಿಬಿಡುತ್ತೇನೆ. ಒಂದು ಸಮಸ್ಯೆ ಬಗ್ಗೆ ಬಹಳ ದಿವಸಗಳಿಂದ ಹೇಳ ಬೇಕೆಂದು ಇದ್ದೇನೆ. ಮಾನ್ಯ ಮಂತ್ರಿಗಳಾದ ಶ್ರೀ ಅನಂತನಾಗ್‌ಅವರು ಬೆಂಗಳೂರು ನಗರ ಎಂ.ಎಲ್.ಎ.ಗಳ ಒಂದು ಮಿಟಿಂಗ್ ಅನ್ನು ಕರೆದಿದ್ದರು ; ಅದೇನೆಂದರೆ ನಗರದೊಳಗೆ ಇರತಕ್ಕಂಥ ಸ್ಲಾಟರ್ ಹೌಸ್‌ಗಳನ್ನು ಶಿಫ್ಟ್ ಮಾಡಬೇಕು ಎಂದು ಹೇಳಿ. ಅಲಸೂರು ಕೆರೆಯಲ್ಲಿ ಮಿನುಗಳು ಸಾಯ

ಬೇಕಾದರೆ ಇದೂ ಒಂದು ಮುಖ್ಯ ಕಾರಣ. ಟ್ಯಾನ ರೋಡ್ಸ ಸ್ಲಾಟರ್‌ಹೌಸ್ ಅಲಸೂರು ಕೆರೆಯಿಂದ ಎರಡು ಕಿ.ಮಿೂ. ದೂರದಲ್ಲಿದೆ. ಅಲ್ಲಿ ದಿವಸಕ್ಕೆ ಎರಡು ಸಾವಿರ ಪ್ರಾಣಿಗಳನ್ನು ಕಟ್ ಮಾಡುತ್ತಾರೆ the whole blood is flowing during rainy season to the lake ಬೇರೆ ಟೈಮ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರು ಅಲ್ಲಿ ಫಿಲ್ಟರ್ಸ್ ಹಾಕಿದ್ದಾರೆ. ಅಲ್ಲಿ ಫಿಲ್ಟರ್ಸ್ ಹಾಕಿದರೂ ಸಹ ಈ ಡೆಬರೀಸ್, ಪ್ಲಾಸ್ಟಿಕ್ ಆದೆಲ್ಲಾ ಬಂದು ಕುಳಿತುಕೊಂಡು ಅಲಸೂರು ಕೆರೆಗೆ ಬರುತ್ತಿತಿದೆ ಇದು ಬಹಳ ಮುಖ್ಯವಾದದ್ದು. ಒಂದು ದಿವಸ ನನಗೆ ಅರ್ಧಗಂಟೆ ಟೈಮ್ ಕೊಟ್ಟರೆ - I will tell you what is the benefit to be derivet from the rural based slaughter hous ರೂರಲ್ ಬೇಸ್ಡ್ ಸ್ಲಾಟರ್ ಹೌಸ್ ಮಾಡಿದರೆ ಫಾರ್ಮರ್ಸ್‌ಗೆ ಕರ್ನಾಟಕದಲ್ಲಿ ದಿನಕ್ಕೆ ಒಂದು ಕೋಟಿ ಮೆನ್ಯೂರ್‌ಗೆ ಅಧಾರ ಆಗುತತ್ತೆ. ಅದಕ್ಕೋಸ್ಕರ ಆದಷ್ಟು ತುರ್ತಾಗಿ ಇದನ್ನು ತೆಗೆದು ಕೊಂಡು ಈ ಸ್ಲಾಟರ್ ಹೌಸ್‌ನ್ನು ಸಿಟಿಯ ಒಳಗೆ ಇರುವುದನ್ನು ಸಿಟಿಯ ಹೊರಭಾಗದಲ್ಲಿ 30-40 ಕಿ.ಮಿ. ದೂರದಲ್ಲಿ ಹಳ್ಳಿಗಳಲ್ಲಿ ಸ್ಥಾಪನೆ ಮಾಡಿದರೆ ರೈತರಿಗೆ ಬಹಳ ಅನುಕೂಲ ವಾಗುತ್ತದೆ. ಮಟನ್, ಮಿಟ್ ಈಟರ್ಸ್ ಯಾರು ಇದ್ದಾರೆ, ಅವರಿಗೂ ಅನುಕೂಲವಾಗುತ್ತದೆ ಎಂದು ಹೇಳಿ ಈಗ ಡೆಲ್ಲಿಯ್ಲಲಿ ಸ್ಲಾಟರ್ ಹೌಸ್‌ನ್ನು ಶಿಫ್ಟ್ ಮಾಡಬೇಕೆಂದು ಹೇಳಿ ಹೈಕೋರ್ಟ್ ನಿಂದ ಆರ್ಡರ್ ಆಗಿದೆ.

ಅಧ್ಯಕ್ಷರು : ಅದು ಬೇಡ ಬಿಡಿ. ಆಗಿದ್ದರೆ ಇರುತ್ತದೆ.

SRI N. RAJANNA : The supreme court order has bannel the slaughter of animals, buffalos goats cows at the hearily the cout allowed slaughtr house only to kill two thouseand goats and sheeps tioll 30th June by which time it must be moved otside Delhi.... ಎಂದು ಇದೆ. ಈಗ ಇಲ್ಲಿ ಈಗಾಗಲೇ ಕೃಷ್ಣಭಟ್ ಅನ್ನುವರು ಕೋರ್ಟಿಗೆ ಹೋಗಿದ್ದಾರೆ. ಅವರು ಕೋರ್ಟಿಗೆ ಹೋಗಿ ಅದನ್ನು ಹೊರಗಡೆ ಹಾಕುವ ಮುಂಚೆ ನಾವೇ ಒಂದು ಪ್ಲಾನ್ ಮಾಡಿ ಈ ಸ್ಲಾಟರ್ ಹೌಸ್‌ಗೆ ಅನುಕೂಲವಾಗುವ ತರಹ ಮಾಡಬೇಕೆಂದು ಹೇಳಿ ನನ್ನ ಕಳಕಳಿಯ ಮನವಿ. ಇನ್ನು ಒಂದೇ ಒಂದು ವಿಷಯ ಹೇಳಿ, ಮುಗಿಸಿಬಿಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ರಾಜಣ್ಣನವವರ ಬಗ್ಗೆ ತಮಗೆ ಹೆಚ್ಚಿನ ಅಭಿಮಾನ ಅದಕ್ಕೇ ಅವರಿಗೆ ಜಾಸ್ತಿ ಹೊತ್ತು ಕೊಟ್ಟಿದ್ದೀರಿ.

ಅಧ್ಯಕ್ಷರು : ನನಗೆ ಎಲ್ಲಾ ಸದಸ್ಯರುಗಳು ಮೇಲೆ ಅಭಿಮಾನ್ಯ, ನಿಮಗೇನಾನು ಜಾಸ್ತಿ ಟೈಮ್ ಕೊಡುತ್ತಿದ್ದೇನೆ ಎಂದು ನನ್ನ ಮೇಲೆ ತಕರಾರು ಮಾಡಿದರೆ, ನೀವು ಹೀಗೆ ತಿರುಗಿಸುತ್ತಿದ್ದೀರಲ್ಲ.

ಶ್ರೀ ವಾಟಾಳ್ ನಾಗರಾಜ್: ನಾನು ಮಾತೇ ಆಡಿಲ್ಲ. ನಾನು ಮಾತೇ ಆಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಪಾಪ ಅವರು ಮಾತನಾಡಲಿ ಇಲಿ ಸ್ವಲ್ಪ ಲವಲವಿಕೆ ಇರಬೇಕಲ್ಲಾ? ರಾಜಣ್ಣನವರೇ ಈಗ ಕ್ಲೋಸ್ ಮಾಡಿಬಿಡಿ.

ಶ್ರೀ ಎನ್. ರಾಜಣ್ಣ : ಆಯಿತು ಸರ್. ಒಂದು ಪ್ಯಾರಾವರನ್ನು ನಾನು ಹುಡು ಕುತ್ತಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಗೋಲ್ಡನ್ ಜುಬಿಲಿ ಈಯರ್ ಆಫ್ ಇಂಡಿಪೆಂಡೆನ್ಸ್ ಮಾಡಬೇಕೆಂದು ಹೇಳಿ - ಒಂದು ಪ್ಯಾರಾ ಇದೆ. ಇದರಲ್ಲಿ ಇವತ್ತು ಯಾರಿಗೆ 500 ರೂಪಾಯಿ ಪೆನ್ ಷನ್ ಬರುತ್ತಿತ್ತು ಈ ಫ್ರಿಡಮ್ ಫೈಟರ್ಸ್ ಅವರಿಗೆ, ಅದನ್ನು 750 ರೂಪಾಯಿ ಮಾಡಿದ್ದೀರಿ. ಇದು ಫ್ರೀಡಮ್ ಫೈಟರ್ಸ್ ಅನುಕೂಲ ಮಾಡಿಕೊಟ್ಟಿರತಕ್ಕಂಥಾದ್ದು. ಇದು 15ನೇ ಪ್ಯಾರಾದಲ್ಲಿದೆ 500 ರಿಂದ 750 ರೂಪಾಯಿ ಎಂದು ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಓಲ್ಡ್ ಏಜ್ ಪೆನ್‌ಷನ್ - 75 ರೂಪಾಯಿ ಇದ್ದುದನ್ನು 100 ರೂಪಾಯಿ ಮಾಡಿದ್ದಾರೆ. ಎಷ್ಟು ಅನುಕೂಲ ಸ್ಸುಸರ್ಕಾರ ಮಾಡಿದೆ ಎಂದರೆ there is stability infinance, there is stability in budget; there is a stability in our Government . Mr. Devegowda has become the Prime Minister of India. We have produced two Prime Ministers from Karnataka. one Mr. Devegowda from Hassan and another from Rai Bareli she become Prime Minister from Chikkamagalur i. e late smt. Indira Gandhi ಚಿಕ್ಕ ಮಗಳೂರಿನಿಂದ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಕಾಂಟೆಸ್ಟ್ ಮಾಡಿ ಅಲ್ಲಿಂದ ಗೆದ್ದು ಪ್ರೈಮ್ ಮಿನಸ್ಟರ್ ಆದರು. ಮಿಸ್ಟರ್ ಸ್ಟೀಫನ್ ಅವರು ಗುರ್ಬಗದಿಂದ ಗೆದ್ದು ಮಂತ್ರಿಯಾದರು. ಇಲ್ಲಿ ಮಣ್ಣಿನ ಮಗ ಕಷ್ಟಪಟ್ಟು 40 ವರ್ಷಗಳಿಂದ ರಾಜಕೀಯದಲ್ಲಿ ಅನುಭವ ಇರುವ ಮಾನ್ಯ ದೇವೇಗೌಡರು ಎಂ.ಎಲ್.ಎ. ಆಗಿದ್ದವರು ಎಂ.ಪಿ. ಆಗಿದ್ದವರು, ಮುಖ್ಯಮಂತ್ರಿಯಾಗಿದ್ದವರು 16 ಜನ ಎಂ.ಪಿ.ಗಳನ್ನು ಡೆಲ್ಲಿಗೆ ಕರೆದುಕೊಂಡು ಹೋಗಿ ದೇಶದ 13 ಪಾರ್ಟಿಗಳು ಸೇರಿ ನೀವೇ ಪ್ರಧಾನಮಂತ್ರಿ ಆಗಬೇಕು ಎಂದು ಹೇಳಿ ಅವರನ್ನು ಪ್ರಧಾನಮಂತ್ರಿಯಾಗಿ ಮಾಡಿಟ್ಟಿದ್ದರೆ ನೀವುಕಾಲು ಎಳೆಯುತ್ತಿದ್ದೀರಲ್ಲಾ ಸ್ವಾಮಿ? ಆದಕ್ಕೋಸ್ಕರ ಕಾಲು ಎಳೆಯುವುದನ್ನು ಬಿಡೋಣ.

ಶ್ರೀ ಸಿ. ಭೈರೇಗೌಡ : ಮಣ್ಣಿನ ಮಗನ ಬಗ್ಗೆ ಸಗಣಿಮಗ ಅವರು ಎಷ್ಟು ಅನುಕಂಪ ತೋರಿಸುತ್ತಾಇದ್ದಾರೆ. ಬಹಳ ಸಂತೋಷ.

ಶ್ರೀ ಎನ್. ರಾಜಣ್ಣ : ಥ್ಯಾಂಕ್ಯೂ ಸರ್. ಅಲ್ಲ ಏಕೆ ಹೇಳುತ್ತಿದ್ದೇನೆ ಅಂದರೆ, ರಾಯಬರೇಲಿಯಲ್ಲಿ ಹುಟ್ಟಿದಂಥ ಮಗಳನ್ನು ತೆಗೆದು ಕೊಂಡು ಬಂದು ನಾವುಚಿಕ್ಕಮಗಳೂರಿನಿಂದ ಎಂ.ಪಿ.ಯಾಗಿ ಮಾಡಿ ಅವರು ಪ್ರಧಾನಮಂತ್ರಿಗಳಾದರು. ಆದರೆ ಇಲ್ಲೇ ಹಾಸನದಲ್ಲಿ ಹುಟ್ಟಿದ ಒಬ್ಬ ಮಣ್ಣಿನ ಮಗ, ಜಿಲ್ಲಾ ಪರಿಷತ್ ಮೆಂಬರ್ಆಗಿ, ಎಂ.ಎಲ್.ಎ ಆಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಒಬ್ಬ ಎಂ.ಬಿ. ಯಾಗಿ ಇವತ್ತು ಪ್ರಧಾನ ಮಂತ್ರಿಯಾಗಿದ್ದಾರೆ ಇದಾದ ಮೇಲೆ ನಮ್ಮ ಕರ್ನಾಟಕಕ್ಕೆ ಎಷ್ಟು ಅನುಕೂಲ ಆಯಿತು ಎಂದರೆ, ಪ್ಯಾರಾ ಇದೆ. ಅದನ್ನು ಹೇಳಬೇಕು ಎಂದರೆ ನೀವು ಟೈಮ್ ಕೊಡುವುದಿಲ್ಲ. ಅದು ಸಕ್ಕರೆಗೆ ಇರಬಹುದು, ನೀರಾವರಿ ಇರಬಹುದು, ಕಬ್ಬಿನ ಕೃಷಿಗೆ ಇರಬಹುದು, ಗೊಬ್ಬರಕ್ಕೆ ಇರಬಹದು ಇಷ್ಟೆಲ್ಲಾ ಅನುಕೂಲಗಳನ್ನು ತೆಗೆದುಕೊಂಡು ಇವತ್ತು international water problem has been solved in west Bengal ಇವತ್ತು ಅವರು ರಷ್ಯಾದಲ್ಲಿ ಇದ್ದಾರೆ Mr. is so amicable with other countries, we are solving major problems of the country with friendship and co-operation. ಇವತ್ತು ಏನು ಹೇಳಿದ್ದಾರೆ ? ರಷ್ಯಾದವರು ಇನ್ನು ಮುಂದೆ ಪಾಕೀಸ್ತಾನ್‌ಗೆ ಆರ್ಮ್ಸ್ ಕೊಡುವುದಿಲ್ಲ ಎಂದು ಹೇಳಿದ್ದಾರೆ. That shows the efficiency of our Prime Minister Mr M. D. Devegowda he has visited kashmir three times, several times. The country is in peaceful way. The major problems are being solved. It is your duty - Congress leaders must give protection to Devegowda Government so that scams which are suffering. it can be avoided and they will also be safeguarded.

ಅಧ್ಯಕ್ಷರೇ, ತಾವು ನನಗೆ 55 ನಿಮಿಷ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು ನೀವುಗಳು ನನ್ನ ಮೇಲೆಯೆ ಅಲ್ಲದೆ, ಎಲ್ಲರ ಮೇಲೂ ಪ್ರೀತಿ ವಿಶ್ವಾಸವನ್ನು ಇಟ್ಟಿದ್ದೀರಿ. Because you are equal to the God. You are sitting in the godly place, where there is a balance at the top Balance indicates justice.

ಆ ಜಸ್ಟೀಸ್ ಎಲ್ಲಿದೆಯೋ ಅಲ್ಲಿಯೇ ನ್ಯಾಯ ಮತ್ತು ಧರ್ಮ ಇದೆ. Hence you are equal to the God. we have to respect your words. hence. I must be thankful to you and one and all.

MR. SPEAKER : The House is thankful to you for the valid advice given. I will now request Mr. Zulfikar Hashme to speak.

+ ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ(ಬೀದರ್) : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ 5 ನಿಮಿಷ ಸಭಾಧ್ಯಕ್ಷರೇ, ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. 5 ನಿಮಿಷ ಮಾತನಾಡಲು ತಮ್ಮಿಂದ ಅವಕಾಶ ತೆಗೆದುಕೊಂಡಿದ್ದೇನೆ. ಕರ್ನಾಟಕ ಸರ್ಕಾರ ದಲಿತ ಮತ್ತು ಹಿಂದುಳಿದ ಅಲ್ಪಸಂಖ್ಯಾತರ ಶಕ್ತಿಯ ಮೇಲೆ ಬಂದಿರುತ್ತದೆ. ಇವರ ಈ ಬಜೆಟ್ ನೋಡಿದಮೇಲೆ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಬಗ್ಗೆ ನೋಡಿದ ಮೇಲೆ, ಬಜೆಟ್‌ನಲ್ಲಿ ಏನೂ ಕಾಣುತ್ತಾ ಇಲ್ಲ. ಇಲ್ಲಿ ಮಾನ್ಯ ಎಲ್ಲಾ ಶಾಸಕರು ಎಲ್ಲಾ ಸಚಿವರೂ ಇದ್ದಾರೆ. ಅಲ್ಪಸಂಖ್ಯಾತರಿಗೆ ಕರ್ನಾಟಕ ಸರ್ಕಾರ 10 ಕೋಟಿ ಹಣವನ್ನು ಇಟ್ಟಿದ್ದೇವೆ, ಅದೂ National Minorities Development Financial

ಕಾರ್ಪೊರೇಷನ್‌ನಿಂದ ಲೋನ್ ಕೊಡುತ್ತೇವೆಂದು ಹೇಳಿದ್ದಾರೆ. ಅವರು 10 ಕೋಟಿ ಕೊಟ್ಟಿದ್ದಾರೆ, ಅದೂ ಲೋನ್ ಬಜೆಟ್ ಕೊಟ್ಟಿದ್ದಾರೆ. National Minorities Development Corporation ಇಡೀ ಎಲ್ಲಾ ಇಲಾಖೆಯಲ್ಲಿ ನೋಡಿದರೂ, ಮೈನಾರಿಟೀಸ್‌ಗೆ ಒಂದು ಸಿಂಗಲ್ ನಯಪೈಸೆ ಈ ಸರ್ಕಾರ ಕೊಡುತ್ತಾ ಇಲ್ಲ. ನಾನು ಈ ಸದನದ ಸದಸ್ಯ ಇದ್ದೇನೆ. ಮೆಜಾರಿಟಿ ಅಲ್ಪಸಂಖ್ಯಾತರ ಮತ್ತು ಎಕಾಮಿಕಲಿ ಬ್ಯಾಕ್‌ವರ್ಡ್ ಅಲ್ಪಸಂಖ್ಯಾತರ ಜಿಲ್ಲೆಯಿಂದ ನಾನು ಆಯ್ಕೆಯಾಗಿ ಬಂದಿದ್ದೇನೆ. ಇಂತಹ ಸದನದಲ್ಲಿ ನಾನು ಕುಳಿತು ನನಗೆ ತುಂಬಾ ನೋವು ಬರುತ್ತಾ ಇದೆ. ಒಟ್ಟು ಬಜೆಟ್‌ನಲ್ಲಿ ಈ ಸರ್ಕಾರ ಒಂದು ನಯಾಪೈಸೆಯನ್ನು ಈ ಅಲ್ಪಸಂಖ್ಯಾತರಿಗೆ ಕೊಡುತ್ತಾ ಇಲ್ಲ.

ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು. ಹಿಂದಿನ ಸರ್ಕಾರ ಏನು ಈ ಅಲ್ಪಸಂಖ್ಯಾತರಿಗೆ ರಿಸರ್ವೇಷನ್ ಕೊಟ್ಟಿದೆ, ಅದನ್ನು ಈ ಸರ್ಕಾರ ಇಂಪ್ಲಿಮೆಂಟ್ ಮಾಡುತ್ತಾ ಇಲ್ಲ. ಬಜೆಟ್‌ನಲ್ಲಿ ವಕ್ಫ್‌ಪ್ರಾಪರ್ಟಿ, ವಕ್ಫ್ ಡಿಪಾರ್ಟ್‌ಮೆಂಟ್, ಮೈನಾರಿಟಿ ಕಮೀಷನ್ ಎಂದು ಎರಡು ಡಿಪಾರ್ಟ್‌ಮೆಂಟ್ ಇದೆ. ಇವು ಅಲ್ಪಸಂಖ್ಯಾತರಿಗೆ ನೇರವಾದ ಸಂಬಂಧ ಇದೆ. ಈ ವಕ್ಫ್ ಮತ್ತು ಮೈನಾರಿಟೀಸ್ ಕಮೀಷನ್‌ಗೆ ಬಜೆಟ್‌ನಲ್ಲಿ ಒಂದು ನಯಾಪೈಸೆ ಕೊಡುತ್ತಾ ಇಲ್ಲ. ಮತ್ತೆ ಏನಾಗಿದೆ, ಹಿಂದಿನ ಸರ್ಕಾರ, ಅದು ಯಾವುದೇ ಸರ್ಕಾರ ಇರಲಿ, ಮೈನಾರಿಟೀಸ್ ಕಮೀಷನ್‌ಗೆ ಏನು ಪವರ್ಸ್ ಕೊಟ್ಟಿದೆ, ಅದು ಈ ಸರ್ಕಾರದಲ್ಲಿ ಎಲ್ಲಾ ಕಡಿಮೆಯಾಗುತ್ತಾ ಹೋಗುತ್ತಿದೆ. ಮತ್ತೆ ಈ ವಕ್ಫ್ ಎನ್ನುತಕ್ಕಂಥ ಡಿಪಾರ್ಟ್‌ಮೆಂಟ್ ಇದೆ. ಅದರಿಂದ ನಾವು ಅಭಿವೃದ್ಧಿಯಾಗಬಹುದು. ಆದರೆ,

ಈ ವಕ್ಫ್‌ಗೆ ಒಂದು ನಯಾಪೈಸೆ ಕೊಡುತ್ತಾ ಇಲ್ಲ. ಮತ್ತೆ ಏನಾಗುತ್ತಿದೆ, ಈ ವಕ್ಫ್ ಪ್ರಾಪರ್ಟಿ, ಸರ್ಕಾರಿ ಅಧಿಕಾರಿಗಳಿಂದ ಎನಕ್ರೋಚ್‌ಮೆಂಟ್ ಆಗುತ್ತಾ ಇದೆ. ಉದಾಹರಣೆಗಾಗಿ, ತಾವು ಮೈಸೂರು ಹಾರ್ಸ್ ಮಸೀದಿ ನೋಡಿ.ಅದು ವಕ್ಫ್ ಪ್ರಾಪರ್ಟಿ ಎಂದು ರೆಕಾರ್ಡ್‌ನಲ್ಲಿ ಇದೆ. ಅಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟಿನವರು ಎನ್‌ಕ್ರೋಚ್ ಮಾಡಿ, ಬಿಲ್ಡಿಂಗ್ ಮಾಡುತ್ತಿದ್ದಾರೆ. ಅದರ ಸಲುವಾಗಿ ತಮ್ಮ ಮೂಲಕ ಸರ್ಕಾರಕ್ಕೆ ನಮ್ಮ ವಿನಂತಿ ಇದೆ. ಅಲ್ಲಿ ನಮ್ಮ ಪ್ರಾಪರ್ಟಿ ಏನಿದೆ, ಅದನ್ನು ತಾವು ಸೇಫ್‌ಗಾರ್ಡ್ ಮಾಡಬೇಕೆಂದು ಈ ಸರ್ಕಾರಕ್ಕೆ ನಮ್ಮ ವಿನಂತಿ ಇದೆ. ಹಿಂದಿನ ಸರ್ಕಾರದವರು ಮೈನಾರಿಟೀಸ್ ಕಮಿಷನ್‌ನಿಂದ ಒಂದು ಸರ್ವೆ ಮಾಡಿದರು. ಅದು ಕೆ.ರೆಹಮಾನ್ ಕಮೀಷನ್. ಅದು ಎಲ್ಲಾ ಶಿಫಾರಸ್ಸನ್ನು ಸರ್ಕಾರಕ್ಕೆ ಕೊಟ್ಟಿದೆ. ಆಗ, ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ವೀರಪ್ಪ ಮೊಯ್ಲಿಯವರ ಸರ್ಕಾರ ಇತ್ತು. ಅವರು 4 ಪರ್ಸೆಂಟ್ ರಿಸರ್ವೇಷನ್ ಕೊಟ್ಟಿದ್ದರು. ಈ ಸರ್ಕಾರ ಬಂದ ಮೇಲೆ ಆ 4 ಪರ್ಸೆಂಟ್ ರಿಸವೇಷನ್ ಇಂಪ್ಲಿಮೆಂಟ್ ಆಗುತ್ತಾ ಇಲ್ಲ. ಉದಾಹರಣೆಗಾಗಿ ಕೆ.ಎಸ್.ಆರ್.ಟಿ.ಸಿ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ, ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಸರ್ವೆ ರಿಪೋರ್ಟ್ ಇದೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಐ.ಎ.ಎಸ್ ಮತ್ತು ಐ.ಪಿ.ಎಸ್.ಆದ ಮೈನಾರಿಟೀಸ್‌ನವರು, ಕ್ವಾಲಿಫೈ ಆದವರು ಇಲ್ಲವೆಂದು ಹೇಳುತ್ತಾರೆ. ಕೆ.ಎಸ್.ಆರ್.ಟಿ.ಸಿ.ನಲ್ಲಿ ಕಂಡಕ್ಟರ್ ಮತ್ತು ಡ್ರೈವರುಗಳಿಗೆ 4 ಪರ್ಸೆಂಟ್ ರಿಸವೇಷನ್ ಕೊಡುತ್ತಾ ಇಲ್ಲ. ಕಂಡಕ್ಟರ್ ಮತ್ತು ಡ್ರೈವರುಗಳಿಗೆ ಎಜುಕೇಷನ್ ಇಲ್ಲವೆಂದು ಹೇಳಿದರು. ಅದರ ಸಲುವಾಗಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಯಾವ ರೀತಿ ಹಿಂದಿನ ಸರ್ಕಾರ ಅಲ್ಪಸಂಖ್ಯಾತರಿಗೆ 5 ವಸತಿ ಶಾಲೆಗಳನ್ನು ಕೊಟ್ಟಿದ್ದರು. ಆ 5 ವಸತಿ ಶಾಲೆಗಳ ಬಗ್ಗೆ ಈಗೇನು ಪರಿಸ್ಥಿತಿ ಇದೆ. ಅಲ್ಲಿ ಟೀಚರ್ಸ್‌ಗೆ ಇದುವರೆಗೆ ಗ್ರಾಂಟ್ ಇಲ್ಲ, ಅಲ್ಲಿ ಕಟ್ಟಡ ಇಲ್ಲ, ಹೀಗಾಗಿ, ವಸತಿ ಶಾಲೆಗಳು ನಡೆಯುತ್ತಾ ಇವೆ. ವಸತಿ ಶಾಲೆಗಳನ್ನು ಕೊಟ್ಟಿದೆ, ಆದರೆ, ಅದಕ್ಕೆ ತಕ್ಕಂತಹ ಸೌಲಭ್ಯವನ್ನು ಸರ್ಕಾರ ಕೊಡುತ್ತಾ ಇಲ್ಲ. ಮತ್ತೆ ಈ ವರ್ಷವೂ ಅಂದರೆ ಯಾವಾಗ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿ ಇದ್ದಾಗ ಗುಲ್ಬರ್ಗಾಕ್ಕೆ ಬಂದಿದ್ದರು. ಆಗ ಅವರು ಪ್ರಕಟಣೆ ಮಾಡಿದರು. ಬರುವ ವರ್ಷ 10 ವಸತಿ ಶಾಲೆಗಳನ್ನು ಈ ಅಲ್ಪಸಂಖ್ಯಾತರಿಗೆ ಕೊಡುತ್ತೇವೆಂದು ಅಲ್ಲಿನ ಸಮಾರಂಭದಲ್ಲಿ ಹೇಳಿದರು. ಆದರೆ, ಈ ವರ್ಷ ಒಂದು ಹಾಸ್ಟಲ್ ಕೊಡುತ್ತಾ ಇಲ್ಲ. ಇದು ಏಕೆ ಹೀಗೆ ಆಗಿದೆ.? ತಾವೆಲ್ಲರೂ ಅಲ್ಪಸಂಖ್ಯಾತರ ಓಟಿನಿಂದ ಬಂದಿದ್ದೀರಿ. ಅಲ್ಪಸಂಖ್ಯಾತರು ನಮಗೆ ಎಷ್ಟು ಓಟು ಕೊಟ್ಟಿದ್ದಾರೆ, ಅಷ್ಟು ನಿಮಗೂ ಕೊಟ್ಟಿದ್ದಾರೆ.ಮತ್ತೆ ತಮ್ಮಲ್ಲಿ ಏನಿದೆ ಎಂದರೆ, ಜನತಾ ದಳದವರಿಗೆ ಅಲ್ಪಸಂಖ್ಯಾತರನ್ನು ಬಿಟ್ಟು ಹೋಗುವುದಿಲ್ಲವೆಂದು ತಮ್ಮಲ್ಲಿ ಗೌರವ ಇದೆ. ಅದು ಒಂದೇ ಕಾರಣಕ್ಕೆ ಅಲ್ಪಸಂಖ್ಯಾತರು ನಿಮಗೆ ಓಟು ಕೊಟ್ಟಿದ್ದಾರೆ. 1992ರ ಡಿಸೆಂಬರ್‌ನಲ್ಲಿ ಏನು

ಘಟನೆಯಾಯಿತು, ಅದಕ್ಕೆ ವಿರೋಧವಾಗಿ, ನಿಮಗೆ ಓಟು ಕೊಟ್ಟಿದ್ದಾರೆ. ಏಕೆಂದರೆ, ನಾನು ಒಂದು ಟೈಮಿನಲ್ಲಿ ಜನತಾ ದಳದ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಆಗ ಜನತಾದಳ ಪವರ್‌ನಲ್ಲಿ ಇರಲಿಲ್ಲ. ತಾವು ಜನತಾದಳದ ಸಲುವಾಗಿ ಜೈಲಿಗೂ ಹೋಗಿದ್ದೆವು. ಸನ್ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ನಾನು 4 ವರ್ಷಗಳ ಕಾಲ ಯುವ ಜನತಾದಳದಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನಿಮ್ಮ ಸಮಾಜವಾದ ಏನಿತ್ತು, ಮತ್ತು ನೀವು ಗಾಂಧಿವಾದಿಗಳು. ಲೋಹಿಯಾವಾದಿಗಳು ನೀವು. ನಿಮ್ಮ ಯಾವುದೇ ಮಾತಿನಲ್ಲಿ ಭಾಷಣದಲ್ಲಿ, ಚುನಾವಣೆಯಲ್ಲಿ ಅಥವಾ ಎಲ್ಲಿಯಾದರೂ ನೋಡಿ. ಅಲ್ಪಸಂಖ್ಯಾತರಿಗಾಗಿ, ಹಿಂದುಳಿದವರಿಗಾಗಿ ಮತ್ತು ದಲಿತರಿಗಾಗಿ ಈ ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದೀರಿ. ಅದರೆ, ಈಗ ತಾವೇನು ಮಾಡುತ್ತಿದ್ದೀರಿ.ನಿಮ್ಮ ಎರಡು ವರ್ಷದ ಅಧಿಕಾರ ಅವಧಿ ಮುಕ್ತಾಯವಾಗುತ್ತಾ ಇದೆ. ನಿಮ್ಮಲ್ಲಿ ಸೀರಿಯಸ್‌ನೆಸ್ ಇದೆ. ನೀವು ಬಂದು ಎರಡು ವರ್ಷಗಳಾಯಿತು, ಈ ಅಲ್ಪಸಂಖ್ಯಾತರಿಗೆ ನ್ಯಾಯವನ್ನು ತಾವು ಒದಗಿಸಿಲ್ಲ ಈ ರೀತಿ ಏಕೆಆಯಿತು? ಅದರೂ ಕೂಡ ಅಲ್ಪಸಂಖ್ಯಾತರು ಎಲ್ಲರ ಮೇಲೂ ವಿಶ್ವಾಸ ಮಾಡಿದರು. ಜನತಾದಳಕ್ಕೆ ಈ ಅಲ್ಪಸಂಖ್ಯಾತರು ಏಕೆ ಓಟು ಕೊಟ್ಟಿದ್ದರು ಎಂದರೆ, ಇವರು ನಮ್ಮನ್ನು ಉದ್ಧಾರ ಮಾಡುತ್ತಾರೆಂದು ಕೊಟ್ಟಿದ್ದರು. ಆದರೆ, ಇವರು ಈಗ ಏನು ಮಾಡುತ್ತಿದ್ದಾರೆ. ಹಿಂದಿನ ಸರ್ಕಾರ ನಮಗೆ ಏನೇನು ರಿಸರ್ವೇಷನ್ ಕೊಟ್ಟಿತ್ತು, ಏನೇನು ಸೌಲಭ್ಯ ಕೊಟ್ಟಿತ್ತು, ಅದನ್ನು ತಾವು ಕಿತ್ತುಹಾಕುತ್ತಿದ್ದೀರಿ. ನಮ್ಮಲ್ಲಿ ಉದಾಹರಣೆ ಇದೆ. ನಾನು ಹತ್ತುಬಾರಿ ತಮಗೆ ಮನವಿ ಕೊಟ್ಟಿದ್ದೇನೆ. ನಾವು ಇದರಲ್ಲಿ ರಾಜಕೀಯ ಮಾಡಬಾರದು. ನಾನು ಹೊರಗಡೆ ಹೇಳಬಾರದೆಂದು, ಪರ್ಸನಲ್ ಆಗಿ ಯಾವ ಯಾವ ಡಿಪಾರ್ಟ್‌ಮೆಂಟಿನಲ್ಲಿ ಅಲ್ಪಸಂಖ್ಯಾತರಿಗೆ ಅನ್ಯಾಯವಾಗಿದೆ ಎಂಬ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಆದರೆ, ಇವರಿಗೆ ಆ ಸೀರಿಯಸ್‌ನೆಸ್ ಇಲ್ಲ. ಜೊತೆಗೆ, ತಾವು ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಅನ್ಯಾಯವಾಗಿದೆ ಎಂಬ ಬಗ್ಗೆ ಸಂಬಂಧಟ್ಟ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಅದರೆ, ಇವರಿಗೆ ಆ ಸೀರಿಯಸ್‌ನೆಸ್ ಇಲ್ಲ. ಜೊತೆಗೆ, ತಾವು ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗಾಗಿ ಒಬ್ಬರು ಸಚಿವರನ್ನೂ ಮಾಡಿದ್ದೀರಿ.ಆ ಸಚಿವರನ್ನು ಏತಕ್ಕೆ ಮಾಡಿದ್ದೀರಿ.? ನೀವು ಮೈನಾರಿಟಿ ಕಮೀಷನ್ ಮಾಡಿದ್ದೀರಿ. ಏತಕ್ಕಾಗಿ ಆ ಕೆ. ರೆಹಮಾನ್‌ಖಾನ್ ರಿಪೋರ್ಟ್? ನೀವು ಮೈನಾರಿಟಿ ಕಮೀಷನ್ ಮಾಡಿದ್ದೀರಿ. ಏತಕ್ಕಾಗಿ ಆ ಕೆ. ರೆಹಮಾನ್‌ಖಾನ್ ರಿಪೋರ್ಟ್? ನೀವು ಮೈನಾರಿಟಿ ಕಮೀಷನ್ ಮಾಡಿದ್ದೀರಿ. ಏತಕ್ಕಾಗಿ ಆ ಕೆ. ರೆಹಮಾನ್‌ಖಾನ್ ರಿಪೋರ್ಟ್? ಮಾನ್ಯ ವೀರಪ್ಪ ಮೊಯ್ಲಿ ಸರ್ಕಾರದಲ್ಲಿ ಸರ್ವೆ ಆಗಿದೆ, ತಾವು ಇದುವರೆಗೂ ಅದನ್ನು ಪ್ರಿಂಟ್ ಮಾಡಿಸಿಲ್ಲ ಗೋಥವಾಲ ಆಯೋಗದ ವರದಿ ಮತ್ತು ಅದರ ಶಿಫಾರಸ್ಸುಗಳು ನಿಮ್ಮಲ್ಲಿ ಇದೆ. ಈ ಅಲ್ಪಸಂಖ್ಯಾತರಿಗೆ ಏನು ಪರಿಸ್ಥಿತಿ ಇದೆ.

ಅವರ ಎಜುಕೇಷನ್ ವಿಚಾರದಲ್ಲಿ ಏನು ಪರಿಸ್ಥಿತಿ ಇದೆ. ಈ ಎಲ್ಲಾ ವಿಚಾರಗಳ ಬಗ್ಗೆ ನಿಮ್ಮಲ್ಲಿ ಸರ್ವೆ ಇದೆ. ಮಾನ್ಯ ರೆಹಮಾನಖಾನ್ ಕಮೀಷನ್ ರಿಪೋರ್ಟ್ ಮತ್ತು ಗೋಧವಾಲಾ ಕಮೀಷನ್ ರಿಪೋರ್ಟ್ ತಾವು ನೋಡಿ ಇವರ ಅಭಿವೃದ್ಧಿಗಾಗಿ ನಿಮ್ಮಲ್ಲಿ ಏನು ಸ್ಕೀಮ್ಸ್ ಇವೆ.? ಈ ಅಲ್ಪಸಂಖ್ಯಾತರಿಗಾಗಿ ನಿಮ್ಮಲ್ಲಿ ಏನೇನು ಸ್ಕೀಮ್ಸ್ ಇವೆ. ? ನೀವು ಎಲ್ಲಾ ಕಡೆ ಕೋಡುತ್ತಿದ್ದೀರಿ. ಆದರೆ ನೀವು ಅಲ್ಪ ಸಂಖ್ಯಾತರಿಗೆ ಮಾತ್ರ ಈ ಸರ್ಕಾರ ಅನ್ಯಾಯ ಮಾಡುತ್ತಾ ಇದೆ. ಅದರ ಸಲುವಾಗಿ, ನಾನು ತಮ್ಮ ಮೂಲಕ ಈ ಸರ್ಕಾರವನ್ನು ವಿನಂತಿಸುತ್ತೇನೆ. ಏನು ಈ ಸಮಾಜ ಕಲ್ಯಾಣ ಇಲಾಖೆ ಇದೆ. ಅವರಿಗೆ ಮನೆ ಸಲುವಾಗಿ ಎಷ್ಟು ಬಜೆಟ್ ಇದೆ, ಅವರು ಎಷ್ಟು ಜನ ಇದ್ದಾರೆಂದರೆ, ನನ್ನ ಕ್ಷೇತ್ರದಲ್ಲಿ 45 ಸಾವಿರ ಜನ ಅಲ್ಪಸಂಖ್ಯಾತರಿದ್ದಾರೆ. 44 ಸಾವಿರ ಜನರಿಗೆ ಅಲ್ಲಿ ಮನೆ ಇಲ್ಲ. ತಮ್ಮಲ್ಲಿ ಯಾವ ಸ್ಕೀಮ್ ಇದೆ. ತಾವೇನೋ ಹೇಳುತ್ತೀರಿ. ಅದರ ಸಲುವಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ಮಾಡುತ್ತೀರಿ ಎಂದಲ್ಲ, ಬಿಹಾರದಲ್ಲಿ ನಿಮ್ಮದೇ ಸರ್ಕಾರ ಇದೆ. ಈ ವಸತಿ ಶಾಲೆಗಳ ಬಗ್ಗೆ ನಾನು ಪದೇ ಪದೇ ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರು ಇಲ್ಲಿ ಮುಖ್ಯಮಂತ್ರಿಯಾಗಿ ಹಾಲಿ ದೇಶದ ಪ್ರಧಾನಿಯಾಗಿದ್ದಾರೆ. ಅವರ ಬಗ್ಗೆ ನಮಗೂ ಗೌರವ ಇದೆ. ಆದ್ದರಿಂದ, ಅವರ ನೇತೃತ್ವದಲ್ಲಿ ನಾನೂ ಒಬ್ಬ ಶಾಸಕನಾಗಿ, ಅವರಿಗೆ ಈ ಕೆಲಸ ವಹಿಸಿದ್ದೇವೆ. ಈಗ ಅವರು ಪ್ರಧಾನಿಯಾಗಿದ್ದಾರೆ. ನಮಗೆ ಬಹಳ ಗೌರವ ಇದೆ. ಆದ್ದರಿಂದ ಸನ್ಮಾನ್ಯ ದೇವೇಗೌಡರು ಈ ಸದನದಲ್ಲಿ ಹಿಂದೆ ಏನೇನು ಭರವಸೆ ಕೊಟ್ಟಿದ್ದಾರೆ, ಅವುಗಳನ್ನು ಈಡೇರಿಸಬೇಕು. ಸನ್ಮಾನ್ಯ ಜೆ. ಹೆಚ್. ಪಾಟೀಲರ ಬಗ್ಗೆಯೂ ನನಗೆ ಗೌರವ ಇದೆ. ಅವರು ಸಮಾಜವಾದಿಗಳು.ಈ ಅಲ್ಪಸಂಖ್ಯಾತರ ಬಗ್ಗೆ ಏನು ಸಚಿವರು ಇದ್ದಾರೆ, ಅವರು ಸಲಹೆ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ? ಏನು ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಇದೆಯೋ ಅಥವಾ ಇಲ್ಲವೋ...

ಮಾನ್ಯ ಸಭಾಧ್ಯಕ್ಷರೇ, ಈಗ ಮುಖ್ಯಮಂತ್ರಿಗಳು ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲ ಅವರು ಒಂದು ಸಮಯದಲ್ಲಿ ಹೋರಾಟ ಮಾಡಿದ್ದಾರೆ. ಅವರ ಜೊತೆಯಲ್ಲಿ ನಾವು ಕೆಲಸ ಮಾಡಿದ್ದೇವೆ. ಅವರ ಬಗ್ಗೆ ನಮಗೆ ಗೌರವ ಇದೆ. ಮಾನ್ಯ ಸಿದ್ಧರಾಮಯ್ಯನವರು ದಲಿತ ಅಲ್ಪಸಂಖ್ಯಾತರು ಮತ್ತು ಹಿಂದುಳಿದವರ್ಗದ ನಾಯಕರು. ಅವರು ಇವತ್ತು ಉಪ-ಮುಖ್ಯಮಂತ್ರಿಗಳಾಗಿದ್ದಾರೆ ಹಣಕಾಸಿನ ಮಂತ್ರಿಗಳಾದ್ದಾರೆ ಅವರ ಕಾಲದಲ್ಲಿ ಅಲ್ಪಸಂಖ್ಯಾತರಿಗೆ ಇವತ್ತು ದ್ರೋಹ ಆಗುತ್ತಿದೆ. ಆದ್ದರಿಂದ ನಾನು ಸರ್ಕಾರದಲ್ಲಿ ಬೇಡಿಕೆ ಮಾಡುವುದು ಇಷ್ಟೇ ಈಗ ತಾವು ಅಧಿಕಾರಕ್ಕೆ ಬಂದು ಎರಡು ವರ್ಷ ಆಗಿದೆ ಆದರೆ ಏನೂ ಅಭಿವೃದ್ಧಿ ಮಾಡಿಲ್ಲ. ತಮಗೆ ಇನ್ನೂ ಅವಕಾಶ ಇದೆ. ಅಲ್ಪಸಂಖ್ಯಾತರಿಗೆ 5 ವಸತಿ ಶಾಲೆಗಳನ್ನು

ಕೊಟ್ಟಿದ್ದರು. ಆ ಬಗ್ಗೆ ತಾವು ಇಡೀ ರಾಷ್ಟ್ರದಲ್ಲಿ ಪ್ರಚಾರ ಮಾಡಿದಿರಿ. ಕರ್ನಾಟಕ ರಾಜ್ಯದಲ್ಲಿ ನಡೆದ ಕಾರ್ಪೊರೇಷನ್ಸ್ ಚುನಾವಣೆಗಳಲ್ಲಿ ಈ 5 ವಸತಿ ಶಾಲೆಗಳ ಮೇಲೆ ಗೆದ್ದು ಬಂದಿರಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯಅಧ್ಯಕ್ಷರೇ ಅವರು ಹೇಳುವಂತಹ ಮಾತನ್ನು ನಾನು ಏಕೆ ಈ ವಿಚಾರ ಪ್ರಸ್ತಾಪ ಮಾಡಬೇಕು ಎಂದುಅನಿಸುತ್ತದೆ. ಅಂದರೆ ಮತೀಯ ಅಲ್ಪಸಂಖ್ಯಾತರ ಮನವನ್ನು ಒಲಿಸುವುದಕ್ಕಾಗಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ವಾಗ್ದಾನ ಕೊಟ್ಟಿತ್ತು. ಈಗ ಅವರು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿರುವಂತಹ ಸಂದರ್ಭದಲ್ಲಿ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುವಂತಹ ಮಂತ್ರಿಗಳು ಇಲ್ಲಿ ಇದ್ದಾರೆಯೇ ಅಥವಾ ಉಪ ಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರ ಕೊಡುತ್ತಾರೆಯೇ ? ನಾನು ಇಲ್ಲಿ ಒಂದು ಪ್ರಶ್ನೆಯನ್ನು ಹಾಕಿ ಕೇಳಿದ್ದಕ್ಕೆ ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ. ಎರಡೂವರೆ ವರ್ಷ ಆಗಿದೆ ಈ ಸರ್ಕಾರ ಅಸ್ಥಿತ್ವಕ್ಕೆ ಬಂದು. 5 ವಸತಿ ಶಾಲೆಗಳನ್ನು ಕೊಟ್ಟಿದ್ದರು. ಆ ಬಗ್ಗೆ ತಾವು ಇಡೀ ರಾಷ್ಟ್ರದಲ್ಲಿ ಪ್ರಚಾರ ಮಾಡಿದಿರಿ. ಕರ್ನಾಟಕ ರಾಜ್ಯದಲ್ಲಿ ನಡೆದ ಕಾರ್ಪೊರೇಷನ್ಸ್ ಚುನಾವಣೆಗಳಲ್ಲಿ ಈ 5 ವಸತಿ ಶಾಲೆಗಳ ಮೇಲೆ ಗೆದ್ದು ಬಂದಿರಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ ಅವರು ಹೇಳುವಂತಹ ಮಾತನ್ನು ಅವರು ಮಾಡುವಂತಹ ಭಾಷಣವನ್ನು ಕೇಳುವಂತಹ ಮಂತ್ರಿಗಳು ಇಲ್ಲಿ ಇದ್ದಾರೆಯೇ? ನಾನು ಏಕೆ ಈ ವಿಚಾರ ಪ್ರಸ್ತಾಪ ಮಾಡಬೇಕು ಎಂದು ಅನಿಸುತ್ತದೆ. ಅಂದರೆ ಮತೀಯ ಅಲ್ಪಸಂಖ್ಯಾತರ ಮನವನ್ನು ಒಲಿಸುವುದಕ್ಕಾಗಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ವಾಗ್ದಾನ ಕೊಟ್ಟಿತ್ತು. ಈಗ ಅವರು ಆ ವಿಚಾರವನ್ನು ಪ್ರಸ್ತಾಪ ಮಾಡುತ್ತಿರುವಂತಹ ಸಂದರ್ಭದಲ್ಲಿ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುವಂತಹ ಮಂತ್ರಿಗಳು ಇಲ್ಲಿ ಇದ್ದಾರೆಯೇ ಅಥವಾ ಉಪಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರ ಕೊಡುತ್ತಾರೆಯೇ? ನಾನು ಇಲ್ಲಿ ಒಂದು ಪ್ರಶ್ನೆಯನ್ನು ಹಾಕಿ ಕೇಳಿದ್ದಕ್ಕೆ ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ. ಎರಡೂವರೆ ವರ್ಷ ಆಗಿದೆ ಈ ಸರ್ಕಾರ ಅಸ್ಥಿತ್ವಕ್ಕೆ ಬಂದು. 5 ವಸತಿ ಶಾಲೆಗಳನ್ನು ಕೊಡುತ್ತೇವೆಂದು ಹೇಳಿ ಇದುವರೆಗೂ ಆ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸುವಂತಹ ಕೆಲಸ ಸಾಧ್ಯವಾಗಿಲ್ಲ. ಆ ವಸತಿ ಶಾಲೆಗಳಿಗೆ ಅಗತ್ಯವಾಗಿ ಬೇಕಾದಂತಹ ಕಟ್ಟಡಗಳನ್ನು ಕಟ್ಟುವುದಕ್ಕೆ ಸರ್ಕಾರಕ್ಕೆ ಆಸಕ್ತಿ ಇಲ್ಲ. ಆ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಡುವಂತಹ ಸೌಜನ್ಯ ಕೂಡ ಈ ಸರ್ಕಾರಕ್ಕೆ ಇಲ್ಲ ಜೊತೆಗೆ ಈ ಶಾಲೆಗಳನ್ನು ಸ್ಥಾಪನೆ ಮಾಡುವುಕ್ಕೆ ಒಂದು ಟ್ರಸ್ಟ್‌ನ್ನು ಸ್ಥಾಪನೆ ಮಾಡಿರುವಂತಹ ಈ ಸಂದರ್ಭದಲ್ಲಿ ಆ ಟ್ರಸ್ಟಿನ ಪದಾಧಿಕಾರಿಗಳು ಯಾರು? ರಾಜಕೀಯವಾಗಿಹುಟ್ಟಿಸಿರುವಂತಹ ವಸತಿ

ಉಪಾಧ್ಯಕ್ಷರು : ನಿಮ್ಮ ಅವಕಾಶ ಬಂದಾಗ ತಾವು ಮಾತನಾಡಿ. ಈಗ ಕುಳಿತು ಕೊಳ್ಳಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಈ ವಸತಿ ಶಾಲೆಯ ನೇತೃತ್ವವನ್ನು ವಹಿಸಿರುವಂತಹವರು ಯಾರು ಎನ್ನುವುದು ನನ್ನ ಪ್ರಶ್ನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈ ವಸತಿ ಶಾಲೆಗಳ ಬಗ್ಗೆ ನಮ್ಮ ಸಗೀರ್ ಅಹಮದ್ ಮತ್ತು ಹಶ್ಮಿಯವರು ಮಾತನಾಡುತ್ತಿದ್ದರು. ಕರ್ನಾಟಕ ರಾಜ್ಯದಲ್ಲಿ 5 ಮೈನಾರಿಟಿ ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ. 1996-97ನೇ ಸಾಲಿನಲ್ಲಿ ಈ 5 ವಸತಿ ಶಾಲೆಗಳಿಗೆ 25 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಆಗಿದೆ. ನಾನು ಏಕೆ ಹೇಳುತ್ತಿದ್ದೇನೆ ಅಂದರೆ ಗುಲ್ಬರ್ಗದಲ್ಲಿ ಏನು ವಸತಿ ಶಾಲೆ ಇದೆ ಅದರ ಅಧ್ಯಕ್ಷ ನಾನೇ ಇದ್ದೇನೆ. ಉಪಾಧ್ಯಾಯರು ಹಿಂದೆ 22 ಜನ ಇದ್ದರು ಈಗ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಿಂದ ಉಪಾಧ್ಯಾಯರ ಹುದ್ದೆಗಳನ್ನು ಅಪ್ರೂವ್‌ಲ್ ಮಾಡಿಸಿಕೊಂಡಿದ್ದೇವೆ. ಆ ಬಗ್ಗೆ ಕೋರ್ಟಿನಲ್ಲಿ ಕೇಸು ಇತ್ತು. ಆ ಕಾರಣಕ್ಕೆ ಇಷ್ಟು ಡಿಲೇ ಆಯಿತು. ಈ ಶಾಲೆಗಳ ಉಪಾಧ್ಯಾಯರ ಅಪ್ರೂವ್‌ಲ್ ಆಗಿದೆ ಮತ್ತು ಪ್ರತಿ ಶಾಲೆಗೂ 5 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಆಗಿದೆ.

ಶ್ರೀ ಸಯ್ಯದ್‌ಜುಲ್ಫಿಕರ್ ಹಶ್ಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದಂತೆ 5 ಲಕ್ಷ ರೂಪಾಯಿಗಳಲ್ಲಿ ವಸತಿ ಶಾಲೆಯನ್ನು ನಡೆಸಬಹುದೇ ಸಾರ್ ಈ ವಸತಿ ಶಾಲೆಗೆ ಎಷ್ಟು ಹಣ ಬೇಕಾಗುತ್ತದೆ. ನಾನು ಸಹ ತಮ್ಮ ಟ್ರಸ್ಟ್‌ಗೆ ಸಹಾಯ ಮಾಡುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಈ ಸ್ಕೂಲ್ ಯಾವ ಸ್ಟೇಜ್‌ಗೆ ಇದೆ ಅಂದರೆ ಇದನ್ನು ನಡೆಸುವವರು ಯಾರು? ಸರ್ಕಾರದಿಂದ ಏನು ಸಹಾಯ ಸಿಗುತ್ತದೆ? ಎಂದು ಮಾನ್ಯ ಸಗೀರ್ ಅಹಮದ್ ಅವರು ಕೇಳಿದರು, ಅದಕ್ಕೆ ನಾನು ಹೇಳಿದೆ ಅಷ್ಟೇ.

ಶ್ರೀ ಸಯ್ಯದ್ ಜುಲ್ಫಿಕರ್‌ಹಶ್ಮಿ : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗದಲ್ಲಿ ಒಂದು ವಸತಿ ಶಾಲೆ ಇದೆ. ಮಾನ್ಯ ಸಚಿವರಾದ ಮಿರಾಜುದ್ದೀನ್ ಪಟೇಲ್ ಅವರು ಅಧ್ಯಕ್ಷರಿದ್ದಾರೆ. ನಮಗೆ ಮತ್ತು ಖಮರುಲ್ ಇಸ್ಲಾಮ್ ಸಾಹೇಬರಿಗೆ ಮತ್ತು ಯಾರ್‍ಯಾರು ಶಾಸಕರನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ನಾವು ಸದಸ್ಯರಾಗಿದ್ದೇವೆಯೋ, ಇಲ್ಲವೋ ಎನ್ನುವುದಕ್ಕೆ ನಮ್ಮಲ್ಲಿ ಏನೂ ಪ್ರೂಫ್ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಯಾರೋ ಏನೋ ಮಾಡುತ್ತಾರೆ. ಮಾಡಿದ ನಂತರ ನಾವು ಮತ್ತು ನಮ್ಮ ಮಿರಾಜುದ್ದೀನ್ ಪಟೇಲ್ ಅವರು ಸಿಕ್ಕಿಬೀಳುತ್ತೇವೆ. ಅದರ ಸಲುವಾಗಿ ನಾನು ಹೇಳುತ್ತಿದ್ದೇನೆ. ನಮ್ಮ ಮತ್ತು ಅವರ ಮಧ್ಯೆ ಏನೂ ಬಿನ್ನಾಭಿಪ್ರಾಯಗಳು ಇಲ್ಲ. ಈಗ ಸರ್ಕಾರ ಏನೂ ಕೊಟ್ಟಿದ್ದಾರೆ ಅದು ಇರಲಿ. ಆದರೆ ಮುಂದಿನ ವರ್ಷ ಸರ್ಕಾರ

ಏನು ಕೊಡುತ್ತಾರೆ. ತಾವು ಅದೇ ಒಂದು ವಸತಿ ಶಾಲೆಗಳ ಇಷ್ಟೂ ಮೇಲೆ ಮತ್ತೆ ಒಂದು ಟೈಮ್ ಕಾರ್ಪೊರೇಷನ್ ಚುನಾವಣೆಯಲ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಯಲ್ಲಿ ಜನ ಮುಸ್ಲಿಂಲೀಗ್‌ಗೆ ಓಟು ಕೊಟ್ಟಿಲ್ಲ. ನ್ಯಾಷನಲ್ ಲೀಗ್‌ಗೆ ಓಟು ಕೊಟ್ಟಿಲ್ಲ. ನಮಗೆ ಓಟು ಕೊಟ್ಟಿಲ್ಲ ಜನತಾದಳಕ್ಕೆ ಓಟು ಕೊಟ್ಟಿಲ್ಲ. ಆದ್ದರಿಂದ ತಮಗೆ ಆ ಜನರ ಬಗ್ಗೆ ಕಾಳಜಿ ಇರಬೇಕು. ತಾವು ಅವರ ಜೊತೆಯಲ್ಲಿ ಏಕೆ ದ್ರೋಹ ಮಾಡುತ್ತೀರಿ. ಇನ್ನೂ 20 ವರ್ಷಗಳ ಕಾಲ ಜನತಾ ದಳ ಸರ್ಕಾರ ಆಡಳಿತದಲ್ಲಿ ಇರಲಿ. ನಮ್ಮ ಸಪೋರ್ಟ್‌ನಿಮಗೆ ಇದೆ. ಆದರೆ ಅವರಿಗೆ ರಾಮನಗರದಲ್ಲಿ ಧೋಕಾ ಆಗಿದೆ. ಮಾನ್ಯ ಸಗೀರ್ ಅಹಮದ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಬಂದು ಕೂರುತ್ತಿದ್ದಾರೆ. ನಾವು ಅಲ್ಲಿಗೆ ಬರುವುದಕ್ಕೆ ನಮ್ಮಲ್ಲಿ ಶಕ್ತಿ ಇಲ್ಲ. ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಅಲ್ಪಸಂಖ್ಯಾತರದ್ದು ಏನು ಪರಿಸ್ಥಿತಿ ಇದೆ ಅದನ್ನು ತಾವು ತಿಳಿದುಕೊಂಡು ಕೆಲಸ ಮಾಡಬೇಕೆಂದು ನಮ್ಮ ಮನಸ್ಸಿನಲ್ಲಿದೆ. ಇಲ್ಲಿ ನಮ್ಮ ಮಾನ್ಯ ವಾಟಳ್ ನಾಗರಾಜು ಅವರು ಇದ್ದಾರೆ ಅವರು ಕನ್ನಡ ಸಲುವಾಗಿ ಬಹಳ ಹೋರಾಟ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ಎಲ್ಲಾ ಮುಸ್ಲಿಂ ಜನರು ಕನ್ನಡ ಕಲಿಯಬೇಕೆಂದು ಅವರ ಮನಸ್ಸಿನಲ್ಲಿದೆ. ಇಷ್ಟವರ್ಷ ಆಯಿತು ನಾನು ಕಳೆದ ವರ್ಷ ತಮ್ಮ ಸರ್ಕಾರದಲ್ಲಿ ಒಂದು ವಿನಂತಿ ಮಾಡಿದ್ದೆ ಉರ್ದು ಸ್ಕೂಲ್‌ಗಳಲ್ಲಿ ಅಡಿಷನಲ್ ಕನ್ನಡ ಉಪಾಧ್ಯಾಯರನ್ನು ತಾವು ಕೊಡಬೇಕು. ಕನ್ನಡ ಅಭಿವೃದ್ಧಿ ಸಲುವಾಗಿ ನೀವು ಕೊಡಿ. ಅಲ್ಪಸಂಖ್ಯಾತರ ಸಲುವಾಗಿ ತಾವು ಕನ್ನಡ ವಸತಿ ಶಾಲೆಗಳನ್ನು ಕೊಡಿ. ನಾವು ಕನ್ನಡ ಕಲಿಯತ್ತೇವೆ. ಆದರೆ. ನಾವು ಕನ್ನಡ ಕಲಿಯುತ್ತೇವೆ. ಆದರೆ ನಾವು ಕನ್ನಡ ಕಲಿಯಲು ಅವಕಾಶವೇ ಇಲ್ಲ. ತಾವು ಆ ಪಕ್ಷದಿಂದ ಗೆದ್ದು ಬಂದಿದ್ದೀರಿ. ತಾವು ಸಭಾಧ್ಯಕ್ಷರಾಗಿ ಅಲ್ಲಿ ಕುಳಿತಿದ್ದೀರಿ.ತಾವು ಸರ್ಕಾರಕ್ಕೆ ಸಲಹೆ ಮಾಡಿ ನಾನು ಭಾಷಣ ಮಾಡುವುದಿಲ್ಲ. ದಿವಂಗತ ದೇವರಾಜ ಅರಸು ಅವರು ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದವರ್ಗದವರಿಗೆ ಏನು ಸಹಾಯ ಮಾಡಿದ್ದಾರೆ ಅವರು ಅರ್‍ಯಾಬಿಕ್ ಕಾಲೇಜುಸಲುವಾಗಿ ಗ್ರ್ಯಾಂಟ್ ಕೊಟ್ಟಿದ್ದರು. ವಿದ್ಯಾ ಇಲಾಖೆಯಲ್ಲಿ ಹಣ ಇದೆ. ಆದರೆ ಹಣಕಾಸಿನ ಇಲಾಖೆಯವರು ಅದನ್ನು ಬ್ಯಾನ್ ಮಾಡಿದ್ದಾರೆ. ಕರ್ನಾಟಕ ಸರ್ಕಾರ ಕೊಡುವುದು ಹೋಗಲಿ, ಕೇಂದ್ರ ಸರ್ಕಾರದ ಹಣ ಏನು ಇದೆ ಅಲ್ಪಸಂಖ್ಯಾತರ ಪರವಾಗಿ ಎರಿಯಾ ಇಂಟೆನ್ಸೀವ್ ಪ್ರೋಗ್ರಾಂ ಮಾಡ್ರನೈಸೇಷನ್ ಆಫ್ ಮದ್ರಸ ಸ್ಕೀಮ್ ತಾವು ಒಂದು ಸಿಂಗಲ್ ಸ್ಕೀಮ್‌ನ್ನು ಸಹ ಡೆವಲಪ್‌ಮೆಂಟ್ ಮಾಡುತ್ತಿಲ್ಲ. ಅದರ ಸಲುವಾಗಿ ಈ ಸರ್ಕಾರಕ್ಕೆ ಏನಾದರೂ ಅಲ್ಪಸಂಖ್ಯಾತರ ಬಗ್ಗೆ ಸ್ವಲ್ಪ ಕಾಳಜಿ ಇದ್ದರೆ ತಮಗೆ ಇನ್ನೂ ಸಮಯ ಇದೆ. ಒಳ್ಳೆಯ ಕೆಲಸ ಮಾಡಿ. ಜನ ಸಮ್ಮನೆ ಕುಳಿತಿದ್ದಾರೆ. ಚುನಾವಣೆ ಬಂದರೆ ಅವರಿಗೆ ತಿಳುವಳಿಕೆಬರಬಹುದು. ನಮ್ಮ ಕಾಳಜಿ ಇದೆ ತಾವು 20-25 ವರ್ಷ ಸರ್ಕಾರ ನಡೆಸಬೇಕು ಎಂದು. ತಮ್ಮ ಸರ್ಕಾರ ಮುಂದೆ ಏನಾದರೂ

ಅಧಿಕಾರಕ್ಕೆ ಬರಬೇಕು ಅಂತ ಇದ್ದರೆ ಅಲ್ಪಸಂಖ್ಯಾತರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಿ. ಸಮಾಜ ಕಲ್ಯಾಣ ಇಲಾಖೆ ಆಗಲಿ, ಮಹಿಳಾ ಮತ್ತು ಮಕ್ಕಳಕಲ್ಯಾಣ ಅಭಿವೃದ್ಧಿ ಇಲಾಖೆ ಆಗಲಿ, ಹೌಸಿಂಗ್ ಡಿಪಾರ್ಟ್‌ಮೆಂಟ್ ಆಗಲಿ ಎಲ್ಲಾಇಲಾಖೆಗಳಲ್ಲಿ ತಾವುಏನಾದರೂ ಒಂದು ಪರ್ಸೆಂಟೇಜ್ ಹಣ ಬಜೆಟ್‌ನಲ್ಲಿ ಇಡಬೇಕು. ತಾವು 5 ವಸತಿ ಶಾಲೆಗಳನ್ನು ಕೊಟ್ಟಿದ್ದಕ್ಕೆ ನಮ್ಮ ಜನ ನಿಮಗೆ ಎಷ್ಟು ಸಹಾಯ ಮಾಡಿದ್ದಾರೆ.ತಾವು ಒಂದು ಟೈಮ್ ಎಲ್ಲಾ ಇಲಾಖೆಗಳಲ್ಲಿ ಸಹಾಯ ಮಾಡಿದರೆ ಅವರು ತಮಗೆ ಸಹಾಯ ಮಾಡುತ್ತಾರೆ.

5.00 ಪಿ.ಎಂ

ಶ್ರೀ ಹೆಚ್ ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಹಷ್ಮಿಯವರು ಅಲ್ಪ ಸಂಖ್ಯಾತರ ಅಳಲನ್ನು ಸಭೆಯ ಮುಂದೆ ತೋಡಿಕೊಳ್ಳುತ್ತಿದ್ದಾರೆ. ಅಲ್ಪಸಂಖ್ಯಾತರ ಬಗ್ಗೆ ಈ ಸರ್ಕಾರ ಮಾಡಿರುವ ನಿರ್ಲಕ್ಷ್ಯತನದ ಬಗ್ಗೆ ಅವರು ಹೇಳಿಕೊಳ್ಳುವಂಥ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರು ಇಲ್ಲವಲ್ಲಾ ಕಾರ್ಯಗತ ಮಾಡುವುದು ಬಿಡುವುದು ಬೇರೆ ವಿಷಯ, ಆದರೆ ಅವರ ಬಗ್ಗೆ ಸರ್ಕಾರಕ್ಕೆ ಎಷ್ಟು ಅನಾದರ ಇದೆಯೆಂದು ಇದರಿಂದ ಗೊತ್ತಾಗುತ್ತದೆ. ಆ ವಿಷಯದ ಬಗ್ಗೆ ಯಾರೂ ಕೇಳುವುದಿಲ್ಲವೆಂದರೆ, ಅವರು ಭಾಷಣವನ್ನಾದರೂ ಏತಕ್ಕೆ ಮಾಡಬೇಕು? ಮಾನ್ಯ ಸದಸ್ಯರುಗಳ ಹಕ್ಕುಗಳನ್ನು ರಕ್ಷಣೆ ಮಾಡಿ ನಮ್ಮ ಅಳಲನ್ನು ಸರ್ಕಾರಕ್ಕೆ ಮುಟ್ಟಿಸುವ ಕೆಲಸವನ್ನು ಮಾನ್ಯ ಉಪಾಧ್ಯಕ್ಷರಾದ ತಾವು ಬಹಳ ಯಶಸ್ವಿಯಾಗಿ ಮಾಡುತ್ತಿದ್ದೀರಿ. ಗೌರವಾನ್ವಿತ ಸದಸ್ಯರೊಬ್ಬರು ಅವರ ಜನಾಂಗದ ಬಗ್ಗೆ ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಮಾತನಾಡುತ್ತಿರುವ ವಿಷಯವನ್ನು ಮಂತ್ರಿಗಳು ಕೇಳುತ್ತಿದ್ದಾರೆ. ಅವರು ಮಾತನಾಡಲಿ.

ಶ್ರೀ ವಾಟಳ್ ನಾಗರಾಜ್ : ಮಾನ್ಯ ದೇಶಪಾಂಡೆಯವರು ಅಪರೂಪಕ್ಕೆ ಈ ಸದನಕ್ಕೆ ಬರುತ್ತಾರೆ. ಸದನ ಪ್ರಾರಂಭವಾಗಿ9 ದಿವಸಗಳಾದರೂ ಆವತ್ತಿನಿಂದ ಇಲ್ಲಿಯವರೆಗೆ ಅವರು ಕೇವಲ 40 ನಿಮಿಷಗಳುಮಾತ್ರ ಸದನದ್ದಿಲ ಇದ್ದಾರೆ. ಪ್ರತಿದಿನ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕುಳಿತಿರುವವರ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಅವರು ಎಲ್ಲಿ ಹೋಗುತ್ತಾರೆಂದು ನಮಗೆ ಗೊತ್ತಾಗುತ್ತಿಲ್ಲ. ಏನಾದರೂ, ಲೋಕಶಕ್ತಿ, ಜನಶಕ್ತಿ, ಆದಿಶಕ್ತಿ ಪರಾಶಕ್ತಿ ಜೊತೆ ಹೊಂದಾಣಿಕೆ ನಡೆಯುತ್ತಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ನನ್ನ ಹೊಂದಾಣಿಕೆ ಮಾನ್ಯ ವಾಟಾಳರ ಜೊತೆ ನಡೆಯುತ್ತಿದೆ ಅಷ್ಟೇ.

ಶ್ರೀ ಜುಲ್ಫೀಕರ್ ಹಷ್ಮಿ : ಬಿ ಜೆ ಪಿ ಪಕ್ಷದ ಮಾನ್ಯ ಸದಸ್ಯರಿಗೂ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಬರುತ್ತಿರುವುದರಿಂದ ಅವರಿಗೆಬಹಳ ಧನ್ಯವಾದಗಳು. ಬಿ ಜೆ ಪಿ ಪಕ್ಷದವರಿಗೆ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಇರುವಾಗ ಜನತಾ ಪಕ್ಷದ ಸರ್ಕಾರಕ್ಕೆ ಏಕೆ ಕಾಳಜಿ ಇಲ್ಲ? ಪೇಪರ್‌ನಲ್ಲಿ ವರದಿ ಬರಲೆಂದು ನಾನು ಮಾತನಾಡುತ್ತಿಲ್ಲ. ನಾನು ಒಬ್ಬ ಅಲ್ಪಸಂಖ್ಯಾತನಾಗಿದ್ದರೂ ನಾನು ದಲಿತ ಮೂವ್‌ಮೆಂಟ್‌ನಿಂದ ಬಂದಿರತಕ್ಕವನು. ಕಟ್ಟಬೇಕಾದಾ 250 ರೂಪಾಯಿ ಠೇವಣಿ ಹಣ ನನ್ನ ಹತ್ತಿರ ಇರಲಿಲ್ಲವಾದ್ದರಿಂದ ಅದನ್ನು ಜನರೇ ಕಲೆಕ್ಟ್ ಮಾಡಿ ಕೊಟ್ಟಿದ್ದರು. ಅವರು ಏತಕ್ಕಾಗಿ ಹಣವನ್ನು ಕಲೆಕ್ಟ್ ಮಾಡಿ ಕಟ್ಟಿದರು? ನಮಗಾಗಿ ಏನಾದರೂ ಸಹಾಯ ಮಾಡುತ್ತಾನೆಂದು ಅವರು ಸಹಾಯ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ 10 ಸಾವಿರ ಜನ ರಿಕ್ಷಾ ಪುಲ್ಲರ್ಸ್,

3 ಸಾವಿರ ಎಣ್ಣೆ ಬಂಡಿ ಎಳೆಯುವವರು ಇದ್ದಾರೆ. ಇದುವರೆಗೂ ಅವರುಗಳಿಗೆ ಒಂದು ಷಾಮಿಯನ್ನು ಕಟ್ಟಿಸಿಕೊಡಲಿಕ್ಕಾಗಲಿಲ್ಲ, ರಿಕ್ಷಾ ಸಾಲವನ್ನು ಕೊಡಿಸುವುದಕ್ಕಾಗಲಿಲ್ಲ. ಇವತ್ತು ಎಳೆಯುವ ಒಂದು ರಿಕ್ಷಾಗೆ 5,500 ರೂಪಾಯಿಗಳ ಬೆಲೆ ಇದ್ದರೆ ಅಲ್ಪಸಂಖ್ಯಾತ ನಿಗಮದಿಂದ 3 ಸಾವಿರ ರೂಪಾಯಿಗಳನ್ನು ಮಾತ್ರ ಸಾಲ ಕೊಡುತ್ತಾರೆ. ಅದೂ ಅಲ್ಲದೆ ಅಲ್ಪಸಂಖ್ಯಾತರ ನಿಗಮದಿಂದ ಲೋನ್ ಅರ್ಜಿಗಳನ್ನು ಸ್ಯಾಕ್ಷನ್ ಮಾಡಿದರೂ ಬ್ಯಾಂಕುಗಳಲ್ಲಿ ಪಾರ್ಷಿಯಾಲಟಿ ಮಾಡಲಾಗುತ್ತಿದೆ. ಏನನ್ನಾದರೂ ಕೇಳಿದರೆ ಅಲ್ಪಸಂಖ್ಯಾತರಾದ ನೀವು ಮೈನ್ ಸ್ಟ್ರೀಮ್‌ಗೆ ಬನ್ನಿ ಎಂದು ಹೇಳುತ್ತಾರೆ. ನಾವು ಮೈನ್ ಸ್ಟ್ರೀಮ್‌ನಲ್ಲಿ ಇಲ್ಲವಾ ? ದೇಶದ ಸ್ವಾತಂತ್ರದ ಸಲುವಾಗಿ ನಾವು ಹೋರಾಟ ಮಾಡಿಲ್ಲವೇ? ನಾವು ಏನು ಮಾಡಿಲ್ಲ? ಇವತ್ತು ನಾವು ಯಾವುದೇ ಕೆಲಸ ಮಾಡಿಸಲು ಯಾವುದೇ ಕಛೇರಿಗಳಿಗೆ ಹೋದರೆ ಅವರುಗಳು ಪ್ರೀಪ್ಲಾನ್ ಆಗಿ ನಮ್ಮ ಮೇಲೆ ತೊಂದರೆ ಕೊಡುತ್ತಾರೆ. ಅದುದರಿಂದ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ನಮ್ಮ ಜನಾಂಗಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ ಅಶ್ವಾಸನೆ ಕೊಡಬೇಕು. ಆಮೇಲೆ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಅಲ್ಪ ಸಂಖ್ಯಾತರ ಅಭಿವೃದ್ಧಿ ಮಾಡುವ ಬಗ್ಗೆ ಒಂದು ವರದಿ ಕೊಡಲು ಮಾನ್ಯ ಗೂಡ್‌ವಾಲ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನ್ ನೇಮಕ ಮಾಡಲಾಗಿತ್ತು. ಆ ಕಮಿಷನ್‌ನವರು ಅಲ್ಪ ಸಂಖ್ಯಾತ ಅಭಿವೃದ್ಧಿಗಾಗಿ ರೆಕಮೆಂಡೇಷನ್‌ಗಳನ್ನು ಮಾಡಿದ್ದಾರೆ. ಆ ರೆಕಮೆಂಡೇಷನ್‌ಗಳ ವರದಿ ಸರ್ಕಾರದಲ್ಲಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ನಮಗೆ

ಉತ್ತರ ಕೊಡಬೇಕು. ಇದರ ಜೊತೆಗೆ ಮಾನ್ಯ ರೆಹಮಾನ್ ಖಾನ್ ಕಮಿಷನ್ ವರದಿ ಕೂಡ ಸರ್ಕಾರದಲ್ಲಿದೆ. ಈ ಬಗ್ಗೆ ಏನು ಮಾಡಲಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರದ ಮೂಲಕ ಆಶ್ವಾಸನೆ ಕೊಡಬೇಕು. ವಕ್ಫ್ ಡಿಪಾರ್ಟ್‌ಮೆಂಟ್ ಮತ್ತು ಮೈನಾರಿಟಿ ಕಮಿಷನ್ ಬಗ್ಗೆ ಈ ಬಜೆಟ್‌ನಲ್ಲಿ ಒಂದು ಶಬ್ಧ ಇಲ್ಲ. ಅದೇ ಆಂಧ್ರಪ್ರದೇಶದಲ್ಲಿ ಹೌಸಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಮತ್ತು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸ್ಕೀಮ್‌ಗಳನ್ನು ಹಾಕಿದ್ದಾರೆ. ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಸದನದಲ್ಲೇ ಇದ್ದಾರೆ. ಅಲ್ಪ ಸಂಖ್ಯಾತರ ಅಭಿವೃದ್ಧಿಗೆ ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಸುಮ್ಮನೆ ಹೇಳುತ್ತಾರೆ. ಅವರ ಡಿಪಾರ್ಟ್‌ಮೆಂಟಿನಲ್ಲಿ ಅಲ್ಪ ಸಂಖ್ಯಾತ ಅಭಿವೃದ್ಧಿಗಾಗಿ ಬಡ್ಜೆಟ್ಟೇ ಇಲ್ಲದೇ ಇರುವಾಗ ಅವರು ಏನು ಮಾಡುತ್ತಾರೆ?

ಶ್ರೀ ಮಾಲೀಕಯ್ಯ ಗುತ್ತೇದಾರ್ : 6 ಸಾವಿರ ರೂಪಾಯಿ ವಾರ್ಷಿಕ ಆದಾಯಕ್ಕಿಂತ ಕಡಿಮೆ ಇರುವವರಿಗೆ ಸಾಲ ಕೊಡತಕ್ಕಂಥ ಪದ್ಧತಿ ಇದೆ. ಇದರ ಜೊತೆಗೆ ನ್ಯಾಷನಲ್ ಮೈನರಾಟಿ ಡೆವಲಪ್‌ಮೆಂಟ್ ಬೋರ್ಡ್‌ನಿಂದ ದುಡ್ಡು ತಂದು ನೇರವಾಗಿ ಸಾಲ ಕೊಡತಕ್ಕಂಥ ಕಾರ್ಯಕ್ರಮ ಮಾಡಿದರೂ ಕೂಡ ಮಾನ್ಯ ಸದಸ್ಯರು ಈ ರೀತಿ ಆರೋಪ ಮಾಡುವುದು ಸರಿಯಲ್ಲ.

ಶ್ರೀ ಜುಲ್ಫೀಕರ್ ಹಷ್ಮಿ : ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿ ಎರಡು ಅಥವಾ ನಾಲ್ಕು ಪರ್‌ಸೆಂಟ್‌ನಷ್ಟು ಇಟ್ಟಿರುವ ಹಣ ಖರ್ಚಾಗುತ್ತಿಲ್ಲ. ಹಿಂದಿನ ಸರ್ಕಾರ ಮಾಡಿರುವ ಸ್ಕೀಮ್‌ಗಳು ಜಾರಿ ಮಾಡಿಲ್ಲ. ನಾನು ಜನತಾದಳ ಸರ್ಕಾರದ ಮೇಲೆ ಟೀಕೆ ಟಿಪ್ಪಣಿ ಮಾಡಬೇಕೆಂದು ಹೇಳುತ್ತಿಲ್ಲ. ಈ ಸರ್ಕಾರದ ಮೇಲೆ ನನಗೆ ಗೌರವ ಇದೆ. ಯಾವ ಸಮಾಜ ತಮ್ಮನ್ನು ನಮ್ಮವರೆಂದು ತಿಳಿದುಕೊಂಡಿದ್ದಾರೋ ಅವರಿಗೆ ದ್ರೋಹ ಮಾಡುತ್ತಿದ್ದೀರೆಂದು ಹೇಳುತ್ತೇನೆ. ಅಲ್ಪಸಂಖ್ಯಾತರ ಅಭಿವೃದ್ಧಿ ಮಾಡುವ ಸಲುವಾಗಿ ಎಲ್ಲಾ ಒಂದು ಸಾರಿ ಕೂಡ ಮಿಟಿಂಗ್ ಆಗಿಲ್ಲ. ನಾವು ಜಗಳ ಮಾಡಿದ ಮೇಲೆ ನಾಳೆ ದಿವಸ ಮಿಟಿಂಗ್ ಕರೆದಿದ್ದಾರೆ. ಅಲ್ಪಸಂಖ್ಯಾತ ಸಮಾಜವು ಎಲ್ಲಾ ಸಮಾಜಕ್ಕಿಂತ ಕೆಳಮಟ್ಟದಲ್ಲಿ ಇದೆ ಹಾಗೂ ತುಳಿತಕ್ಕೆ ಒಳಗಾಗಿದೆ. ಈ ಮೊದಲು ದಲಿತರು ಕೆಳ ಮಟ್ಟದಲ್ಲಿ ಇದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಿಸರ್ವೇಷನ್ ಪದ್ದತಿಯನ್ನು ಜಾರಿಗೆ ತಂದ ಮೇಲೆ ಆ ಸಮಾಜ ಸ್ವಲ್ಪ ಮೇಲಕ್ಕೆ ಬಂದಿದೆ. ಅಲ್ಪ ಸಂಖ್ಯಾತರುಗಳೂ ಮೈನ್ ಸ್ಟ್ರೀಮ್‌ನಲ್ಲಿ ಬರುವ ಹಾಗೆ ವ್ಯವಸ್ಥೆ ಮಾಡಬೇಕು. ಮತ್ತು ಅವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುತ್ತದೆಂದು ನಮಗೆ ಆಶಯ ಇದೆಯೆಂದು ಹೇಳಿ ಇದುವರೆಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

+ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಸುಮಾರು 64 ಪುಟಗಳ ಹಾಗೂ ಸುಮಾರು 200 ಪ್ಯಾರಾಗಳನ್ನು ಒಳಗೊಂಡಿರುವಂಥ ಈ ಬಜೆಟ್‌ನ್ನು ಮಾನ್ಯ ಹಣಕಾಸು ಸಚಿವರು ಸುಮಾರು 2 ಗಂಟೆಗಳ ಕಾಲ ಓದಿದ್ದಾರೆ. 50 ಸ್ವಾತಂತ್ರ್ಯದ ದಿನಾಚರಣೆಯ ತ್ಯಾಗವನ್ನು ಸ್ಮರಿಸಿ, ಈ ಸರ್ಕಾರ ಬಂದ ಮೇಲೆ ಮಂಡಿಸಿದ ಮೂರನೇ ಬಜೆಟ್‌ನ್ನು ಓದಿದರು. ಎಷ್ಟು ತೆರಿಗೆ ಹಣವನ್ನು ವಸೂಲು ಮಾಡುತ್ತಾರೆ? ಯಾವ ರೀತಿ ವ್ಯಯ ಮಾಡುತ್ತಾರೆ? ಎವಾಲ್ಯುಯೇಷನ್ ಕಮಿಟಿ ಮಾಡದೆ, ಯಾವುದೇ ಸರ್ಕಾರ ಹಣ ಖರ್ಚು ಮಾಡತಕ್ಕಂಥ ವಿಚಾರದಲ್ಲಿ ಅತ್ಯಂತ ಗಂಬೀರವಾಗಿ ಚಿಂತನೆ ಮಾಡಬೇಕು.

ಯಾವುದೇ ಕಾರ್ಯಕ್ರಮವು ವೈಜ್ಞಾನಿಕವಾಗಿ ಇರಬೇಕು. ಹಣವನ್ನು ವಸೂಲು ಮಾಡುವುದು ಎಷ್ಟು, ಮುಖ್ಯವೋ, ಅಷ್ಟೇ ಮುಖ್ಯವಾಗಿ ಹಣವನ್ನು ಜವಾಬ್ದಾರಿಯುತವಾಗಿ ವ್ಯಯ ಮಾಡುವುದು ಕೂಡ ಮುಖ್ಯ ಉದಾಹರಣೆಗೆ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯದ ಬಗ್ಗೆ ಸರಕಾರವು ಬಹಳ ಗಂಬೀರವಾದ ಚಿಂತನೆ ಮಾಡಬೇಕು. ಕುಡಿಯುವ ನೀರಿನ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದರು. ಈಗಾಗಲೇ ಮಾರು ವಿಧಾನದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಚಿಂತನೆ ಮಾಡಿದ್ದಾರೆ. ಒಂದನೇಯದು ಜನಸಂಖ್ಯೆಯ ಆಧಾರದಲ್ಲಿ ಓವರ್‌ಹೆಡ್‌ಟ್ಯಾಂಕ್, ಇಷ್ಟು ಜನಸಂಖ್ಯೆಗೆ ಮಿನಿವಾಟರ್‌ಸಪ್ಲೈ, ಎಂದು ಮಾಡಿದ್ದಾರೆ. ಈಗಾಗಲೇ ಸುಮಾರು 3976 ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಹೇಳಿದ್ದಾರೆ. ನೀವು ಬೋರ್‌ವೆಲ್‌ಗಳನ್ನು ಏನು ಕೊರೆಯುತ್ತೀರಿ, ಅದು ಸರ್ಕಾರಿ ಬೋರ್‌ವೆಲ್‌ಗೂ ಖಾಸಗಿ ಬೋರ್‌ವೆಲ್‌ಗೂ 30 ರೂ.ಗಳ ವ್ಯತ್ಯಾಸವಿದೆ. ಜೊತೆಗೆಬೋರ್‌ವೆಲ್‌ಗಳನ್ನು ಕೊರೆದು ಒತ್ತುವಂಥ ಕೆಲಸವನ್ನು ಮಾಡಲು ಸರಕಾರಕ್ಕೆ ಎಷ್ಟು ಹಣ ಖರ್ಚಾಗಿದೆ? ಮಿನಿವಾಟರ್‌ಸಪ್ಲೈಗೆ ಮತ್ತು ಬೋರ್‌ವೆಲ್‌ಗಳಿಗೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಸರಕಾರದವರು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ಕುಡಿಯುವ ನೀರಿನ ವಿಚಾರವು ನಮ್ಮಲ್ಲಿ ಇನ್ನೂ ಚರ್ಚೆಯಲ್ಲಿದೆ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಪರಿಸ್ಥಿತಿ ಇದೆ. ಸರಕಾರವು ಕುಡಿಯುವ ನೀರಿನ ಒಂದು ಕಟ್‌ಆಫ್‌ಡೇಟ್‌ನ್ನು ಫಿಕ್ಸ್ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಮುಕ್ತಾಯಗೊಳಿಸುವ ಬಗ್ಗೆ ಒಂದು ಹಂತಕ್ಕೆ ಬರುವ ಬಗ್ಗೆ ಚಿಂತನೆ ಮಾಡಬೇಕು. ಇನ್ನೊಂದು ವಿಚಾರ 5.52 ಕುಟುಂಬಗಳಿಗೆ 201.76 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದಿದ್ದಾರೆ. ಸುಮಾರು 6000 ಪಂಚಾಯತ್‌ಗಳಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಸಾಲವನ್ನು ಕೊಡುವುದಕ್ಕೋಸ್ಕರ ಫಲಾನುಭವಿಗಳನ್ನು ಗುರುತು ಮಾಡಿದ್ದೀರಿ ಆದರೆ ನಿಜವಾಗಿಯೂ ಎಷ್ಟು ಜನರಿಗೆ ಸಾಲವನ್ನು

ಕೊಟ್ಟಿದ್ದೀರಿ ? ಫಲಾನುಭವಿಗೆ ಬ್ಯಾಂಕ್‌ನ ಮೂಲಕ ಕನಿಷ್ಟ ಇಷ್ಟು ಸಾಲ ಎಂಬುದನ್ನು ಈತನಕವೂ ಹೇಳಲಿಲ್ಲ. ಒಬ್ಬ ಫಲಾನುಭವಿಗೆ 12ಸಾವಿರ ರೂ.ಗಳು ಎಂದು ನಾವು ನಿಗದಿ ಮಾಡಿದ್ದೇವೆ. 12ಸಾವಿರಗಳಲ್ಲಿ 4 ಸಾವಿರ ರೂ.ಗಳು ಸಬ್ಸಿಡಿ. ಇನ್ನುಳಿದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳಿಗೆ 6ಸಾವಿರ ರೂಗಳ ಸಬ್ಸಿಡಿಯನ್ನು ಕೊಟ್ಟಿದೆ. ಈಗಾಗಲೇ ಬ್ಯಾಂಕ್‌ಗಳಿಗೆ ಬಹಳಷ್ಟು ಜನರು ತಿರುಗುತ್ತಾ ಇದ್ದಾರೆ. ಆದರೂ ಅವರಿಗೆ ಸಾಲಸೌಲಭ್ಯ ಸಿಗತಕ್ಕಂಥ ವ್ಯವಸ್ಥೆಯಾಗಿಲ್ಲ. ಇಲ್ಲಿ ನೋಡಿದರೆ ಐಆರ್‌ಡಿಪಿ ಲೋನ್ ಕೊಡುವುದರ ಮೂಲಕ ಸಮಗ್ರ ಗ್ರಾಮಿಣ ಅಭಿವೃದ್ಧಿ ಯೋಜನೆಗಾಗಿ ಸಾಲವನ್ನು ಮಾಡುತ್ತಾ ಇದ್ದೇವೆಂದು ಹೇಳಿದ್ದಾರೆ. ಹಾಗೆಯೇ ಸ್ವಸ್ಥಿಗ್ರಾಮ ಮಾಡುತ್ತೇವೆಂದು ಹೇಳಿದ್ದಾರೆ. ಇಡೀ ಕರ್ನಾಟಕದಲ್ಲಿ 175 ತಾಲ್ಲೂಕುಗಳು ಮತ್ತು 224 ವಿಧಾನಸಭಾ ಕ್ಷೇತ್ರಗಳು ಇವೆ. ಕನಿಷ್ಟ ಪಕ್ಷ ಒಂದು ಪಂಚಾಯತಿಯ ಬಗ್ಗೆ ಯೋಚನೆ ಮಾಡಿದರೆ, ಅಲ್ಲಿನ ಕುಡಿಯುವ ನೀರು, ಡಾಂಬರೀಕರಣ, ನೈರ್ಮಲ್ಯ, ಮುಂತಾದ ಅಭಿವೃದ್ಧಿಕಾರ್ಯಗಳ ಬಗ್ಗೆ ಯೋಚನೆ ಮಾಡಿದರೆ 28ವರ್ಷಗಳಲ್ಲಿ ಕರ್ನಾಟಕದಲ್ಲಿನ ಎಲ್ಲಾ ಹಳ್ಳಿಗಳನ್ನು ಬದಲಾವಣೆ ಮಾಡಬಹುದಾಗಿತ್ತು. ನಿಜವಾಗಿಯೂ ಗ್ರಾಮೀಣಾಭಿವೃದ್ಧಿಯ ಬಗ್ಗೆ ಸರಕಾರಕ್ಕೆ ಚಿಂತನೆ ಇದ್ದರೆ, ಒಂದು ವರ್ಷದಲ್ಲಿ ಒಂದು ಕ್ಷೇತ್ರದಲ್ಲಿ ಒಂದು ಪಂಚಾಯತಿಯನ್ನು ಪೂರ್ಣವಾಗಿ ಕುಡಿಯುವ ನೀರು ರಸ್ತೆ, ಶಾಲೆಗಳು, ಹೀಗೆ ಯಾವುದೇ ಇರಬಹುದು, ಎಲ್ಲವನ್ನೂ ಒದಗಿಸಿಕೊಂಡುವ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಿದರೆ 28ವರ್ಷಗಳಲ್ಲಿ ರಾಜ್ಯದಲ್ಲಿನ ಎಲ್ಲಾ ಹಳ್ಳಿಗಳನ್ನು ಅಭಿವೃದ್ಧಿಪಡಿಸುವ ಉತ್ತಮವಾದ ಕೆಲಸವನ್ನು ಮಾಡಬಹುದು. 6ಸಾವಿರ ಪಂಚಾಯತ್‌ಗಳಲ್ಲಿ ನ್ಯಾಯ ಪಂಚಾಯತಿಗಳನ್ನು ಸೃಷ್ಟಿಮಾಡುತ್ತೇವೆಂದು ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು. ಅದಕ್ಕೆ ಎಷ್ಟು ಹಣವನ್ನು ಇವರು ಖರ್ಚು ಮಾಡಿದ್ದಾರೆ ಎಂದು ನನಗೆ ಗೊತ್ತಾಗಲಿಲ್ಲ. ಹೀಗೆ ಅವರು ಹೇಳಿ ಒಂದು ವರ್ಷ ಕಳೆದಿದ್ದೆ. ಅದಕ್ಕಾಗಿ ಯಾವ ಹಣವನ್ನು ಖರ್ಚು ಮಾಡಿದ್ದಾರೆ ಅಂದರೆ ಇಲ್ಲ. ಈ ಯಾವುದೇ ಕಾರ್ಯಕ್ರಮಕ್ಕಾಗಿ ಬಜೆಟ್‌ನಲ್ಲಿ ಇವರು ಹಣವನ್ನು ಇಟ್ಟಿಲ್ಲ.

ಇನ್ನು ಕೃಷಿಯ ಬಗ್ಗೆ ಹೇಳುವುದಾದರೆ 1996-97ರಲ್ಲಿ 90 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. 2000ದ ಇಸವಿಯ ಹೊತ್ತಿಗೆ ನಮಗೆ ಒಂದೂವರೆ ಕೋಟಿ ಟನ್ ಆಹಾರದ ಉತ್ಪಾದನೆ ಬೇಕಾಗುತ್ತದೆ. ಆದರೆ ಇವೊತ್ತು ಪ್ರಪಂಚದಲ್ಲಿಬಹಳ ಗಂಭೀರವಾಗಿ ಚಿಂತನೆ ಮಾಡುತ್ತಿರುವುದು ಏನು ? ಮೊನ್ನೆ ಮಾನ್ಯ ದೇವೇಗೌಡರವರು ರೋಮ್ ನಗರಕ್ಕೆಹೋಗಿದ್ದಾಗ ಎಫ್‌ಎಓ, ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್‌ನಲ್ಲಿ ಚರ್ಚೆ ನಡೆದು ಅಲ್ಲಿ ಪ್ರಪಂಚದ ಆಹಾರ ಮತ್ತು ಕೃಷಿ ಭದ್ರತೆ ಬಗ್ಗೆ ಚರ್ಚೆ ಆಯಿತು. ಬಹಳ ಜವಾಬ್ದಾರಿಯುತವಾದ ಚರ್ಚೆ ಆಯಿತು. ಪ್ರಪಂಚದಲ್ಲಿ 600ಕೋಟಿ ಜನಸಂಖ್ಯೆ ಇದ್ದು

ಅದರಲ್ಲಿ 80ಕೋಟಿ ಜನರು ಹಸಿವಿನಿಂದ ನರುಳುತ್ತಾ ಇರತಕ್ಕಂಥ ಒಂದು ಅಲೋಚನೆ ಇರಬೇಕಾದರೆ ಕೃಷಿ ಕ್ಷೇತ್ರದಲ್ಲಿ 90ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುತ್ತಾರೆ ಎಂದು ಹೇಳುವುದರ ಮೂಲಕ ಬಹಳ ದೊಡ್ಡದಾಗಿ ವಿಚಾರವನ್ನು ಮಂಡಿಸಿದ್ದಾರೆ.

ಆದರೆ 90ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡತಕ್ಕಂಥವರಿಗೆ ಯಾವ ತರಹದ ವ್ಯವಸ್ಥೆಯನ್ನು ನಾವು ಮಾಡಿದ್ದೇವೆಂಬುದನ್ನು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ಯಾವುದೇ ಬೆಳೆಗಳಿಗೆ ವೈಜ್ಞಾನಿಕಬೆಳೆ ನೀತಿ ಇಲ್ಲ. ಮಾರ್ಕೆಟ್ ವ್ಯವಸ್ತೆ ಇಲ್ಲ. ಸರಕಾರದ ಭದ್ರತೆಯು ಇಲ್ಲ. ಈಗಾಗಲೇ ಉದಾಹರಣೆಗೆ ಹೇಳುವುದಾದರೆ ಕೆಲವು ಕಾಲ ಆಲೂಗಡ್ಡೆ, ಈರುಳ್ಳಿ ಬೆಳೆದಂತಾಯಿತು. ಇಡೀ ಕರ್ನಾಟಕದಲ್ಲಿ 7 ಲಕ್ಷ ಟನ್ ಆಲೂಗಡ್ಡೆ ಮತ್ತು ಈರುಳ್ಳಿಯ ಉತ್ಪಾದನೆ ಯಾಗಿದ್ದರೂ ಅದಕ್ಕೆ ಯಾವುದೇ ಭದ್ರತೆ ಇಲ್ಲವಾಯಿತು. ಹೀಗೆ ರೈತನು ತುಂಬಾ ಕಷ್ಟದ ಪರಿಸ್ಥಿತಿಗೆ ಒಳಗಾದಾಗ ಕರ್ನಾಟಕ ಸರಕಾರವು ಕೆಲವೇ ಕೆಲವು ಕಾಲ ಮಧ್ಯಪ್ರವೇಶ ಮಾಡಿ ಕನಿಷ್ಟಬೆಲೆಯನ್ನು ಹಾಫ್‌ಕಾಮ್ಸ್ ಮೂಲಕ ಮಾಡಿ ಒಂದು ಭದ್ರತೆ ಕೊಟ್ಟಿದ್ದರು. ಆದರೆ ಪುನಃ ಆಲೂಗಡ್ಡೆ ಬೆಳೆದಂಥ ರೈತರು ಬಹಳ ನಷ್ಟವನ್ನು ಅನುಭವಿಸಿರುವುದು ಮಾನ್ಯ ಭೈರೇಗೌಡರಿಗೆ ಗೊತ್ತಿದೆ. ಅದರೆ ಅಂಥ ಸಂದರ್ಭದಲ್ಲಿ ಯಾವುದೇ ಸರಕಾರ ಮಧ್ಯಪ್ರವೇಶ ಮಾಡಲು ಆಗಲಿಲ್ಲ. ಆದ್ದರಿಂದ ಯಾವುದೇ ಬೆಳೆಗಳ ವಿಚಾರದಲ್ಲಿ ನಷ್ಟದ ಪರಿಸ್ಥಿತಿಯು ರೈತರಿಗೆ ಬಂದಾಗ ಸರಕಾರ ಮಧ್ಯಪ್ರವೇಶ ಮಾಡತಕ್ಕಂಥ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ರೈತರಿಗೆ ಕ್ರೌಢಿಕರಿಸುವಂಥ ವ್ಯವಸ್ತೆಯು ಆಗಬೇಕು. ಈಗ ಕೇಂದ್ರದಲ್ಲಿ ನಿಮ್ಮದೇ ಸರಕಾರವಿದೆ. ಬೆಳೆಗಳಿಗೆ ಬೆಲೆ ನಿಗದಿ ಮಾಡುವಂಥ ಒಂದು ಕಾರ್ಯಕ್ರಮದ ಬಗ್ಗೆ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು.

ಇನ್ನು ತೋಟಗಾರಿಕೆ ವಿಚಾರವಾಗಿ ಹೇಳುವುದಾದರೆ ಇದು ಬಹಳ ಮುಖ್ಯವಾದ ವಿಚಾರ. ಕರ್ನಾಟಕದಲ್ಲಿ ತೋಟಗಾರಿಕೆ ಬೆಳೆ ಬೆಳೆಯತಕ್ಕಂಥಾದ್ದು ಹೆಚ್ಚು ಮಳೆಯಾಧಾರಿತ ಪ್ರದೇಶದಲ್ಲಿ ಈ ಬಗ್ಗೆ ಕನಿಷ್ಟ ಸರಕಾರದವರು ಏನೂ ಮಾಡಬೇಕಾದ ಅವಶ್ಯಕತೆಯಿಲ್ಲ. ಒಂದು ಮಾವಿನ ಸಸಿಯನ್ನು ನಡೆತಕ್ಕಂಥವರಿಗೆ ಪುಕ್ಕಟೆಯಾಗಿ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಸಾಕು. ಇಡೀ ಕರ್ನಾಟಕದಲ್ಲಿ ಮಾವು ಬೆಳೆಯತಕ್ಕಂಥ ಪ್ರದೇಶ ಅಂದರೆ ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ, ಬೆಳಗಾಂ ಜಿಲ್ಲೆ, ಬಿಜಾಪುರ ಮುಂತಾದ ಕಡೆಗಳಲ್ಲಿ ಇದೆ. ನಮ್ಮಲ್ಲಿಂದ ಇಡೀ ಪ್ರಪಂಚಕ್ಕೆ ನಾವು ರಫ್ತು ಮಾಡತಕ್ಕಂಥ ಹಣ್ಣು ಅಂದರೆ ಮಾವು. ನಾನು ಇತ್ತೀಚೆಗೆ ರೋಮ್‌ಗೆ ಹೋಗಿದ್ದೆ. ಅಲ್ಲಿ ಕಳಪೆ ಮಾವಿನ ಹಣ್ಣು ಒಂದು ಕೆ.ಜಿ.ಗೆ 213ರೂ.ಗಳು ನಮಗೆ ಬಿಜಾಪುರಜಿಲ್ಲೆ ಒಂದೇ ಸಾಕು. ಬಿಜಾಪುರಕ್ಕೆ ನಿಜವಾಗಿಯೂ ತೋಟಗಾರಿಕೆ ಇಲಾಖೆಯವರು ಕ್ರಾಂತಿರೂಪದಲ್ಲಿ ಮಾವಿನ ಬೆಳೆಯನ್ನು ಕೈಗೆತ್ತಿಕೊಂಡರೆ, ಡ್ರಿಫ್‌ಇರಿಗೇಷನ್ ಮುಂತಾಗಿಎಲ್ಲಾ ಸವಲತ್ತುಗಳನ್ನು

ಕೊಟ್ಟರೆ ಇಡೀ ಪ್ರಪಂಚಕ್ಕೆ ಕೊಡತಕ್ಕಂಥ ಪ್ರಮಾಣದಲ್ಲಿ ಹಣ್ಣುಗಳನ್ನು ಕೊಡತಕ್ಕಂಥ ವಾತಾವರಣವನ್ನು ಹೊಂದಿದೆ. ಬೆಳಗಾಂ ಜಿಲ್ಲೆಯು ಮಳೆ ಆಧಾರಿತ ಪ್ರದೇಶ. ಅಲ್ಲಿಯವರಿಗೆ ಈ ಬಗ್ಗೆ ಸಹಾಯವನ್ನು ಮಾಡಿದರೆ ಬಹಳ ಅನುಕೂವಾಗುತ್ತದೆ. ಅವರು ಈಗಾಗಲೇ ಕೊಯ್ನಾ ನೀರಿನಿಂದ ವಂಚಿತರಾಗಿದ್ದಾರೆ. ಅವರಿಗೆ ಅನ್ಯಾಯವಾಗಿ ಕೊಯ್ನಾನೀರು ಇಲ್ಲದಂತಾಯ್ತು. ಇಲ್ಲವಾದರೆ ಇಡೀ ಜಿಲ್ಲೆಯು ನೀರಾವರಿಪ್ರದೇಶವಾಗಿರುತ್ತಿತ್ತು.

ಆದ್ದರಿಂದ ತೋಟಗಾರಿಕೆ ಇಲಾಖೆಯವರು ಒಂದು ಜಿಲ್ಲೆಯನ್ನು ಪೂರ್ಣಪ್ರಮಾಣದಲ್ಲಿ ತೋಟಗಾರಿಕೆ ಒಳಪಡಿಸತಕ್ಕಂಥ ಕೆಲಸವನ್ನು ಮಾಡಬೇಕು. ಇನ್ನೊಂದು ಚಿಂತನೆ ಇದೆ. ಅದು" ನಮ್ಮಮನೆ, ನಮ್ಮತೋಟ" -ಕೇಂದ್ರ ಸರಕಾರದವರು ಮಧ್ಯಪ್ರವೇಶಿಸಿ ಕಂಪಲ್ಸರಿಯಾಗಿ ಡ್ರಿಫ್ ಇರಿಗೇಷನ್‌ನ್ನು ಮಾಡಿಸಿದರೆ ಒಳ್ಳೆಯದಾಗುತ್ತದೆ. ಈ ಕುರಿತು ಸರಕಾರದವರು ಯುದ್ಧದೋಪಾದಿಯಲ್ಲಿ ಕೆಲಸವನ್ನು ಮಾಡಿಸಬೇಕು. ತೋಟಗಾರಿಕೆ ಇಲಾಖೆಯವರು ಡ್ರಿಫ್‌ಇರಿಗೇಷನ್ ಪರಿಚಯ ಮಾಡುವುದರೊಳಗೆ, ಆ ಬಗ್ಗೆ ಯಾವುದೇ ಕೆಲಸವನ್ನು ಮಾಡುತ್ತಾ ಇಲ್ಲ. ಡ್ರಿಫ್‌ಇರಿಗೇಷನ್‌ನಿಂದ ರಾಸಾಯನಿಕ ಗೊಬ್ಬರದ ಉಳಿತಾಯ, ಮಣ್ಣಿನ ಫಲವತ್ತಿನ ಅಂಶದ ಉಳಿತಾಯ ಮತ್ತು ನೀರಿನ ಉಳಿತಾಯವಾಗುತ್ತದೆ ಎಂಬ ವಿಚಾರಗಳನ್ನು ರೈತರಿಗೆ ತಿಳಿಸಿಹೇಳುವ ಕೆಲಸವನ್ನು ತಾವುಗಳು ಮಾಡಿಲ್ಲ. ದಯಮಾಡಿ ಅದನ್ನು ಮೊದಲು ಮಾಡಬೇಕು.

ಬಹಳ ಉತ್ತಮವಾದ ಕೆಲಸವನ್ನು ತಾವು ಮಾಡುತ್ತಿದ್ದೀರಿ. ತಳ್ಳುವ ಗಾಡಿಯವರಿಗೆ ತರಕಾರಿ ಮಾರಲು ಅವಕಾಶ ನೀಡಿ ಅವರುಗಳು ಜೀವನ ನಡೆಸಲು ಅವಕಾಶ ಕೊಡುತ್ತಿದ್ದೀರಿ ಇದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ಇದನ್ನು ಸ್ವಾಗತಮಾಡುವುದರ ಜೊತೆಗೆ ಹೋದ ವರ್ಷ ಇದೇ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳನ್ನು ಇದಕ್ಕೆ ಪ್ರಾವಿಷನ್ ಮಾಡಿಕೊಂಡಿದ್ದೀರಿ ಫುಟ್‌ಪಾತಿನಲ್ಲಿ ಇಟ್ಟುಕೊಂಡು ಜೀವನ ಮಾಡುವವರಿಗೆ ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಮೈಸೂರು ಮಾರುಕಟ್ಟೆಯಲ್ಲಿ ವೀಳೇದೆಲೆ, ಕಿತ್ತಳೆ ಹಣ್ಣು ವ್ಯಾಪಾರ ಮಾಡುತ್ತಾರೆ. ತಳ್ಳುವ ಗಾಡಿ ಅಲ್ಲದೆ ತಲೆಯ ಮೇಲೆಹೊತ್ತು ವ್ಯಾಪರ ಮಾಡತಕ್ಕಂತಹವರು ಇದ್ದಾರೆ. ಹೋದ ಸಲ 50 ಲಕ್ಷ ರೂಪಾಯಿಯನ್ನು ಬಡ್ಜಟ್ಟಿನಲ್ಲಿ ಪ್ರಾವಿಷನ್ ಮಾಡಿದ್ದೀರಿ. ಅದರ ಉಪಯೋಗವಾಗಿದೆಯೇ? ಅದರ ಕಾರ್ಯಕ್ರಮ ಇದೆ ಇದು ಬಹಳ ಉತ್ತಮ ಹೇಳಬೇಕು. ಇವತ್ತೇನು ತಳ್ಳುವ ಗಾಡಿ ಕಾರ್ಯಕ್ರಮ ಇದೆ ಇದು ಬಹಳ ಉತ್ತಮವಾದ ಕಾರ್ಯಕ್ರಮ ಇದಕ್ಕೆ ಬೇಕಾದಂತಹ ಸಾಮಗ್ರಿಗಳು ಹಣ್ಣುಗಳನ್ನು ತೆಗೆದುಕೊಂಡು ಬರುವುದಕ್ಕೆ ರೂಪಾಯಿ ಸಾಲುವುದಿಲ್ಲ ಕನಿಷ್ಟ 7 ರಿಂದ 8 ಸಾವಿರ ರೂಪಾಯಿ ಹಣವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದಲ್ಲದೆ ಮಾತೆತ್ತಿದರೆತಾವು ಕೃಷಿ ಸಾಲದ ಬಗ್ಗೆ ಹೇಳುತ್ತೀರಿ. ರೈತರನ್ನು ಯಾವಾಗಲೂ ಸಾಲಗಾರರನ್ನಾಗಿ ಮಾಡತಕ್ಕಂತಹ ವ್ಯವಸ್ತೆ ಇದೆ. ರೈತರು ಸಾಲವಿಲ್ಲದೆ

ಬದುಕತಕ್ಕಂತಹ ವೈಜ್ಞಾನಿಕ ಚಿಂತನೆ ಮಾಡಬೇಕು. ಪ್ರತಿ ವರ್ಷ ಸಾಲ ಕೊಡುವುದು ಆ ಸಾಲ ಕೊಡ ಬೇಕಾದರೆ ಬಹಳ ತೊಂದರೆಯಾಗುತ್ತದೆ.ಮಾನ್ಯ ಬೈರೇಗೌಡರೇ ತಾವು ಹೇಳಬೇಕ. 8000 ರೂಪಾಯಿ ಸಾಲ ಕೊಡಬೇಕಾದರೆ ಯಾವುದೇ ಬ್ಯಾಕಿನಲ್ಲಿ 13 ಫಾರಂಗೆ ಸಹಿ ಮಾಡಬೇಕು. ಬ್ರಿಟಿಷ್ ಕಾಲದ ಗುಲಾಮಗಿರಿ ವ್ಯವಸ್ತೆ ಇದೆ. 25 ಸಹಿ ಮಾಡಿಸಿ 8000 ರೂಪಾಯಿ ಸಾಲ ಕೊಡುವ ವ್ಯವಸ್ಥೆ ಇದೆ. ಇದನ್ನು ತೆಗೆದು ಹಾಕಬೇಕು. ಕೃಷಿ ಸಾಲವನ್ನು ಕೊಡುವುದು ಮುಖ್ಯ ಅಲ್ಲ. ಕೃಷಿಯಲ್ಲಿ ಉತ್ಪಾದನೆ ಮಾಡಿ ಕೃಷಿಯ ಮೂಲಕ ಅವನು ಆರ್ಥಿಕವಾಗಿ ಮೇಲೆ ಬರುವ ವ್ಯವಸ್ಥೆಯಾಗಬೇಕು. ಕೇವಲ ರೈತನನ್ನು ಸಾಲಗಾರನ್ನಾಗಿ ಮಾಡುವುದು ಅಲ್ಲ. ತಾವು ಮಾತೆತ್ತಿದರೆ ರೈತರ ಸುದಧಿ ಮಾತನಾಡುತ್ತಿದ್ದೀರಿ. ಈ ವರ್ಷ ಒಂದು ಸಾವಿರ ಕೋಟಿ ಕೊಡುತ್ತೇವೆ ಮುಂದಿನ ವರ್ಷ 1500 ಕೋಟಿ ಕೊಡುತ್ತೇವೆನ್ನುವ ವಿಷಯ ಕೈ ಬಿಡಬೇಕು. ಕೃಷಿ ಮಾಡುವ ರೈತ ವೈಜ್ಞಾನಿಕವಾಗಿ ಬದುಕತಕ್ಕಂತಹ ಕೆಲಸ ಮಾಡಬೇಕು. 72ನೇ ವಿಷಯದಲ್ಲಿ ಪಶುಸಂಗೋಪನೆ ಬಗ್ಗೆ ಹೇಳಿದ್ದೀರಿ. ಈಗಾಗಲೇ ಸರಕಾರ ಡಿಕ್ಲೇರ್ ಮಾಡಿದೆ. ಪಶುಸಂಗೋಪನ ನಮ್ಮಲ್ಲಿ ಕೇವಲ ಹಾಲಿನ ದೃಷ್ಟಿಯಿಂದ ಇಲ್ಲ. ಕೇವಲ ಹಾಲಿನ ದೃಷ್ಟಿಯಲ್ಲಿ ದನವನ್ನು ಸಾಕುವುದಕ್ಕೆ ಸಾಧ್ಯವಿಲ್ಲ. ಇಡೀ ಕರ್ನಾಟಕದಲ್ಲಿ 60 ರಿಂದ 70 ಭಾಗ ರೈತರು ಒಂದು, ಒಂದೂವರೆ ಎರಡು ಹೆಕ್ಟೇರ್ ಜಮಿನು ಇಟ್ಟುಕೊಂಡಿರುತ್ತಾರೆ. ನಮಗೆ ಉಳುಮೆಗೆ ಆಗುವಂತಹ ದನವನ್ನು ಸಾಕುವುದರ ಮೂಲಕ ಏನು ನಮ್ಮ ಸಾಂಸತಿಕವಾಗಿ ಹಿಂದಿನಿಂದ ಬಂದಿರತಕ್ಕಂತಹ ತಳಿಗಳನ್ನು ಉಳಿಸಿಕೊಳ್ಳಬೇಕಾಗಿದೆ. ಕೃಷ್ಣಹಳ್ಳಿಕಾರ್, ಅಮೃತ ಮಹಲ್ ಇಂತಹ ತಳಿಗಳನ್ನು ಉಳಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಅದಕ್ಕೆ ಯಾವುದೇ ನಾಡ ತಳಿ ಒಂದು ಕರು ಹಾಕಿದರೆ ಅದಕ್ಕೆ 250 ರೂಪಾಯಿ ಪ್ರೋತ್ಸಾಹ ಧನವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆ 250 ರೂಪಾಯಿ ಪ್ರೋತ್ಸಾಹ ಧನವನ್ನು ಇಡೀ ಕರ್ನಾಟಕದಲ್ಲಿ ಯಾವುದೇ ದನಗಳಿಗೆ ಕೊಟ್ಟಿಲ್ಲ. ಇಡೀ ಕರ್ನಾಟಕದಲ್ಲಿ ನಾಡ ತಳಿಗಳ ದನ ಕರು ಹಾಕಿರುವುದನ್ನು ಎಲ್ಲಾ ಗುರುತು ಮಾಡಿಕೊಂಡು ಹೆಸರು ಬರೆದುಕೊಂಡಿದ್ದಾರೆ. ಆದರೆ ಯಾರಿಗೂ ಹಣ ಕೊಟ್ಟಿಲ್ಲ.

ಕರ್ನಾಟಕದಲ್ಲಿ 350 ಜಾತ್ರೆ ನಡೆಯುತ್ತದೆ ಜಾತ್ರೆ ವಿಷಯವೇ ಗೊತ್ತಿಲ್ಲ. ಒಂದು ಜಾತ್ರೆಯಲ್ಲಿ ಒಂದು ಜೊತೆ ಎತ್ತಿಗೆ 50-60 ಸಾವಿರ ರೂಪಾಯಿ ಕೊಟ್ಟು ಸಾಕಿರತಕ್ಕಂಥಾದ್ದನ್ನು ನೋಡಿದ್ದೇವೆ. ಮೊನ್ನೆ ದಿವಸ ಒಂದು ಜಾತ್ರೆಯಲ್ಲಿ ದನಗಳನ್ನು ತಂದಿದ್ದರು ನಾನೇ ನೋಡಿದ್ದೇನೆ. ನಿಜವಾಗಲೂ ಅವನು ತನ್ನ ಹೆಂಡತಿ ಮಕ್ಕಳನ್ನೂ ಕೂಡ ಅಷ್ಟೊಂದು ಚೆನ್ನಾಗಿ ಸಾಕುವುದಿಲ್ಲ. ಒಂದು ಜೊತೆ ಎತ್ತುಗಳಿಗೆ ಎರಡು ಉದ್ದದ ಬಾಟಲಿನ ಪೌಡರ್ ಎರಡು ಬಾಟಲು ಸ್ನೋ ಹಾಕಿ ದನಗಳಿಗೆ ಮೇಕಪ್ ಮಾಡಿ 20,000 ರೂಪಾಯಿ ಖರ್ಚು ಮಾಡಿ ಆ ದನಗಳನ್ನು ಜಾತ್ರೆಗೆ ತೆಗೆದುಕೊಂಡು ಹೋಗಿ ಆ ಇಡೀ ಜಾತ್ರೆಗೆ ಖಳೆ ಬಂದ ಒಂದು ರೀತಿಯಲ್ಲಿ ದಸರಾ ಉತ್ಸವ ಇದ್ದಹಾಗೆ

ಇತ್ತು. ರೈತರು ತನ್ನ ಜೀವನದಲ್ಲಿ ಸಂತೋಷವಾಗಿ ಕಾಲವನ್ನು ಕಳೆಯತಕ್ಕಂತಹ ಈ 302 ಜಾತ್ರೆ ಇಡೀ ಕರ್ನಾಟಕದಲ್ಲಿ ಇದೆ. ರೈತರ ಎಕ್ಸಿಬಿಷನ್ ಅದು ಆ ಜಾಗದಲ್ಲಿ ಡ್ಯಾನ್ಸ್ ಮಾಡಿವವರಿಗೆ 25000 ಕೊಡುತ್ತೇವೆ ಬೇರೆ ಎಲ್ಲಕ್ಕೂ ಖರ್ಚು ಮಾಡುತ್ತೇವೆ. ಪಾಪ ರೈತರು ತನ್ನ ಹೆಂಡತಿ ಮಕ್ಕಳಿಗೆ ಹಾಲು ಕುಡಿಸುವುದಿಲ್ಲ ತಿನ್ನಿಸುವುದಿಲ್ಲ ಅಷ್ಟೊಂದು ಹಣವನ್ನು ದನಗಳಿಗೆ ಖರ್ಚು ಮಾಡಿ ಸಾಕಿದ ರೈತನಿಗೆ ನಾವು ಕೊಡತಕ್ಕಂತಹ ಬಹುಮಾನ 200 ರೂಪಾಯಿಯ ಬಕೆಟ್ 25 ರೂಪಾಯಿ ಬೊಂಬು 75 ರೂಪಾಯಿಯ ಒಂದು ಮಿಳ್ಳ ಕೊಡುತ್ತಾರೆ. ಅಲ್ಲಿ ವ್ಯಾಪಾರ ಮಾಡುವುದಕ್ಕೆ ಬರುತ್ತಾರೆ.

ಶ್ರೀ ಸಿ. ಭೈರೇಗೌಡ : ಸ್ನೋ ಪೌಡರ್ ಹಾಕತಕ್ಕಂತಹ ಎತ್ತುಗಳಿಂದ ನಾವು ವ್ಯವಸಾಯ ಮಾಡುತ್ತೇವೆಂದು ಹೇಳಿದರೆ ನಾನು ಸುಮ್ಮನೆ ಇಲ್ಲಿ ಕುಳಿತಿರುವುದಕ್ಕೆ ಆಗುತ್ತದೆಯೇ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಸ್ನೋ ಪೌಡರ್ ಹಾಕುವ ಉದ್ದೇಶವೇನೆಂದರೆ ಅವನು ತನ್ನ ದನಗಳನ್ನು ಎಷ್ಟು ಮುದ್ದಿಸುತ್ತಾನೆಂದು

ಶ್ರೀ ಸಿದ್ಧರಾಮಯ್ಯ : ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳನ್ನು ಜಾತ್ರೆಗಳಲ್ಲಿ 50-60 ಸಾವಿರಕ್ಕೆ ಮಾರಾಟ ಮಾಡುತ್ತಾರೆ.ಕೊನೆ ಹಲ್ಲು ಬೀಳುವವರೆಗೂ ಅವನ್ನೇನೂ ಉಳುವುದಿಲ್ಲ. ಸುಮ್ಮನೆ ಶೋಕಿಗೋಸ್ಕರ ಮೈ ತೀಡಿಕೊಂಡು ಹುಲ್ಲು ಬೀಳುವವರೆಗೂ ಅವನ್ನೇನೂ ಉಳುವುದಿಲ್ಲ. ಸುಮ್ಮನೆ ಶೋಕಿಗೋಸ್ಕರ ಮೈ ತೀಡಿಕೊಡು ಹುಲ್ಲು ಹುರಳಿ ಹಾಕಿಕೊಂಡು ಸಾಕಿಕೊಂಡಿರತಕ್ಕಂತಹ ಹಸುಗಳು ಅವು. ಬಾಡಿಗಳಿಗೆ ಆ ಎತ್ತುಗಳನ್ನು ಕಟ್ಟಿರುವುದಿಲ್ಲ.

ಶ್ರೀ ಸಿ. ಭೈರೇಗೌಡ : ನಾವು ವ್ಯವಸಾಯ ಪ್ರಾರಂಭ ಮಾಡಿದಾಗ ನಮ್ಮ ಮನೆಯಲ್ಲಿ 13 ಜೊತೆ ಎತ್ತು ಇತ್ತು. ಅದರಲ್ಲಿ ಒಂದು ಎರಡು ಜೊನೆ ಎತ್ತುಗಳನ್ನು ಹೋರಿಗಳೆಂದು ಕರೆಯುತ್ತಿದ್ದೆವು. ಆ ಹೋರಿಗಳಿಗೆ ಎಲ್ಲೂ ಇಲ್ಲದ ಮುತುವರ್ಜಿ ಅವುಗಳಿಗೆ ಕೋಳಿ ಮೊಟ್ಟೆಯಿಂದ ಹಿಡಿದು ತುಪ್ಪದವರೆಗೆ ಆರೈಕೆ ನಡೆಯುತ್ತಿತ್ತು. ಅವುಗಳಿಗೆ ದಿನವೂ ಬಿಸಿ ನೀರಿನ ಸ್ನಾನ ಮಾಡಿಸುತ್ತಿದ್ದರು. ಮೈ ಕೈ ನೀವತಕ್ಕಂಥಾದ್ದು ಅದಕ್ಕೆಹುಲ್ಲುಕ ಎಲ್ಲಾ ಚೆನ್ನಾಗಿ ಹಾಕಿ ಒಳ್ಳೆ ಹಾಸಿಗೆ ಮಾಡತಕ್ಕಂಥ ರೀತಿಯಲ್ಲಿ ಮಾಡುತ್ತಿದ್ದರು. ಅದು ಗಂಜಲ ಹುಯ್ಯವಂತಹ ಸಂದರ್ಭದಲ್ಲಿ ಅದನ್ನು ಹಿಡಿಯಲು ಒಬ್ಬ ಆಳನ್ನು ಇಟ್ಟು ಸೇವೆ ಮಾಡುತ್ತಿದ್ದರು. ಮಾನ್ಯ ಉಪ-ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಹೇಳಿದಂತೆ ಆ ಎತ್ತುಗಳು ಯಾವುದೂ ಕೆಲಸ ಮಾಡುತ್ತಿರಲಿಲ್ಲ. ಅದರ ಜೊತೆ ಮೋಟು ಎತ್ತುಗಳೆಂದು ಅದರ ಜೊತೆ ಇರುತ್ತಿತ್ತು. ಎಲ್ಲಿಯಾದರೂ ಗಾಡಿ ಹೊಡೆಯುವಾಗ ಕೆಸರಿನಲ್ಲೋ ಮಣ್ಣಿನಲ್ಲೋ ಸಿಕ್ಕಿ ಹಾಕಿಕೊಂಡರೆ ಈ

ಹೋರಿಗಳು ಅಲ್ಲೇ ನಿಲ್ಲುತ್ತಿದ್ದವು. ಈ ಮೋಟು ಎತ್ತುಗಳಿಂದ ಗಾಡಿ ಕಟ್ಟುತ್ತಿದ್ದೆವು. ಸುಮ್ಮನೆ ಅದರ ತೋಕೆ ಮುಟ್ಟಿದ ತಕ್ಷಣ ಗಾಡಿ ತನ್ನಷ್ಟಕ್ಕೆ ತಾನೇ ಮೇಲೆ ಬರುತ್ತಿತ್ತು. ಆ ಕೆಲಸ ಮೋಟು ಎತ್ತುಗಳು ಮಾಡುತ್ತಿದ್ದವು. ಹೋರಿಗಳು ತಿಂದು ಬಿಟ್ಟ ಕಡ್ಡಿ ಕಣಕು ಇಂಥಾದ್ದನ್ನು ಆ ಮೋಟು ಎತ್ತುಗಳಿಗೆ ಹಾಕುತ್ತಿದ್ದೆವು. ಅವು ಕೆಲಸ ಮಾಡುತ್ತಿದ್ದವು. ನೀವು ಹೇಳಿದ ಹಾಗೆ ಸ್ನೋ ಪೌಡರುಹಾಕಿದಂತಹ ಎತ್ತುಗಳಿಂದ ವ್ಯವಸಾಯ ಮಾಡುತ್ತೇವೆಂದರೆ ಅದು ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳುತ್ತಿರುವುದು ಕೋಲಾರದ ಎತ್ತುಗಳು. ನೀವು ಹೇಳುತ್ತಿರುವುದು ಮಂಡ್ಯದ ಎತ್ತುಗಳು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ತನ್ನ ಬದುಕಿಗೆ ಸಂಬಂಧ ಇರತಕ್ಕಂತಹ ದನಗಳಿಗೆ ರೈತರು ತೋರಿಸತಕ್ಕಂತಹ ಪ್ರೀತಿ ಬಗ್ಗೆ ನಾನು ಹೇಳುತ್ತಿರುವುದು.

ಶ್ರೀ ಕೆ. ಎಂ. ಶ್ರೀನಿವಾಸ್ : ಶಾಸಕರು ಮೋಟು ಎತ್ತುಗಳು ಮಂತ್ರಿಗಳು ಹೋರಿಗಳು ನಿಮಗೇಕೆ ಕಾರುಗಳು

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನಾನು ದನಗಳ ಬಗ್ಗೆ ರೈತನಿಗೆ ಇರತಕ್ಕಂತಹ ಸಂಬಂಧದ ವಿಷಯವನ್ನು ಹೇಳಿದ್ದು ಸ್ನೋ ಪೌಡರ್‌ಗಳ ಬಗ್ಗೆ ಅಲ್ಲ. ಒಂದು ಜೊತೆ ಎತ್ತುಗಳನ್ನು ಜಾತ್ರೆಗೆ ಬಹುಮಾನದ ಆಸೆಯಿಂದ ಹೊಡೆಯತಕ್ಕಂತಹ ದನಗಳು ದುಡಿಯುವುದೇ ಇಲ್ಲವೆಂದು ಹೇಳಬಾರದು. ಬಹಳ ಕಡಿಮೆದಿನ ದುಡಿಯುತ್ತವೆ. ಒಂದು ವರ್ಷದಲ್ಲಿ 3-4 ತಿಂಗಳು ದುಡಿಯುತ್ತವೆ. ಇನ್ನು 6-7 ತಿಂಗಳುದನಗಳನ್ನು ಸಾಕಿ ಸಾಗಿಸಿ ಜಾತ್ರೆಯಿಂದ ಜಾತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ತಾನು ತನ್ನ ದನಗಳನ್ನು ಚೆನ್ನಾಗಿ ಸಾಕುವುದರ ಮೂಲಕ ಬಹುಮಾನ ಪಡೆಯಬೇಕೆಂಬ ಉದ್ದೇಶದಿಂದ ಆ ರೈತ ಹೀಗೆ ಮಾಡುತ್ತಾನೆ. ತಾವೇನು ಬಹುಮಾನದ ಹಣವನ್ನು ಘೋಷಣೆ ಮಾಡಿದ್ದೀರಿ ಆ ಘೋಷಣೆಯ ಮೊತ್ತದ ಹಣವನ್ನು 302 ಜಾತ್ರೆಗೆ ಪರಿಗಣಿಸಿ ಸರಿಯಾಗಿ ಕೊಡಬೇಕು. ಈಗಾಗಲೇ ಸಮಿತಿ ಸಭೆಯಲ್ಲಿ ತೀರ್ಮಾನವಾಗಿದೆ. ಬಡ್ಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿಲ್ಲ. ಪ್ರಾವಿಷನ್ ಮಾಡಿಕೊಂಡು ಇವರಿಗೆಹಣ ಕೊಡುವ ವ್ಯವಸ್ಥೆ ಮಾಡಬೇಕು.

ಸಿ. ಭೈರೇಗೌಡ : ಪ್ರಥಮ ಬಾರಿಗೆ ವಿಧಾನ ಸೌಧದ ಹೊರಗಡೆ ಭವ್ಯವಾದಂತಹ ಸಮಾರಂಭ ಮಾಡಿ ಮಾನ್ಯ ಪುಟ್ಟಣ್ಣಯ್ಯನವರ ಕೈಯ್ಯಲ್ಲೇ 1-1 ಲಕ್ಷ ರೂಪಾಯಿ ಬಹುಮಾನವನ್ನು ರೈತರಿಗೆ ಕೊಡತಕ್ಕಂತಹ ಕೆಲಸ ಮಾಡಿದ್ದೇವೆ. ಈ ಸರಕಾರ ಬಂದ ಮೇಲೆ ಇದನ್ನು ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದನ್ನೇನು ಮೊದಲ ಬಾರಿಗೆ ಮಾಡಿದ್ದೀರೋ ? ಇದಕ್ಕಿಂತ ಮುಂಚೆ ಕೊಟ್ಟಿಲ್ಲವೇ ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಈ ರೀತಿ ಯಾವತ್ತೂ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ರೆಕಾರ್ಡ್ಸ್ ಸ್ಪೈಟ್ ಆಗಬೇಕು.

ಶ್ರೀ ಸಿ. ಬೈರೇಗೌಡ : ನಾನು ಸಣ್ಣವನಿದ್ದಾಗ ಕ್ರಾಫ್ ಕಾಂಪಿಟಿಷನ್ ಎಂದು ಪ್ರತಿ ತಾಲ್ಲೂಕಿನಲ್ಲೂ ನಡೆಯುತ್ತಿತ್ತು. ನನಗೆ ಆಗ 15-20 ವರ್ಷ ವಯಸ್ಸು ಇರಬೇಕು ಆಗ ನಾವು ಕೂಡ ಭಾಗವಹಿಸಿದ್ದೇವು ಆಗ ನೂರು ರೂಪಾಯಿ ಕೊಟ್ಟಿದ್ದರು. 40 ವರ್ಷಗಳ ಹಿಂದೆ ನೂರು ರೂಪಾಯಿ ಕೊಟ್ಟಿದ್ದರು.

5.30 ಪಿ.ಎಂ

ಶ್ರೀ ಕಾಗೋಡು ತಿಮ್ಮಪ್ಪ : ತಾವು ಕೃಷಿ ಮಂತ್ರಿಯಾಗಿದ್ದೀರಿ. ದಯಮಾಡಿ ರೆಕಾರ್ಡ್ ತೆಗೆಸಿ ನೋಡಿ. ಮೊದಲ ಬಾರಿಗೆ ನಾವು ತಾಲ್ಲೂಕು ಮಟ್ಟದಲ್ಲಿ ಹತ್ತು ಸಾವಿರ ಜಿಲ್ಲಾ ಮಟ್ಟದಲ್ಲಿ 50 ಸಾವಿರ ಮತ್ತು ರಾಜ್ಯ ಮಟ್ಟದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದೆವು. ದಯಮಾಡಿ ಕಡತ ತೆಗೆಸಿ ನೋಡಿ ಈಗ ನೀವು ಏನು ಕೊಡುತ್ತಿದ್ದೀರಲ್ಲಾ ಅದಕ್ಕಿಂತಲೂ ಮುಂಚೆಕೊಟ್ಟವರು ನಾವು.

ಶ್ರೀ ಸಿ. ಭೈರೇಗೌಡ : ಈ ಸರ್ಕಾರ ಬಂದಮೇಲೆ ಇದನ್ನು ಜಾರಿಗೆ ಕೊಟ್ಟಿರತಕ್ಕಂಥದ್ದು.

ಶ್ರೀ ವಿ.ಮುನಿಯಪ್ಪ : ಇವರು ಸುಮ್ಮನೆ ಪ್ರಚಾರ ತೆಗೆದುಕೊಂಡಿದ್ದಾರೆ ಅಷ್ಟೆ. ಮುಂಚೆ ಇದನ್ನು ಕೊಟ್ಟವರು ನಾವು ಎಂಬುದನ್ನು ಮರೆಯಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ : ರೆಕಾರ್ಡ್ ನೋಡಿ ಹೇಳಿ. ನಾವು ಕೊಟ್ಟಿದ್ದೇವೋ ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ಇದು 93-94ನೇ ಸಾಲಿನಿಂದಲೇ ಜಾರಿಗೆ ಬಂದಿದೆ.

ಶ್ರೀ ಸಿ. ಭೈರೇಗೌಡ : ನಮ್ಮ ಸರ್ಕಾರ ಬಂದ ಮೇಲೆ ಇದನ್ನು ಮೊದಲ ಬಾರಿಗೆ ನಾವೇ ಜಾರಿಗೆ ಕೊಟ್ಟಿರುವುದು.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದಿನ ಸರ್ಕಾರ ಕೊಟ್ಟಿಲ್ಲವೇ ?

ಶ್ರೀ ಸಿ. ಭೈರೇಗೌಡ : ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಕೊಟ್ಟಿದ್ದರೆ, I will resign. otherwise you have to sign. Are you prepared to resign?

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಯಾರು ರಾಜೀನಾಮೆ ಕೊಡುವುದು ಬೇಡ. ಅವರು ಹೇಳುತ್ತಿರುವುದು ನಮ್ಮ ಸರ್ಕಾರ ಬಂದಮೇಲೆ ಕೊಟ್ಟಿರುವುದು ಎಂದು ಎಂದು ಹೇಳುತ್ತಿದ್ದಾರೆ. ನೀವು ಕೊಟ್ಟಿಲ್ಲ ಎಂದು ಹೇಳುತ್ತಿಲ್ಲ. ತಾವು ಆ ರೀತಿ ಹೇಳುತ್ತೀರಾ?

(ಗೊಂದಲ)

ಶ್ರೀ ಯು. ಆರ್. ಸಭಾಪತಿ : ಸದನಕ್ಕೆ ಸುಳ್ಳು ಮಾಹಿತಿ ಏಕೆ ಕೊಡಬೇಕು?

ಶ್ರೀ ವಾಟಾಳ್ ನಾಗರಾಜ್ : ಗುಣಕ್ಕೆ ಮತ್ಸರ ಬೇಡ. ಹೌದೇ?

ಶ್ರೀ ಕಾಗೋಡು ತಿಮ್ಮಪ್ಪ : ಹೌದು.

ಶ್ರೀ ವಾಟಾಳ್ ನಾಗರಾಜ್ : ವಿಧಾನಸೌಧದ ಮುಂದೆ ಆ ರೈತ ಜನಾಂಗವನ್ನು ಕರೆದು ಅದಕ್ಕೆ ಒಂದು ಶಕ್ತಿ ತರುವಂಥ ವ್ಯವಸ್ಥೆಯಾದ್ದು ಬೈರೇಗೌಡರು ಎಂದರೆ ಒಪ್ಪಿಕೊಳ್ಳುತ್ತೀರೋ?

ಶ್ರೀ ಕಾಗೋಡು ತಿಮ್ಮಪ್ಪ : ನೋಡಿ ಸ್ವಾಮಿ, ನೀವು ಶಾಸಕರಾಗಿ ತಾಲ್ಲೂಕು ಮಟ್ಟ ಮಟ್ಟದಲ್ಲಿ ಕೃಷಿಕರಿಗೆ ಪ್ರತ್ರಿಯನ್ನು ವಿತರಣೆಯನ್ನು ಮಾಡಿದ್ದೀರೋ ಇಲ್ಲವೋ ?

ಶ್ರೀ ವಾಟಾಳ್ ನಾಗರಾಜ್ : ಈ ಅಮೌಟ್ ಒಂದು ಲಕ್ಷ

ಶ್ರೀ ಕಾಗೋಡು ತಿಮ್ಮಪ್ಪ : ದಯವಿಟ್ಟು ರೆಕಾರ್ಡ್ ತೆಗೆಸಿ ನೋಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಆಯಿತು. ಎರಡು ಸರ್ಕಾರಗಳು ಕೊಟ್ಟಿದ್ದರೆ ಧನ್ಯವಾದಗಳು.ಒಬ್ಬರಿಗೊಬ್ಬರು ಕಾಂಪಿಟೆಷನ್ ಮೇಲೆ ಒಂದೂವರೆ ಲಕ್ಷ ಎರಡೂವರೆ ಲಕ್ಷ, ಇದೇ ರೀತಿ ಕಾಂಪಿಟೆಷನ್ ಬಂದರೆ ಬಹಳ ಸಂತೋಷ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಮಂತ್ರಿಮಂಡಲದಲ್ಲಿ ಮೈತಿಕ್ಕಿ ಚೆನ್ನಾಗಿ ಕೊಂಬುಗಳಿಗೆಲ್ಲಾ ಬಣ್ಣ ಹಾಕಿ ಗೌನ್ ಹಾಕಿ ಪೌಡರ್ ಸ್ನೋ ಹಾಕತಕ್ಕಂಥ ಆ ದರ್ಜೆ ಮಂತ್ರಿಗಳ್ಯಾರು ಇದ್ದಾರೆ. ಯಾರೂ ಇಲ್ಲವೇ ? ಅದಕ್ಕೆ ತಕ್ಕಂತೆ ಹೋರಿಗಳಿಗೆ ತಕ್ಕಂತೆ ಇರುವ ಮಂತ್ರಿಗಳು ಯಾರು ಇದ್ದಾರೆ?

ಮಾನ್ಯ ಸದಸ್ಯರು : ಅವರೇ ಇದ್ದಾರಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಪಾಪ, ನಿಮ್ಮನ್ನು ನಾನು ಈ ರೀತಿ ಹೋಲಿಸಲಿಕ್ಕೆ ತಯಾರಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಕರಾವಳಿ ಮೀನುಗಾರರನ್ನು ತಾವು ಯಾವ ರೀತಿ ಗುರುತು

ಮಾಡುತ್ತೀರಿ, ಹಾಗೆಯೇ ಒಳನಾಡು ಮೀನುಗಾರರನ್ನು ಗುರುತುಮಾಡಿ ಅವರಿಗೆ ವಸತಿ ಸೌಕರ್ಯ ಕೊಡುವುದರ ಮೂಲಕ, ಕರೆಗಳಲ್ಲಿ ಯಾರು ಮೀನನ್ನು ಹಿಡಿದು ಬದುಕುತ್ತಾರೆ, ಅವರಿಗೇ ಲೀಸ್ ಮೂಲಕವೂ ಅಥವಾ ನಿಮ್ಮಲ್ಲಿ ಕಾನೂನು ಟಿಪಿನು ಇದೆ, ಅದರ ಪ್ರಕಾರ ಅವರಿಗೆ ಕೊಟ್ಟು ಮೀನು ಹಿಡಿಯುವವರ ಬದುಕಿನಲ್ಲಿ ಒಂದು ಉತ್ತಮವಾದ್‌ಭವಿಷ್ಯವನ್ನು ಸೃಷ್ಟಿಮಾಡಿ. ಕರಾವಳಿಯ್ಲಲಿರುವ ಮೀನುಗಾರರಿಗೆ ಎಷ್ಟು ಸಹಕಾರ ಇದೆ. ಹಾಗೆಯೇ ಒಳನಾಡು ಮೀನುಗಾರಿಗೂ ತಾವು ಅತ್ಯಂತ ಗಂಭೀರವಾಗಿ ಯೋಚನೆ ಮಾಡಿ, ಅದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ಅದು ಈ ಬಾರಿ ಮನೆಗಳಿಗೆ ಐದೂವರೆ ಸಾವಿರ ಅರ್ಜಿಗಳೇನು ಬಂದಿವೆ, ಒಳನಾಡು ಮಿನುಗಾರರದ್ದೂ ಬಂದಿದೆ ಐದೂವರೆ ಸಾವಿರ ಅರ್ಜಿಗಳನ್ನು ಸಹ ನಾನು ಕೇಂದ್ರಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದ್ದೇನೆ ಈ ಬಾರಿ ಹೆಚ್ಚಿನ ಮನೆಗಳು ಸ್ಯಾಂಕ್ಷನ್ ಅಗುವ ಸಂಭವ ಇದೆ. ಒಳನಾಡಿಗೂ ಸಹ ಈ ಬಾರಿಕೊಡುವವರಿದ್ದೇವೆ. ಮತ್ತೆ ಇನ್ನೊಂದು ಹೊಸ ಕಾರ್ಯಕ್ರಮವನ್ನೂ ಕೂಡ ಹಮ್ಮಿಕ್ಕೊಂಡಿದ್ದೇವೆ; 200 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ರೆಡಿ ಮಾಡಿದ್ದೇವೆ. ಬರೀ ಕೇವಲ ಒಳನಾಡು ಮಿನುಗಾರಿಕೆಗೆಂದು ಮಾಡಿದ್ದೇವೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೇ, ನೀರಾವರಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡುತ್ತಾರೆ ಡ್ಯಾಮ್ ಕಟ್ಟುತ್ತಾರೆ. ಕಾಲುವೆ ತೋಡುತ್ತಾರೆ. ಚಾನಲ್ ಮಾಡುತ್ತೀರಿ ಉದಾಃಗೆ ಹೇಮಾವತಿ, ಸುಮಾರು ಏಳು ಲಕ್ಷದ ಇಪ್ಪತ್ತು ಸಾವಿರ ಎಕರೆಗೆ 37 ಟಿಎಂಸಿ ನೀರಿನಲ್ಲಿ ಅವರೆಲ್ಲರಿಗೋೂ ಸೆಮಿ ಡ್ರೈ ಕ್ರಾಫ್ಸ್ ಬೆಳೆಗೆ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇವತ್ತು ಹೇಮಾವತಿ ಪ್ರದೇಶದಲ್ಲಿ ಎಲ್ಲಾ ಕಾಲುವೆ ಹೋಗಿದೆ.

ಕಂಟ್ರಾಕ್ಟರ್ ಇಂಜಿನಿಯರ್ ಭಯಂಕರ ಇಲಾಖೆ ಅದು. ಆ ಇಲಾಖೆಗೆ ಯಾವುದೇ ಕಾಯಕಲ್ಪ ಇಲ್ಲ. ಅದನ್ನು ತಡೆಯುವ ಕೆಲಸ ಯಾರಿಗೂ ಆಗುವುದಿಲ್ಲ ಅಲ್ಲಿರುವ ಎಂ.ಎಲ್.ಎ ಯಿಂದ ಹಿಡಿದು ಈ ದೇಶದ ಪ್ರಧಾನಮಂತ್ರಿಯವರೆಗೂ ಗೊತ್ತಿದೆ. ಸುಮಾರು 30-35 ಪರ್‌ಸೆಂಟ್ ಇಂಜಿನಿಯರ್‌ಗೆ, 30-35 ಪರ್‌ಸೆಂಟ್ ಕಂಟ್ರಾಕ್ಟ್‌ದಾರರಿಗೆ ಇನ್ನು 30 ಪರ್‌ಸೆಂಟ್ ಕೆಲಸ ನಡೆಯುತ್ತದೆ. ಈ ರೀತಿ ಕಾಮಗಾರಿಯನ್ನು ನಡೆಸಿ ಇಷ್ಟೊಂದು ಜನರ ತೆರಿಗೆಯ ಹಣವನ್ನುಲೂಟಿ ಮಾಡಿ ನಾವು ಕಾರ್ಯಕ್ರಮವನ್ನು ರೂಪಿಸಿದ್ದೇವೆ ಹೇಮಾವತಿಯಲ್ಲಿ ನೂರಕ್ಕೆ ಐವತ್ತು ಭಾಗ ನೀರಾವರಿಯಾಗಿದೆ. ಇನ್ನು 50 ಭಾಗ ನೀರಾವರಿಯಾಗಿಲ್ಲ. ಸರ್ಕಾರ ಇನ್ನೊಂದು ಬಹಳ ದೊಡ್ಡ ಆಲೋಚನೆಯನ್ನು ಮಾಡಿದೆ. ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು

ಸರ್ಕಾರ ನೀರಾವರಿಗೆ ಹಣ ಕೊಟ್ಟರೆ ಬಹಳ ಮುಖ್ಯವಲ್ಲ. ಕೃಷಿ ತಜ್ಞರು. ಕೃಷಿಲಾಖೆಯವರು ಯಾರೂ ಈ ಆಲೋಚನೆ ಮಾಡಿಲ್ಲ ಎರಡು ಬೆಳೆ ತೆಗೆಯುವುದು. ರಬಿ ಅಂಡ್‌ಕಾರಿಫ್. ಮಳೆಗಾಲದ ಒಂದು ಬೆಳೆ. ಬೇಸಿಗೆ ಕಾಲದ ಒಂದು ಬೆಳೆ. ಬೇಸಿಗೆಕಾಲದ ಒಂದು ಬೆಳೆ. 200 ಎಕರೆ ಜಮಿನು ಇದ್ದರೆ ನೂರು ಎಕರೆಬೇಸಿಗೆ ಕಾಲದಲ್ಲಿ ನೂರು ಎಕರೆ ಮಳೆಗಾಲದಲ್ಲಿರಬಿಅಂಡ್ ಕಾರಿಫ್ ಎರಡು ಬೆಳೆಗಳನ್ನು ಬೆಳೆವನ್ನು ಅಲೋಚನೆ ಮಾಡಿದೆ. ಸರ್ಕಾರ ಎಷ್ಟೊಂದು ಅವೈಜ್ಞಾನಿಕವಾದ ವಿಚಾರ ಮಾಡಿದೆ ಎಂದು ಹೇಳಿದರೆ ನೂರಕ್ಕೆ ಐವತ್ತು ಭಾಗ ಜನ ರೈತರು ಇದುವರೆಗೆ ಬೆಳೆಯನ್ನು ಬೆಳೆದಿಲ್ಲ. ಈಗಾಗಲೇ ನಾಲ್ಕರಿಂದ ಐದುವರ್ಷಗಳಾಗಿದೆ. ಸುಮಾರು 40 ರಿಂದ 50 ಭಾಗ ಬೆಳೆ ಬೆಳೆದಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಬೇಕು. ಏಕೆಂದರೆ ಒಂದೇ ಕ್ರಾಫ್ ಪ್ಯಾಟ್ರನ್ ಮಾಡತಕ್ಕಂಥ ಕೆಲಸವನ್ನು ತಾವು ಆಲೋಚನೆಮಾಡಿ ಇದೇ ರೀತಿ ಮಲಪ್ರಭಾ ಆಗಬಹುದು. ಯಾವುದೇ ಸೇಮಿ ಡ್ರೈ ಕ್ರಾಫ್ಸ್‌ಗೆ ರಬಿ ಅಂಡ್ ಕಾಂಫ್ ಎರಡು ಬೆಳೆಬೆಳೆಯುವುದರ ಮೂಲಕ ನೀರಾವರಿ ಚಿಂತನೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಬಹಳ ಮುಖ್ಯವಾದದು ಎಂದರೆ ನೀರಾವರಿಯಲ್ಲಿ ಕೇವಲ ದೊಡ್ಡ ದೊಡ್ಡ ನೀರಾವರಿಯೋಜನೆಬಗ್ಗೆಸರ್ಕಾರ ಬಹಳ ಚಿಂತನೆ ಮಾಡಿದೆ. ಹಿಂದೆ ಒಂದುಲಕ್ಷ ಗೋಕಟ್ಟೆ ಇತ್ತು. ಒಂದು ಲಕ್ಷ ಮಾಡತಕ್ಕಂಥದ್ದು ಹಾಗೆ ಒಂದು ಲಕ್ಷ ಗೋಕಟ್ಟೆ ಇತ್ತು.33 ಸಾವಿರ ಕೆರೆಗಳು ಇದ್ದವು ಇವತ್ತು 33 ಸಾವಿರ ಕೆರೆ ಬಗ್ಗೆ, ಒಂದು ಲಕ್ಷ ಗೋಕಟ್ಟೆ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಏಕೆಂದರೆ ನೀರಾವರಿ ಇಲಾಖೆಯಲ್ಲಿ ಆ ಕಾರ್ಯಕ್ರಮಕ್ಕೆ ಹಣವನ್ನು ವ್ಯಯ ಮಾಡುತ್ತಿದ್ದೇವೆ, ವೈಜ್ಞಾನಿಕವಾಗಿ ವ್ಯಯ ಮಾಡಬೇಕು. ಉದಾಃಗೆ ಜಿಲ್ಲಾ ಪರಿಷತ್ತಿಗೆ ನನ್ನ ಕ್ಷೇತ್ರದಲ್ಲಿ ಹತ್ತು ಕೆರೆ ಇರುತ್ತದೆ. ಹತ್ತು ಕೆರೆ ಇದ್ದರೆ ಎರಡೂವರೆ ಲಕ್ಷ ರೂಪಾಯಿ ಕೊಡುತ್ತೀರಿ. ಒಂದೊಂದು ಕೆರೆಗೆ ಒಂಭತ್ತು - ಹತ್ತು ಲಕ್ಷ ರೂಪಾಯಿಗಳು ಬೇಕು ಒಂಭತ್ತು - ಹತ್ತು ಲಕ್ಷ ರೂಪಾಯಿ ಖರ್ಚಾಗತಕ್ಕಂಥ ಕೆರೆಗೆ 25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಸುಮಾರು 25-30 ವರ್ಷವಾದರೂ ಒಂದು ಕೆರೆ ಕಾಮಗಾರಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ಮೊನ್ನೆ ತುಮಕೂರಿಗೆ ಹೋಗಿದ್ದೆ ; ಮಳೆ ಗಾಲದಲ್ಲಿ. ಬಹಳ ಹೊಟ್ಟೆ ಉರಿದುಹೋಯಿತ್ತು. ಬಹಳ ಸಂಕಟವಾಯಿತು. ಮಳೆ ಆಧಾರಿತ ಪ್ರದೇಶದ ರೈತರು ತುಮಕೂರಿನಲ್ಲಿರುವಾರು. ಕೋಡಿ ಬೀಳುತ್ತಿತ್ತು. ಯಾವುದೇ ಒಂದು 150 ಎಕರೆ, 200 ಎಕರೆಗೆ ನೀರನ್ನು ಕ್ರೋಢೀಕರಿಸಿ ನಂತರ ಹೊರಗಡೆ ಬಿಡುವುದಕ್ಕೆ ಕೋಡಿ ಎನ್ನುತ್ತಾರೆ. ಕೆರೆಗೆ ನೀರನ್ನು ಬರುತ್ತಿದ್ದ ಹಾಗೆ ಕೋಡಿ ಬೀಳುತ್ತಿತ್ತು. ಆದರಿಂದ ನಬಾರ್ಡ್ ಬಹಳ ಗಂಭೀರವಾಗಿ ಚಿಂತನೆ ಮಾಡಿರುವುರಿಂದ ಕೇಂದ್ರ ಸರ್ಕಾರದ ಜೊತೆಯಲ್ಲಿಮಾತನಾಡಿ, ನಬಾರ್ಡ್ ಜೊನೆಯಲ್ಲಿ ಜಾಸ್ತಿ ಮಾತನಾಡಿ ಕೆರೆಗಳ ಅಭಿವೃದ್ಧಿಗೆ ಹೆಚ್ಚು ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾಗಿ ವಿದ್ಯುಚ್ಛಕ್ತಿಯ ಕೋಜನರೇಷನ ಬಗ್ಗೆ ತಾವು ಏನೂ ಹೇಳಿಲ್ಲ. ಆಮೇಲೆ ಇನ್ನೊಂದು ಬಹಳ ಮುಖ್ಯವಾದುದು, ದಯವಿಟ್ಟುಗಂಬೀರವಾಗಿ ಉಪಮುಖ್ಯಮಂತ್ರಿಗಳು ಪರಿಗಣಿಸಬೇಕು, ಕೃಷಿ ತೆರಿಗೆಯನ್ನು ಹಾಕಿದ್ದೀರಿ. ಒಟ್ಟು ಕೃಷಿ ವರಮಾನ 40 ಸಾವಿರ 50 ಸಾವಿರ ಮಿರಿದ್ದಾಗ ಎಂದು ಹೇಳಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಕೃಷಿ ತೆರಿಗೆ ಇರತಕ್ಕದ್ದು ಕಾಫಿ ಬೆಳೆಯುವರಿಗೆ, ಕಾರ್ಡಮಮ್ ಬೆಳೆಯುವರಿಗೆ. ಆ ಮೂರೇ ಮೂರು ಬೆಳೆಗೆಳಿಗೆ ಇರತಕ್ಕದ್ದು. ಬೇರೆ ಇನ್ನು ಯಾವುದೇ ಬೆಳೆಗಳಾದ ಭತ್ತ, ರಾಗಿ, ಜೋಳ, ಕಬ್ಬು ಇವು ಯಾವುದಕ್ಕೂ ಇಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಹಣವನ್ನುಫಿಕ್ಸ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಅವರಿಗೆ ಇರುವುದನ್ನು ಕಡಿಮೆ ಮಾಡಿ ಕೊಟ್ಟಿದ್ದೇವೆ. ಯಾರು ಕೃಷಿ ವರಮಾನ ಕೊಡುತ್ತಿದ್ದಾರೆ, ತೆರಿಗೆ ಕೊಡುತ್ತಿದ್ದಾರೆ. ಅವರಿಗೆ ಕಡಿಮೆ ಮಾಡಿ ಕೊಟ್ಟಿದ್ದೇವೆ.

ಶ್ರೀ ಕೆ. ಎಸ್ ಪುಟ್ಟಣ್ಣಯ್ಯ : ಇಲ್ಲಿ ನಮೂದು ಮಾಡಿಲ್ಲ. ಕಾಫಿ ಬೆಳೆ ಎಂದು ನಮೂದು ಮಾಡಿಲ್ಲ.

ಶ್ರೀ ಸಿದ್ಧರಾಮಯ್ಯ : ಅದು ಗೊತ್ತಿರತಕ್ಕ ವಿಚಾರ. ಅವರು ಅಷ್ಟೇ ಕೊಡುವುದು ಅದೇನೂ ಹೊಸದಾಗಿ ಇರುವುದು ಅಲ್ಲ.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಸ್ವಲ್ಪ ಕನ್ಫ್ಯೂಷನ್ ಇದೆ. ನಿಮ್ಮ ಅಭಿಪ್ರಾಯ ಗೊತ್ತಾಯಿತು. ಮಾನ್ಯ ಸಚಿವರು ಹೇಳುತ್ತಿರುವುದು ಅರ್ಥ ಆಗುತ್ತಿದೆ. ಇದರಲ್ಲಿ ನೋಡಿದಾಗ ತಕ್ಷಣಕ್ಕೆ ಏನು ಗೊತ್ತಾಗುತ್ತದೆ ಎಂದರೆ ಕಾಫಿ ತೆರೆಗೆ ಹಾಕಿದ್ದಾರೆ ಎನ್ನತಕ್ಕ ಅಭಿಪ್ರಾಯ ಬರುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ಕ್ಲಾರಿಫೈ ಮಾಡಿ.

ಶ್ರೀರಾಮಯ್ಯ : ತೆರಿಗೆ ಹಾಕಿರುವುದು ಎಲ್ಲಿ ? ಇರುವುದನ್ನೇ ಕಡಿಮೆ ಮಾಡಿದ್ದೇವೆ 45 ಪರ್ಸೆಂಟಿನಿಂದ 40 ಪರ್ಸೆಂಟಿಗೆ. 60ರಿಂದ 50 ಪರ್ಸೆಂಟಿಗೆ ಇಡಿ ಇಂಡಿವಿಜ್ಯುಯಲ್‌ಗೆ 45%

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ನಿಮ್ಮ ಉದ್ದೇಶ ನಮಗೆ ಅರ್ಥಆಗುತ್ತಿದೆ. ಆ ಪುಸ್ತಕದಲ್ಲಿ ಬರೆದಿರತಕ್ಕದ್ದು ನೋಡಿದ ತಕ್ಷಣ ತೆರಿಗೆ ಹಾಕಿದ್ದಾರೆ ಎನ್ನತಕ್ಕ ಭಾವನೆಬರುತ್ತದೆ. ಅದನ್ನು ಸ್ವಲ್ಪ ಕ್ಲಾರಿಫೈ ಮಾಡಿ ಎಂದು ಕೇಳುತ್ತಿದ್ದೇವಷ್ಟೆ

ಶ್ರೀ ಸಿದ್ಧರಾಮಯ್ಯ : ಕೃಷಿ ವರಮಾನ ತೆರಿತಿಗೆಗಿರತಕ್ಕದ್ದು ; ಮೂರೇ ಮೂರು ಬೆಳೆಯನ್ನು ಬೆಳೆಯತಕ್ಕವರಿಗೆ

(ಗೊಂದಲ)

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಹಕಾರಿ ಮಂತ್ರಿಗಳಿಂದ ಉತ್ತರ ಕೊಡಿಸಬೇಕಾಗಿತ್ತು

ಉಪಾಧ್ಯಕ್ಷರು : ಕೊಡಿಸುತ್ತೇನೆ ಸಾಯಂಕಾಲದೊಳಗೆ ಎಂದೂ ಅವರು ಹೇಳಿದ್ದರು. ಗೌಡರಿಗೆ ನಾನು ವಂದನೆಗಳನ್ನು ಹೇಳುತ್ತೇನೆ. ಯಾವ ಉದ್ದೇಶಕ್ಕೋಸ್ಕರ ಎಂದು ಹೇಳುತ್ತೇನೆ. ಮಣ್ಣು ಪರೀಕ್ಷಾ ಕೇಂದ್ರಗಳು ಇವೆ ಅಲ್ಲ ಮಣ್ಣಿಗಿಂತ ಜಾಸ್ತಿ ದುಡ್ಡು ತಿಂದಿದ್ದಾರೆ ಎಂಬುದನ್ನು ಹೇಳಲಿಕ್ಕೆ ಅಸಾಧ್ಯ. ನಿನ್ನೆ ಪೇಪರಿನಲ್ಲಿ ಓದಿದಾಗ ಬಹಳ ಅಸಹ್ಯ ಆಯಿತು.ಕೃಷಿ ಇಲಾಖೆಯ ಅಧಿಕಾರಿಗಳು ಬಂದು ಚಳುವಳಿ ಮಾಡಿ, ಏನು ಸರ್ಕಾರ ಕ್ರಿಮಿನಲ್ ಮೊಕದ್ದಮೆ ಹೂಡಿದೆಯಲ್ಲಾ, ಅದನ್ನು ವಾಪಸ್ ತೆಗೆದುಕೊಳ್ಳ ಎಂದು ಒತ್ತಾಯ ಮಾಡಿದೆ. ಇದಕ್ಕಿಂತ ಕೆಟ್ಟ ವಿಚಾರ ರಾಜ್ಯದಲ್ಲಿ ಯಾವಾಗಲೂ ಆಗಿಲ್ಲ.

ಉಪಾಧ್ಯಕ್ಷರು : ಮಣ್ಣು ಪರೀಕ್ಷಾ ಕೇಂದ್ರ ಅಲ್ಲ. ಭೂ ಸಾರ ಸಂರಕ್ಷಣೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಭೂ ಸಾರ ಸಂರಕ್ಷಣೆ ಬಗ್ಗೆಮಾನ್ಯಉಪಾಧ್ಯಕ್ಷರೇ ನಮ್ಮ ಊರಿನಲ್ಲಿ ಒಂದು ಕಾಯಿ ಕದ್ದವನಿಗೆ ಒಂದೊಂದು ಕಾಯಿಗೆ ಒಂದೊಂದು ಸಾವಿರ ರೂಪಾಯಿ ದಂಡ ಹಾಕುತ್ತೇವೆ. ಇಡೀ ಊರಿನವರೆಲ್ಲಾ ಸೇರಿ ಅವನು ಕದ್ದಿರುವುದು ಸರಿ, ಅವನಿಗೆ ದಂಡ ಹಾಕುವುದು ಬೇಡ ಎಂದು ಹೇಳಿದ ಹಾಗಾಯಿತು. ಆದ್ದರಿಂದ ಅತ್ಯಂತ ಗಂಭೀರವಾಗಿವಿಚಾರಮಾಡಿ ಮಂತ್ರಿಗಿರಿ ಇರುತ್ತದೆ, ಹೋದರೆ ಹೋಯಿತು. ಆದರೆ ಆ ಕ್ರಿಮಿನಲ್ಸ್ ಯಾರನ್ನೂ ಬಿಡಬಾರದು. ಏಕೆಂದರೆ ಅತಿ ಮುಖ್ಯವಾದ ಕೃಷಿ ಕ್ಷೇತ್ರದಲ್ಲಿ ಭೂಸಾರ ಸಂರಕ್ಷಣೆ ಮಾಡತಕ್ಕಂಥಹ ಕೆಲಸ ಬಹಳ ಮುಖ್ಯವಾದುದು ಕುಯ್ಯುವುದೂ ಒಂದೇ. ಆದ್ದರಿಂದ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದೀರಿ. ಅವರನ್ನು ಹ್ಯಾಂಗ್ ಮಾಡಿದರೂ ತಪ್ಪಿಲ್ಲ. ಆದ್ದರಿಂದ ದಯವಿಟ್ಟು ಅವರ ಬಗ್ಗೆ ತಾವು ಸೀರಿಯಸ್ಸಾಗಿ ಇರಬೇಕು. ನನಗೆ ಆ ವಿಷಯದಲ್ಲಿ ತಾವು ಸೀರಿಯಸ್ಸಾಗಿರುತ್ತೀರಿ, ಆ ಕೆಲಸ ಮಾಡುತ್ತಿದ್ದೀರಿ ಎಂದು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇನ್ನು ಕೋಜನರೇಷನ್ ವಿಚಾರ.

ಶ್ರೀ ಕೆ. ಎಸ್ ಪುಟ್ಟಣ್ಣಯ್ಯ : ನನಗೆ ಇನ್ನೂ ಎರಡು ತಾಸು ಅವಧಿ ಬೇಕು.

ಉಪಾಧ್ಯಕ್ಷರು : ಎರಡು ಗಂಟೆ ಬೇಕಾ? ತಾವು ಮಾತನಾಡಿದ ಮೇಲೆ ಮಾನ್ಯ ಮೊಯಿಲಿಯವರು ಮಾತನಾಡಬೇಕು, ಮಾನ್ಯ ವೈ ರಾಮಕೃಷ್ಣ ಅವರು ಮಾತನಾಡಬೇಕು. ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಇನ್ನೂ ಬಿಲ್‌ಗಳು ಇವೆ.

ಶ್ರೀ ಕೆ ಎಸ್ ಪುಟ್ಟಣ್ಣಯ್ಯ : ಇನ್ನೂ ನಾನು 24ನೇ ಪುಟದಲ್ಲಿದ್ದೇನೆ. ಇನ್ನೂ 40 ಪೇಜು ಇದೆ.

ಉಪಾಧ್ಯಕ್ಷರು : ತಾವು ಮಾತನಾಡುವುದಕ್ಕೆಪ್ರಾರಂಭ ಮಾಡಿ45 ನಿಮಿಷ ಆಯಿತು, ಬೇಗ ಮುಗಿಸಿ.

ಶ್ರೀ ಕೆ. ಎಸ್ ಪುಟ್ಟಣ್ಣಯ್ಯ : ಸಿದ್ದರಾಮಯ್ಯನವರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ನಿಜವಾಗಿಯೂ ಬಡತನದ ನೋವಿನಲ್ಲಿರತಕ್ಕ ಜನರ ಬಗ್ಗೆ ಬಜೆಟ್‌ನಲ್ಲಿ ರಿಯಾಯಿತಿ ಕೊಟ್ಟಿದ್ದೀರಿ, ವಿಶೇಷವಾಗಿ ಐಟಿಐ ಬಗ್ಗೆ. ಐಟಿಐ ಕಾಲೇಜಿಗೆ ಅನುದಾನ ಕೊಡುವುದರ ಮೂಲಕ ಒಳ್ಳೆಯದುಮಾಡಿದ್ದೀರಿ. ಏಕೆಂದರೆ ಈ ದೇಶದಲ್ಲಿ ಎಲ್ಲಾ ಸರ್ಕಾರಗಳು ಇಂಜಿನಿಯರ್ ಓದುವವನಿಗೆ ಡಾಕ್ಟರ್ ಓದುವವನಿಗೆ ಬಹಳ ಪ್ರಾಮುಖ್ಯತೆ ಕೊಡುತ್ತಾರೆ. ಸುಮಾರು ಎಂಟು ವರ್ಷದಿಂದ ಹೋರಾಟ ಮಾಡುತ್ತಿದ್ದರೂ, ಬಹಳ ಬಡತನ ರೇಖೆಯಲ್ಲಿರತಕ್ಕ ಮಧ್ಯಮ ವರ್ಗದ ಕುಟುಂಬದವರಿಗೆ ಖಾಸಗಿ ಐಟಿಐಗೆ ಅನುದಾನ ಕೂಡುವುದರ ಮೂಲಕ ಒಂದು ಉತ್ತಮವಾದಂತಹ ಕೆಲಸವನ್ನು ಮಾಡಿದ್ದೀರಿ.ಈ ವಿಷಯದಲ್ಲಿ ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಜಲ ವಿದ್ಯುತ್ ಬಗ್ಗೆ ತಾವು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು ಆ ವಿಚಾರವಾಗಿ ಇಲ್ಲಿ ಇನ್‌ಸಿಸ್ಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬಹುದು ಅದಕ್ಕೆ ಕಾರ್ಖಾನೆಗಳನ್ನು ಇನ್‌ವಾಲ್ವ್‌ಮೆಂಟ್ ಮಾಡಬೇಕು ಹಣವನ್ನು ಕ್ರೋಢೀಕರಿಸಿ ಏಕೆಂದರೆಕೊಚೆಂಟ್ರಿಕ್ಸ್ ಮಾಡುವುದಕ್ಕೆ ಹೋಗುತ್ತೀರಿ ಸಾವಿರಾರು ಕೋಟಿ ರೂಪಯಿಖರ್ಚು ಮಾಡಿ ಕೋ-ಜನರೇಷನ್ ಬಗ್ಗೆತಾವು ಚಿಂತನೆ ಮಾಡಬೇಕು. ಕೋಜನರೇಷನ್ ಬಗ್ಗೆ ಚಿಂತನೆ ಮಾಡಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕಡ್ಡಾಯ ವಾಗಿ ಶುಗರ್ ಫ್ಯಾಕ್ಟರಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕ ಕೆಲಸ ಮಾಡಬೇಕು.ಮತ್ತು ಕೆಪಿಸಿ ವಿಚಾರ ತಾವು ತಮ್ಮ ಭಾಷಣದಲ್ಲಿ ಹೇಳಬೇಕು. ಕರ್ನಾಟಕ ಪವರ್ ಕಾರ್ಪೊರೇಷನವರು ಇದುವರೆಗೆ 300 ಪ್ರಾಜೆಕ್ಟನ್ನು ಐಡೆಂಟಿಫೈ ಮಾಡಿದ್ದಾರೆ. ಅದಕ್ಕೆ ಯಾವ ರೀತಿ ಸರ್ಕಾರ ಹಣವನ್ನು ಕ್ರೋಢಿಕರಿಸುತ್ತದೆ? ಯಾವ ಮಟ್ಟಕ್ಕೆ ಸರ್ಕಾರ ಇಂಪ್ಲಿಮೆಂಟ್ ಮಾಡುತ್ತದೆ?

ಎಂಬ ಬಗ್ಗೆ ಉತ್ತರವನ್ನು ಕೊಡಬೇಕು. ಆಮೇಲೆ ಕೊಠಡಿಯನ್ನು ಕಟ್ಟುವುದಕ್ಕೆ ಹಣವನ್ನು ಕೊಟ್ಟಿದ್ದೀರಿ. 50ನೇ ಸ್ವಾತಂತ್ರ್ಯ ವರ್ಷದ ವಿಚಾರದ ಆಧಾರದ ಮೇಲೆ ಎಷ್ಟು ಕೊಠಡಿ ಕಟ್ಟುವುದಿಕ್ಕೆ ಹಣವನ್ನು ಕೊಡುತ್ತೀರಿ? ಯಾವಾಗ ಹೊಸ ಕೊಠಡಿಗೆ ಹಣವನ್ನು ಕೊಡುತ್ತೀರಿ? ಹಳೆಯ ಕೊಠಡಿಗಳು ಏನಾಗಿವೆ? ಎಂದು ಮಾತ್ರ ನೋಡುವುದಿಲ್ಲ. ಬರೇ ಹೊಸ ಕಟ್ಟಡಗಳು. ಯಾವುದೇ ಇಲಾಖೆ, ಲೋಕೋಪಯೋಗಿ ಇಲಾಖೆ ಆಗಬಹುದು, ಬೇರೆ ಇಲಾಖೆಗಳು ಆಗಬಹುದು. ಎಲ್ಲಾ ಇಲಾಖೆಗೆ ಹೊಸ ಹೊಸ ಕಟ್ಟಡವನ್ನು ಕಟ್ಟಲು ಹಣವನ್ನು ಕೊಡುತ್ತಿದ್ದೇವೆ. ಹಳೆಯ ಕಟ್ಟಡಗಳು ಏನಾಗಿವೆ ಎಂದರೆ ಎಲ್ಲ ಸ್ಕೂಲಿನಲ್ಲಿ ಮಕ್ಕಳು ಹೆಲ್ಮೆಟ್ ಹಾಕಿಕೊಂಡು ಕುಳಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ದಯವಿಟ್ಟು ನಿಮಗೆ ಶಾಲೆಯ ಬಗ್ಗೆ ನಿಜವಾಗಿ ಚಿಂತನೆ ಇದ್ದರೆ ಆರ್‌ಸಿಸಿ ಬಿಲ್ಡಿಂಗ್ ಕಟ್ಟತಕ್ಕ ಕೆಲಸ ಮಾಡಿ. ಒಂದರ 25 ಅಥವಾ 30 ಕೊಠಡಿ ಕಡಿಮೆ ಮಾಡಿ, ಹೆಂಚಿನ ಮನೆ ಕಟ್ಟಬೇಡಿ. ಏಕೆಂದರೆ ಇನ್ನು ಮೇಲೆ ಜಾಗ ತರಲು ಸಾಧ್ಯವಿಲ್ಲ. ಎಲ್ಲ ಹಳ್ಳಿಯಲ್ಲೂ ಜಾಗ ಇಲ್ಲ. ಒಂದು ವರ್ಷ ಇದು ರೂಮ್ ಕಟ್ಟಿದರೆ ಅದರ ಮೇಲೆ ಮತ್ತೆ ಐದು ರೂಮುಗಳನ್ನು ಕಟ್ಟಬಹುದು. ಕೇವಲ ನಾವೇನೋ 50 ಸಾವಿರ ರೂಪಾಯಿ ಕೊಡುತ್ತಿದ್ದೇವೆ, ಏನೋ ಒಂದು ಕಟ್ಟಡ ಕಟ್ಟಲಿ. ಏನೋ ಸ್ಕೂಲಿನಲ್ಲಿ ಮಕ್ಕಳು ಕುಳಿತಿತು ಹೋಗಲಿ ಎನ್ನತಕ್ಕ ಯೋಚನೆ ಮಾಡಬಾರದು ತಾವು ಬದಲಾವಣೆ ಮಾಡಬೇಕು. ಆಮೇಲೆ ಆರೋಗ್ಯದ ಬಗ್ಗೆ ಬಹಳ ಗಂಭೀರವಾಗಿ ಹಣವನ್ನು ಕೊಟ್ಟಿದ್ದೇವೆ,400 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದೀರಿ, ಅದರ ಉಪಯೋಗ, ಉಪಯುಕ್ತತೆ ಎಷ್ಟು? ಎಂದು ಗಂಭೀರವಾಗಿ ಚಿಂತನೆ ಮಾಡಬೇಕು. ಯಾವುದೇ ಮೊಬೈಲ್ ವ್ಯಾನ್ ವರ್ಕ್ ಮಾಡುತ್ತಿಲ್ಲ. ಈಗಾಗಲೇ ಕೃಷಿ ಕಾರ್ಮಿಕರಿಗೆ ನೀಲಿ ಕಾರ್ಡ್ ಕೊಡುತ್ತೇವೆ, ಹಸಿರು ಕಾರ್ಡ್ ಕೊಡುತ್ತೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಹೆಲ್ತ್ ಕಾರ್ಡ್ ಕೊಡುತ್ತೇವೆಂದು ಹೇಳುತ್ತೀರಿ. ಕರ್ನಾಟಕದಲ್ಲಿ ಒಂದು ಕೋಟಿ ಅಸಂಘಟಿತ ಕಾರ್ಮಿಕರು ಇರುವುದು. ಒಂದು ಕೋಟಿ ಜನರಿಗೆ ತಾವು ನಿಜವಾಗಿ ಬಡತನದ ಬಗ್ಗೆ, ಬಡವರ ಬಗ್ಗೆ ಆಲೋಚನೆ ಇದ್ದರೆ ಆರೋಗ್ಯದ ಬಗ್ಗೆ ಕಾರ್ಡ್ ಕೊಡುವಂತಹ ವ್ಯವಸ್ಥೆ ಆಗಬೇಕು. ಹಳ್ಳಿಯಲ್ಲಿ ಬಡವರು, ನೋವಿನಲ್ಲಿರುವವರು, ಆ ನೋವಿನಲ್ಲಿರುವವರಿಗೆ ಅತ್ಯಂತ ದೊಡ್ಡ ಖಾಯಿಲೆ ಯಾವುದು ಎಂದು ಅನಿಮಿಕ್. ಬಹಳ ಕೆಟ್ಟ ಖಾಯಿಲೆ. ಇದು ನಾನು ಮಾರನೆಯ ದಿವಸ ಕಾರಿನಲ್ಲಿ ಹೋಗುತ್ತಿದ್ದೆ. ಒಬ್ಬ ಹುಡುಗ ಗಾರೆ ಕೆಲಸ ಮಾಡುತ್ತಿದ್ದ. ನಾನೇ ಇಳಿದು ಅವನ ಮುಖ ನೋಡಿ ಕಣ್ಣನ್ನು ನೋಡಿದೆ. ಒಂದು ಚೂರೂ ರಕ್ತ ಇಲ್ಲ. ತಕ್ಷಣ ನಾನೇ ಕರೆದುಕೊಂಡು ಹೋಗಿ ಒಂದು ಐರನ್ ಕಂಟೆಂಟ್ಸ್ ಟಾನಿಕ್, ಮತ್ತು ವರ್ಮ್ಸ್‌ಗೆ ಒಂದು ಮಾತ್ರೆ ಕೊಡಿಸಿ ಬಿಟ್ಟು ಹೋದೆ. ನಿಜವಾಗಿ

ಬಡತನದಲ್ಲಿರುವವರಿಗೆ ಯಾವುದೇ ಖಾಯಿಲೆ ಇಲ್ಲ. ಅನಿಮಿಕ್ ಮಾತ್ರ ಇರುವುದು. ನೋವಿನಲ್ಲಿರತಕ್ಕ ಎಲ್ಲ ಜನರ ಮೆಡಿಕಲ್ ಚೆಕಪ್ ಮಾಡಿಸಿ. ಅದಕ್ಕೋಸ್ಕರ ಹಣವನ್ನು ಖರ್ಚು ಮಾಡಬೇಕು. ಅದಕ್ಕೆ ಮೊಬೈಲ್ ಯೂನಿಟ್ ಇಂಟ್ರಡ್ಯೂಸ್ ಮಾಡಬೇಕು. ಕೇವಲ ಬಜೆಟ್ ಹಣವನ್ನು ಪ್ರಾವಿಷನ್ ಮಾಡಿಕೊಳ್ಳುವುದು ಅಲ್ಲ. ಆರೋಗ್ಯದ ಬಗ್ಗೆ ತಾವು ಚಿಂತನೆ ಮಾಡಬೇಕು. ಆಮೇಲೆ ರಸ್ತೆಗಳ ವಿಚಾರ ರಸ್ತೆಗಳು ಎಂದರೆ ಲೋಕೋಪಯೋಗಿ ರಸ್ತೆ, ಜಿಲ್ಲಾ ಪರಿಷತ್ ರಸ್ತೆಗಳು, ಇರಿಗೇಷನ್ ಟ್ರಾಕ್ ರೋಡ್ಸ್. ಎಪಿಎಂಪಿ ರಸ್ತೆಗಳು, ಕಾಡಾ ರಸ್ತೆಗಳು. ಆಮೇಲೆ ಯಾವ್ಯಾವ ರಸ್ತೆಗಳು ಯಾರ್‍ಯಾರಿಗೆ ಸೇರಿವೆ ಎಂದು ಗೊತ್ತಿಲ್ಲ. ಇನ್ನೂ ಕ್ಲಿಯರ್‌ಕಟ್ ಆಗಿಲ್ಲ ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ 1986ನೇ ಇಸವಿಯಿಂದ 1996ನೇ ಇಸವಿಯವರೆಗೆ 1120 ಕಿಲೋ ಮೀಟರ್ ರಸ್ತೆ ಯಾರಿಗೆ ಸೇರಿದೆ ಎಂದು ಗೊತ್ತಿಲ್ಲ. ಅವು ಎಂತಹ ರಸ್ತೆ? ಕೃಷಿಗೆ ಸಂಬಂಧಪಟ್ಟಂತಹ ಎಲ್ಲಾ ವಸ್ತುಗಳನ್ನು ಸಾಗಾಣಿಕೆ ಮಾಡತಕ್ಕಂಥ ರಸ್ತೆ 1120 ಕಿಲೋ ಮೀಟರ್ ರಸ್ತೆ. ಇದುವರೆಗೆ ಯಾರಿಗೆ ಸೇರಿದೆ ಎನ್ನುವುದೇ ಇಲ್ಲ. 1986ರಿಂದ ಇಲ್ಲಿಯವರೆಗೆ ಆ ರಸ್ತೆಗೆ ಒಂದು ಪೈಸೆ ಹಣ ಕೊಟ್ಟಿಲ್ಲ. ಸರ್ಕಾರ ರಸ್ತೆಗಳ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಏನೋ ಹಣ ಕೊಡುತ್ತಾರೆ ಎನ್ನುವ ದೃಷ್ಟಿಯಲ್ಲಿ ಯೋಚನೆ ಮಾಡಬಾರದು. ರಸ್ತೆಗೆ ಹೆಚ್ಚು ಹಣವನ್ನು ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು. ಆಮೇಲೆ ವಸತಿ ವಿಚಾರ. ಮಾನ್ಯ ಉಪಾಧ್ಯಕ್ಷರೇ 11 ಲಕ್ಷ ಜನ ಫಲಾನುಭವಿಗಳನ್ನು ಗುರುತಿಸಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಸತಿಯನ್ನು ಕೊಟ್ಟಿದ್ದೀರಿ? ಎಷ್ಟು ಭೂಮಿ ಕೊಂಡಿದ್ದಾರೆ? ಎಷ್ಟು ಜನಕ್ಕೆ ಆ ಭೂಮಿ ಕೊಡುವುದಕ್ಕೆ ಸರ್ಕಾರ ಎಷ್ಟು ಹಣ ಕೊಟ್ಟಿದೆ? ಇದನ್ನು ಹೇಳಬಾರದು. ಯಾವುದೇ ಜನರಿಗೆ ವಸತಿಯನ್ನು ಇದುವರೆಗೆ ಕೊಟ್ಟಿಲ್ಲ. ನಾನೇ ನನ್ನ ಕ್ಷೇತ್ರದಲ್ಲಿ ನೋಡಿದ್ದೇನೆ. ಯಾವುದೇ ಫಲಾನುಭವಿಗಳಿಗೆ ಸೈಟ್ ಕೊಡತಕ್ಕಂಥ ವ್ಯವಸ್ಥೆ ಇಲ್ಲ. ಆಮೇಲೆ 17 ಗ್ರಾಮ ನೀರಾವರಿ ಪ್ರದೇಶ ಇದೆ. 172 ಗ್ರಾಮದಲ್ಲಿ ನೀರಾವರಿ ಪ್ರದೇಶ ಇದೆ. ಇನ್ನು ಬಾಕಿ ಎಲ್ಲಾ ಪ್ರದೇಶವೂ ಮಳೆ ಆಧಾರಿತ ಪ್ರದೇಶ. ಹಾಗಾದರೆ ನೀರಾವರಿ ಪ್ರದೇಶದಲ್ಲಿ ಕೊಡಬಾರದಾ? ನೀರಾವರಿ ಪ್ರದೇಶದ ರೈತರಿಗೆ ಬಡತನದಲ್ಲಿ ಕೂಲಿ ಮಾಡಿಕೊಂಡಿರತಕ್ಕ ಜನರಿಗೆ ಕೊಡಬಾರದಾ ಎಂಬುದನ್ನು ತಾವೇ ಹೇಳಿ. ಇನ್ನು ಆಶ್ರಯ ಮನೆ ಯೋಜನೆಗಳಿಗೆ ಈಗೇನೊ ಹೊಸದಾಗಿ ಆಲೋಚನೆ ಮಾಡಿ, 20 ಸಾವಿರದೊಳಗೆ ಶೌಚಾಲಯವನ್ನೂ ಸೇರಿಸಿ ಬಿಟ್ಟಿದ್ದಾರೆ.

ಮೊದಲು ಬರೀ ಮನೆಗೆ 20 ಸಾವಿರ ಕೊಡುತ್ತಿದ್ದರು. ಈಗ 20 ಸಾವಿರದಲ್ಲೇ ಮನೆ ಶೌಚಾಲಯ ಎರಡೂ ಕಟ್ಟಿಕೊಳ್ಳಬೇಕು. ಬೆಳಿಗ್ಗೆ ಇದರ ಬಗ್ಗೆ ಚರ್ಚೆ ನಡೆಯಿತು, ಕೆಲವು ಇಓಗಳು ಒಬ್ಬ ಸ್ವಂತ 10 ಸಾವಿರ ಜೊತೆ ಮಾಡಿಕೊಂಡು ಎರಡು ಒಪ್ಪಾರ ಹಾಕಿ

ಜೊತೆಗೊಂದು ಹಿಪ್ಪಾರ ಹಾಕಿಕೊಂಡು ನಾಲ್ಕು ದನ ಸಾಕಿಕೊಂಡು ಜೀವನ ಮಾಡುತ್ತಿದ್ದರೆ ಅಂಥವರಿಗೆ ಹಣ ಕೊಡದೆ ಇರುವ ವ್ಯವಸ್ಥೆ ಇದೆ. ಸರ್ಕಾರದಿಂದ ದಯವಿಟ್ಟು ಒಂದು ಸರ್ಕ್ಯುಲರ್ ಕಳುಹಿಸಬೇಕು. 20 ಸಾವಿರವನ್ನು 4 ಹಂತದಲ್ಲಿ ಕೊಡುವುದನ್ನು ಆ ಮನೆ ಕಟ್ಟಿಕೊಳ್ಳಲು ವಿನಿಯೋಗಿಸಬೇಕು. ಅದರ ಮೇಲೆ 10 ಸಾವಿರ ಸ್ವಂತ ದುಡ್ಡಿನಲ್ಲಿ ಹೆಚ್ಚುವರಿ ಮನೆ ಕಟ್ಟಿಕೊಳ್ಳಲಿ. ಅದನ್ನು ವಿರೋಧ ಮಾಡುವಂತಹ ಕೆಲಸ ನಿಲ್ಲಿಸಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಸೂಚನೆ ಕೊಡಬೇಕು. ಯುವಜನ ಸೇವೆ ಮತ್ತು ಕ್ರೀಡೆ. ಹೇಗಾಗಿದೆ ಅಂದರೆ ನಮ್ಮ ಹಳ್ಳಿ ಕಡೆ ಮುತ್ತೈದೆಪೂಜೆ ಎಂದು ಮಾಡುತ್ತಾರೆ, ವರ್ಷಕ್ಕೊಂದು ಸಲ ಎಲ್ಲರನ್ನೂ ಅರಿಶಿನ ಕುಂಕುಮಕ್ಕೆ ಕರೆಯುತ್ತಾರೆ ಯಾಕೆಂದರೆ ನನ್ನ ಗಂಡ ಇನ್ನೂ ಬದುಕಿದ್ದಾನೆ ಎಂದು ಹಾಗೆಯೋ ವರ್ಷಕ್ಕೊಂದು ಸಲ ಕ್ರೀಡಾ ಇಲಾಖೆಗೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಳ್ಳುತ್ತೀರಿ. ಯಾವುದೇ ದೇಶ, ಗೆಲಿಲಿಯೊ, ಪ್ಲೋಟೋ ಒಂದು ಮಾತು ಹೇಳುತ್ತಾನೆ. ಯಾವ ದೇಶದಲ್ಲಿ ಯಾವ ಶಾಲೆಯಲ್ಲಿ ಕ್ರೀಡಾಂಗಣ ಇಲ್ಲವೋ ಅಂತಹ ಶಾಲೆ that School is devit's school ಎಂದು. ದೆವ್ವಗಳು ವಾಸಿಸುವಂತಹ ಶಾಲೆ. ಯಾವುದೇ ದೇಶ ದೈಹಿಕ ಸಂಪತ್ತಿನ ಬಗ್ಗೆ ಯೋಚನೆ ಮಾಡದೆ ಇದ್ದರೆ ಆದೇಶ ಯಾವುದೇ ಕಾರಣಕ್ಕೂ ಉದ್ಧಾರ ಆಗಲು ಸಾಧ್ಯವಿಲ್ಲ. ಆದ್ದರಿಂದ ಬೇರೆ ದೇಶದಲ್ಲಿ ಕ್ರೀಡೆ ಪ್ರೊಫೆಷನಲ್, ನಮ್ಮ ದೇಶದಲ್ಲಿ ಕ್ರೀಡೆ ಬಗ್ಗೆ ಯೋಚಿಸುವ ಯಾವುದೇ ವ್ಯಕ್ತಿ ಮೊದಲು ಊಟದ ಚಿಂತೆ ಮಾಡುವಂತಹ ಪರಿಸ್ಥಿತಿ. ಅದಕ್ಕೇ ನಾವು 90 ಕೋಟಿ ಜನರಿದ್ದರೂ ಒಂದು ಚಿನ್ನದ ಪದಕವಿಲ್ಲ. ದಯವಿಟ್ಟು ಈ ಇಲಾಖೆಗೆ ಹೆಚ್ಚು ಹಣ ಕೊಡಬೇಕು. ದೇಹ ಎಂಬುದು ದೊಡ್ಡ ಸಂಪತ್ತು, ದೇಹಶಕ್ತಿ ಚೆನ್ನಾಗಿದ್ದರೆ ಜ್ಞಾನಸಂಪತ್ತು ಬೆಳೆಯಲು ಸಾಧ್ಯ. ತಾವು ದಯವಿಟ್ಟು ಯೋಚನೆ ಮಾಡಬೇಕು. ಇದನ್ನು ಯಾವ ಉದ್ದೇಶದಿಂದ ಸೃಷ್ಟಿ ಮಾಡಿದೆ ಎಂದು ಇಡೀ ಪ್ರಪಂಚದ ಮಾನವಶಾಂತಿಗೆ ಜನಾಂಗಗಳ ಸಮಾನತೆಗೆ ಅದರ ಜ್ಞಾನಾಭಿವೃದ್ಧಿಗೆ ಮುಂದಿನ ಪೀಳಿಗೆ ಯಾವಾಗಲೂ ಸದೃಢವಾಗಿ ಆರೋಗ್ಯವಾಗಿ ಇರಬೇಕೆಂದು ಹೇಳುತ್ತಾ, ಪಠ್ಯಪುಸ್ತಕ ಎಷ್ಟು ಕಡ್ಡಾಯವೋ ಕ್ರೀಡೆ ಅಷ್ಟೇ ಕಡ್ಡಾಯವಾಗಿರ ಬೇಕೆಬುಂದೇನು ಆಶೆ ಎಂದು ಹೇಳಿದ್ದಾನೆ ಕುಬರ್ತಿ ಅನ್ನುವವನು. ಮಾನ್ಯ ಶಿಕ್ಷಣಸಚಿವರು ಯೋಚನೆ ಮಾಡಬೇಕು. 1936ರಲ್ಲಿ ಅವನು ಸತ್ತು ಹೋದಾಗ ಅವನ ಹೃದಯವನ್ನು ಬಗೆದು ಅಥೆನ್ಸ್‌ನಲ್ಲಿ ತೆಗೆದುಕೊಂಡು ಹೋಗಿ ಹೂಳಿದರು. ಏತಕ್ಕೋಸ್ಕರವೆಂದರೆ ಪ್ರಪಂಚದ ಮಾನವ ಜನಾಂಗದಲ್ಲಿ ಹೃದಯದ ಮಿಡಿತದ ಆಶೆಗಳು ಸದಾಕಾಲ ಬೆಳಗುತ್ತಾ ಇರಲಿ ಎಂದು, ಕ್ರೀಡಾಮಂತ್ರಿಗಳಿಗೆ ಅದು ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಸಪ್ಪಗೆ ಕೂತಿದ್ದೀರಿ, ಮಾನ್ಯ ಉಪಮುಖ್ಯಮಂತ್ರಿಗಳು ಕ್ರೀಡಾರಂಗಕ್ಕೆ ಹೆಚ್ಚು ಹಣವನ್ನು ಕೊಡಬೇಕು.

ಶ್ರೀ ಅಜಯಕುಮಾರ್ ಸರನಾಯಕ್ : ಅಧ್ಯಕ್ಷರೇ, ಪ್ರಥಮ ಬಾರಿಗೆ ಕ್ರೀಡೆಗಳಿಗಾಗಿ ಎರಡು ವರ್ಷಗಳಲ್ಲಿ 100 ಕೋಟಿ ರೂ. ಖರ್ಚು ಮಾಡಿದ್ದು ನಮ್ಮ ಸರ್ಕಾರ ಬಂದ ಮೇಲೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಸಾಲುವುದಿಲ್ಲ, ರಾಷ್ಟ್ರೀಯ ಕ್ರೀಡೆಗಳನ್ನು ಬೆಂಗಳೂರಿನಲ್ಲಿ ಮಾಡುತ್ತೀರಿ, ನಮ್ಮ ಊರಿನಲ್ಲೇನು ಮಾಡುವುದು ನಾವು? ನಿಜವಾದ ಶಕ್ತಿ ಹಳ್ಳಿಯಲ್ಲಿರುವುದು. ನನ್ನ ಜೊತೆಗೊಂದು ಸಮಿತಿ ಮಾಡಿಕೊಡಿ, ನಾನೇ ಐಡೆಂಟಿಫೈ ಮಾಡಿಕೊಡುತ್ತೇನೆ, ಇನ್ನೈದುವರ್ಷ ನನಗೆ ಟೈಂ ಕೊಡಿ, ವಿಜಶ್ವ ಚಾಂಪಿಯನ್ ಮಾಡಿಕೊಡುತ್ತೇನೆ, ಆ ಜನಕ್ಕೆ ನೀವು ದುಡ್ಡು ಕೊಡಿ ಸಾಕು. ಆದ್ದರಿಂದ ತಾವು ಯುವಜನ ಕ್ರೀಡೆ ಇಲಾಖೆಗಳಿಗೆ ಹೆಚ್ಚು ಹಣ ಕೊಡಬೇಕು. ಇನ್ನೂ ಬಹಳ ಮಾತನಾಡಬೇಕು, ಈಗಾಗಲೇ ತಾವು ಬೆಲ್ ಹೊಡೆಯುತ್ತಿದ್ದೀರಿ ಪದೇಪದೇ ಬೆಲೆ ಹೊಡೆಸಿಕೊಳ್ಳುವುದು ನನಗಿಷ್ಟವಿಲ್ಲ, ಅದ್ದರಿಂದ ನಾನು ಹೇಳಿರುವ ವಿಚಾರಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಬೇಕೆಂದು ತಿಳಿಸುತ್ತ ನನ್ನ ಮಾತು ಮುಗಿಸುತ್ತೇನೆ, ನಮಸ್ಕಾರ.

+ ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಮೂರನೇ ಬಾರಿ ಮಂಡಿಸಿದಂತಹ ಅಯವ್ಯಯ ಇವತ್ತು ಚರ್ಚೆಗೆ ನಮ್ಮ ಮುಂದಿದೆ. ಎರಡು ಮೂರು ವರ್ಷಗಳಿಂದ ಈ ಬಗ್ಗೆ ಆದ ಸದನದ ಚರ್ಚೆಯನ್ನು ನಾನು ನೋಡಿದಾಗ ಮೂಲಭೂತವಾಗಿ ನಾವೇನು ವಿಷಯ ಸಮಿತಿಗಳನ್ನು ಮಾಡಿದ್ದೇವೆ ಅದರಿಂದ ಇವತ್ತು ಒಂದು ರೀತಿಯಲ್ಲಿ ಆಯವ್ಯಯದ ಒಂದು ಸಿದ್ಧಾಂತಿಕ ತಳಹದಿಯನ್ನೇ ಇವತ್ತು ಕಡಿಯುತ್ತಿದ್ದೇವೆಂದು ನನಗೆ ಅನುಭವವಾಗುತ್ತಿದೆ ಎಕೆಂದರೆ ಇಲ್ಲಿ ಓಟ್ ಅನ್ ಅಕೌಂಟ್ ಮಾಡಲೇಬೇಕು. ವಿಷಯಸಮಿತಿಗಳು ಚರ್ಚೆ ಮಾಡದೆ ಬೇಡಿಕೆಗಳನ್ನು ಇಲ್ಲಿ ಚರ್ಚೆ ಮಾಡಲು ಆಗುವುದಿಲ್ಲ. ಅದನ್ನು ಒಪ್ಪಿಗೆ ಕೊಡಲೂ ಸಾಧ್ಯವಾಗುವುದಿಲ್ಲ. ಸರ್ಕಾರದವರು ಇದಕ್ಕೆ ಆರಾರು ತಿಂಗಳು ಅವಧಿ ತೆಗೆದು ಕೊಂಡು 6 ತಿಂಗಳ ಮೇಲೆ ಬೇಡಿಕೆ ಚರ್ಚೆಗೆ ಬಂದು, ತಮಗೆ ಗೊತ್ತಿದೆ ಯಾವ ಅಧಿಕಾರಶಾಹಿಯೂ 6 ತಿಂಗಳವರೆಗೆ ಕೆಲಸ ಮಾಡುವುದಿಲ್ಲ, ಯಾವ ಸ್ಕೀಮನ್ನು ಮಂಜೂರು ಮಾಡುವುದಿಲ್ಲ ಅಂದರೆ ಸೆಪ್ಟೆಂಬರ್ ಅಕ್ಟೋಬರ್ ಬರುವಾಗ ಸ್ಕೀಂಗಳು ತಯಾರಾಗುತ್ತವೆ ಜನವರಿಯಿಂದ ಅನುಷ್ಠಾನವಾಗಲಿಕ್ಕೆ ಪ್ರಾರಂಭವಾಗುತ್ತದೆ. ಇಡೀ ವರ್ಷದ ಆಯುವ್ಯಯಕ್ಕೆ ಯಾವುದೇ ಅರ್ಥ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಸರ್ಕಾರದಲ್ಲಿಮಾಡಲಿಕ್ಕೆ ಆಗುವುದಿಲ್ಲ. ನಾನು ತಪ್ಪು ಮಾಡಿದನೇನೋ ಎಂದು ಅನ್ನಿಸುತ್ತದೆ ಏಕೆಂದರೆ ಈ ವಿಷಯ ಸಮಿತಿಗಸು ಆಗಲಿಕ್ಕೆ ನಾನೇ ಕಾರಣ, ಅದು ಕೇರಳದಲ್ಲಿತ್ತು, ಬೇರೆ ಯಾವ ರಾಜ್ಯಗಳಲ್ಲೂ ಇರಲಿಲ್ಲ ನಾನು ಕರ್ನಾಟಕದಲ್ಲಿ ಮಾಡೋಣ ಎಂದು ಹೊರಟರೆ ಬಹುಶಃ ಪೂರ್ತಿ ಅಭಾಸವಾಗುತ್ತಿದೆ ನನ್ನ ವಿನಂತಿ ಏನೆಂದರೆ ದಯಮಾಡಿ ಸದನದ ಒಂದು

ಸಮಿತಿ ಮಾಡಿ ಅದರ ಬಗ್ಗೆ ಪುನರ್ವಿಮರ್ಶೆ ಮಾಡಿ. ಒಂದೋ ಇವನ್ನು ಅಬಾಲಿಷ್ ಮಾಡಿ ಕನ್‌ಸಲ್ಟೇಟಿವ್ ಸಮಿತಿಗಳನ್ನು ರಿವೈವ್ ಮಾಡೋಣ ಕನ್‌ಸಲ್ಟೇಟಿವ್ ಸಮಿತಿ ಮಾಡಿದ್ದ ಕೆಲಸವನ್ನೇ ಇವತ್ತು ವಿಷಯಸಮಿತಿಗಳು ಮಾಡುತ್ತಿವೆ. ಇಲ್ಲದಿದ್ದರೆ ಕಟ್ಟುನಿಟ್ಟಾಗಿ ಬಜೆಟ್ ಮಂಡನೆಯಾದ ಮೇಲೆ ಮೇ ಬಳಗೆ ಒಂದೇ ತಿಂಗಳೊಳಗೆ ಈ ವರದಿಗಳು ಬಂದು ಈ ಬೇಡಿಕೆಗಳಿಗೆ ಓಟ್ ಮಾಡಿದ್ದರೆ ಈ ಅಯವ್ಯಯಕ್ಕೆ ಅರ್ಥ ಬರುತ್ತದೆ, ಒಂದು ಶಿಸ್ತು ಆರ್ಥಿಕ ವ್ಯವಸ್ಥೆಗೆ ಬರುತ್ತದೆ. ಈಗ ನನಗನ್ನಿಸುತ್ತದೆ ಆರ್ಥಿಕ ವ್ಯವಸ್ಥೆಯೇ ಇವತ್ತು ಕುಸಿದುಹೋಗಿದೆ. ಅದಕ್ಕೆ ಹಣಕಾಸಿನ ಸಚಿವರನ್ನು ನಾನು ದೂರುತ್ತಿಲ್ಲ ಈ ವ್ಯವಸ್ಥೆಯಿಂದ ಬಹುಶಃ ನಿರ್ದಿಷ್ಟವಾದ ಒಂದು ಗುರಿಯನ್ನು ರಾಜ್ಯದ ಆರ್ಥಿಕವ್ಯವಸ್ಥೆಯಲ್ಲಿ ತಲುಪಲಿಕ್ಕೂ ಆಗುವುದಿಲ್ಲ. ಕಾರ್ಯಕ್ರಮವನ್ನು ರೂಪಿಸಲೂ ಆಗುವುದಿಲ್ಲ. ಇದರ ವಿಚಾರ ಮರುಚಿಂತನೆ ಮಾಡಬೇಕೆಂದು ನಾನು ಸಭಾಪತಿಗಳನ್ನು ಅಧ್ಯಕ್ಷರಲ್ಲಿ ಮತ್ತು ಇಡೀ ಸದನದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕೆಲವು ಒಳ್ಳೆಯ ಅಂಶಗಳೂ ಕೂಡ ಈ ಆಯವ್ಯಯದಲ್ಲಿವೆ. ಮುಖ್ಯವಾಗಿ ಟ್ಯಾಕ್ಸ್‌ಗಳ ಸರಳೀಕರಣ ಮತ್ತು ಬಡವರಿಗಾಗಿರುವ ಕಾರ್ಯಕ್ರಮಗಳಲ್ಲಿ ಒಳ್ಳೆಯ ಚಿಂತನೆಯನ್ನು ಮಾನ್ಯ ಸಚಿವರು ಮಾಡಿದ್ದಾರೆಂದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ ನಮ್ಮ ಇಡೀ ಆಯವ್ಯಯವನ್ನು ಯೋಜನಾ ದೃಷ್ಟಿಯಿಂದ ನೋಡಬೇಕು. 1996-97ರಲ್ಲಿ 8ನೇ ಯೋಜನೆ ಮುಗಿದು, ಈಗ ಮಂಡಿಸಿರುವ ಅಯವ್ಯಯ 9ನೇ ಪಂಚವಾಷಿಕ ಯೋಜನೆಗಳ ಪ್ರಥಮ ಯೋಜನೆ ಅಂದರೆ ಈ ವಿಜನ್, ದೂರದರ್ಶಿತ್ವ, ಮೊದಲು ಇಡುವ ಹೆಜ್ಜೆ ಅಥವಾ ಕೊನೆಗೆ ಇಡುವ ಹೆಜ್ಜೆಯೂ ಪ್ರಾಮುಖ್ಯ.

6.00 ಪಿ.ಎಂ

ಇದಲ್ಲಿ ಕೊನೆಗೆಇಟ್ಟಂಥ ಹೆಜ್ಜೆ ನಮ್ಮ ರಾಜ್ಯದ ಮಟ್ಟಿಗೆ ಅಥವಾ ಒಂಭತ್ತನೇ ಪಂಚಾವಾರ್ಷಿಕ ಯೋಜನೆಯ ಪ್ರಥಮ ವರ್ಷದ ಎಲ್ಲಿ ಮೊದಲು ಇಟ್ಟಂಥ ಹೆಜ್ಜೆ, ಇದರ ಒಂದು ಕಾನ್‌ಸೆಫ್ಟ್ ಏನಿದೆ, ಅದನ್ನು ಇವೊತ್ತು ಸರಿಯಾಗಿ ಅರ್ಥೈಸಿಲ್ಲ ಎಂಬುದೇ ನನ್ನ ವ್ಯಥೆ. ತಾವೇನೋ ಪ್ರಾಮಾಣಿಕವಾಗಿ ಕಳಕಳಿಯಿಂದ ಬಜೆಟ್ ಅನ್ನು ಪ್ರಾರಂಭಿಸಿದ್ದೀರಿ. ಕೇಂದ್ರ ಸರ್ಕಾರದ ಒಂಭತ್ತನೇ ಪಂಚವಾಷಿಕ ಯೋಜನೆಯ ಅಪ್ರೋಚ್ ಪೇಪರ್ ಅನ್ನು ಎನ್.ಡಿ.ಸಿ. ಮಂಜೂರು ಮಾಡಿದೆ. ಇದು ಮಂಜೂರಾಗಿ ಬಹುಶಃ ಮೂರು ತಿಂಗಳುಗಳಾಗಿರಬಹುದು. ಮಂಜೂರಾದ ನಂತರ ಒಂಭತ್ತನೇ ಪಂಚವಾರ್ಷಿಕ ಯೋಜನೆಗೆ ತಮ್ಮ ಅಪ್ರೋಚ್ ಪೇಪರ್ ಏನು? ಅದನ್ನು ತಾವು ತಯಾರಿಸಿದ್ದೀರಾ? ಅಥವ ಇಲ್ಲವೇ? ತಯಾರಿಸಿದ್ದರೆ ಅದರ ರೂಪು-ರೇಷೆಗಳೇನು? ತಮ್ಮ ಬಜೆಟ್‌ನಲ್ಲಿ ಆ ರೂಪು-ರೇಷೆಗಳು ಸಂಪೂರ್ಣವಾಗಿ ಕಾಣಬೇಕಾಗಿತ್ತು. ಇವೊತ್ತು ತಾವು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಮಾನ್ಯ ಸದಸ್ಯರಾದ ರಾಜಣ್ಣನವರು ತಮಗೆ

ಪ್ರಶಂಸೆ ಕೊಟ್ಟರು, ನಾನೂ ಕೂಡ ಪ್ರಶಂಸೆ ಕೊಡುತ್ತೇನೆ. ಬಜೆಟ್ ಪುಸ್ತಕದ ಮುಖಪುಟದಲ್ಲಿ ವಿಧಾನಸೌಧದ ಹಿನ್ನೆಲೆಯಿರುವ ಸುಂದರ ಚಿತ್ರವನ್ನು ಮುದ್ರಿಸಿದ್ದೀರಿ. ಮುಖಪುಟ್ಟದಲ್ಲಿ ವಿಧಾನಸೌಧದ ಚಿತ್ರ ಬರಲಿ. ಆದರೆ, ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಹಿನ್ನೆಲೆ ರೂಪವಿರುವ ಸುಂದರ ದರ್ಶನವನ್ನು ಬಜೆಟ್‌ನಲ್ಲಿ ಕಾಣಿಸಬೇಕಾಗಿತ್ತು. ಆ ಹಿನ್ನಲೆಯಲ್ಲಿ ತಾವು ಆಯವ್ಯಯವನ್ನು ಮಂಡಿಸಿದ್ದರೆ ಅದು ನಮಗೆ ಅರ್ಥಯುತವಾಗಿರುತ್ತಿತ್ತು. ಅಲ್ಲದೆ, ಬಹುಶಃ ಮುಂದೆ ಏನು ಹೆಜ್ಜೆ ಇಡುತ್ತಿದ್ದೀರಿ ಎಂಬುದರ ಬಗ್ಗೆಯೂ ಸ್ಪಷ್ಟವಾದ ಒಂದು ಚಿತ್ರ ಸಹ ನಾಡಿನ ಜನರ ಮುಂದೆ ಬರುತ್ತಿತ್ತು, ಈ ಸದನದ ಮುಂದೆಯೂ ಬರುತ್ತಿತ್ತು. ಆದರೆ, ಆ ರೀತಿ ಆಗಿಲ್ಲವೆಂಬ ವಿಚಾರವನ್ನು ನಾನು ಮೊದಲು ಪ್ರಸ್ತಾಪಿಸುವುದಕ್ಕೆ ಅಪೇಕ್ಷಿಸುತ್ತಿದ್ದೇನೆ. ಇದು ಏಕೋ ಏನೋ ತಮ್ಮ ಈ ಬಜೆಟ್ ಥಿಂಕಿಂಗ್‌ನಲ್ಲಿ bureaucracy has dominated. ತಮ್ಮ ರಾಜಕೀಯ ಇಚ್ಛಾಶಕ್ತಿಯ ಯಾವುದೇ ನೆರಳು ಈ ಬಜೆಟ್ ಅನ್ನು ಸಿದ್ಧಪಡಿಸುವುದರಲ್ಲಿ ನಾನಂತೂ ್ತಕಂಡಿಲ್ಲ. ಯಾವಾಗಲೂ ಕೂಡ by and large bureaucracy is conservative. It is negative. ಅವರದ್ದು ಪಾಸಿಟಿವ್ ಥಿಂಕಿಂಗ್ ಇರುವುದಿಲ್ಲ. ಆ ಪಾಸಿಟಿವ್ ಥಿಂಕಿಂಗ್ ಇಲ್ಲದಿರುವ ಯಾವ ವ್ಯಾಕ್ಯೂಮ್ ಇದೆ that is where the Finance Minister has to step in. ಅಥವಾ ಮುಖ್ಯಮಂತ್ರಿಗಳು ಸ್ಟೆಪ್ ಇನ್ ಆಗಬೇಕಾಗುತ್ತದೆ, ಇಡೀ ಮುಂತ್ರಿಮಂಡಲವೇ ಅಲ್ಲಿ ಸ್ಟೆಪ್ ಇನ್ ಆಗಬೇಕಾಗುತ್ತದೆ. ಇಲ್ಲದಿದ್ದರೆ ಬೇರಾರೂ ಕೂಡ ತುಂಬಿಸಲು ಆಗುವುದಿಲ್ಲ. Bureaucracy will not fill it up. ಏಕೆಂದರೆ, ಅದರಲ್ಲಿ ಇನಿಷಿಯೇಟಿವ್ ಇರುತ್ತದೆ, ಅದು ತಪ್ಪಲ್ಲ. ಅವರು ಬೆಳೆದಂಥ ವ್ಯವಸ್ಥೆಯೇ ಮುಖ್ಯ ಕಾರಣವೆಂದು ನಾನು ಇವೊತ್ತು ಹೇಳಬೇಕಾದಂಥ ಅವಶ್ಯಕತೆಯಿದೆ. ಈಗ ತಾವು ಯಾವುದೋ ಒಂದು ಪಬ್ಲಿಕ್ ಪಾಲಿಸಿಯನ್ನು ಇನಿಷಿಯೇಟ್ ಮಾಡುವಾಗ ಮುಖ್ಯವಾಗಿ ಅದರಲ್ಲಿ ಯಾವ ಗುಣಗಳಿರಬೇಕಾಗುತ್ತದೆಂಬುದನ್ನು ನಾವು ಆಲೋಚಿಸಬೇಕಾಗುತ್ತದೆ. It is a balance sheet of the State. you to balance it. ಟ್ಯಾಕ್ಸೇಷನ್ ಕನ್‌ಸೆಷನ್ ಕೊಡುರಾಗ ಅಥವಾ ಅಡಿಷನಲ್ ರಿಸೋರ್ಸ್ ಮೊಬಿಲೈಜೇಷನ್‌ನಲ್ಲಿ ಹೆಚ್ಚುವರಿ ಸಂಪನ್ಮೂಲ ಹಾಕುವಾಗ you have to balance your budget. ಇಲ್ಲಿ ಏನಾಗಿದೆಯೆಂದರೆ, ನೀವು ಒಂದು ಕಡೆ ಪರಿಹಾರ ಕೊಟ್ಟಿದ್ದೀರಿ, ಮತ್ತೊಂದು ಕಡೆ ಟ್ಯಾಕ್ಸ್ ಕೊಟ್ಟಿದ್ದೀರಿ. ಕೊನೆಗೆ ಎ.ಆರ್.ಎಂ. ಕಾಲಂನಲ್ಲಿ 'ನಿಲ್' ಎಂದು ಹಾಕಿದ್ದರೆ ಅರ್ಥವಿರುತ್ತಿತ್ತು, This is for the first time I am seeing in the budget ಎ.ಆರ್.ಎಂ. ಕಾಲಂನಲ್ಲಿ ಮೈನಸ್ 186. It is a very bad sign. Instead of that, you could have said `Nil' year.

ಶ್ರೀ ಸಿದ್ದರಾಮಯ್ಯ : ನಾವು ಅರಾಕ್‌ನಲ್ಲಿ ಬೇರೆ ಪದ್ಧತಿ ತರುತ್ತಿದ್ದೇವೆ, ಇದರಿಂದ ನಮಗೆ 150 ಕೋಟಿ ರೂಪಾಯಿಲುಗಜು ಲಾಸ್ ಆಗುವುದರಿಂದ ಅದು 186ನಲ್ಲಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಬ್ಯಾಲೆನ್ಸ್ ಶೀಟ್ ಎಂದರೇನು ಅಥವಾ ಆಯವ್ಯಯ ಎಂದರೇನು? Balancing the receipts and expenditure. ನೀವು ರಿಸೀಟ್ಸ್ ಅಂಡ್ ಎಕ್ಸ್‌ಪೆಂಡಿಚರ್ ಅನ್ನು ಬ್ಯಾಲೆನ್ಸ್ ಮಾಡದಿದ್ದರೆ You cannot call it a balance sheet. ಅದನ್ನು ಆಯವ್ಯಯವೆಂದು ಹೇಳಲು ಆಗುವುದಿಲ್ಲ, ಬೇರೆ ಇನ್ನೇನೋ ಹೇಳಬಹುದು.ಆದರೆ, as a responsible Finance Minister of a State presenting the balance sheet of the entire State, you are starting with a negative note of minus A.R.M (-) for the State. It cuts out a very wrong note with regard to the financial management, it is mismanagement, or management sans management. ಆದುದರಿಂದ, ಇಂತಹ ಟ್ರೆಂಡ್, ಅದು ಬರತಕ್ಕಂಥ ಹಣಕಾಸು ಮಂತ್ರಿಗಳಿಗೆ ಮಾದರಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ, ಮಾದರಿಯಾಗಬಾರದು Kind by halt this kind of thend which is not good for State.

ಎ. ಆರ್.ಎಂ. ಬೇಕೇ ಬೇಕು. ಬಜೆಟ್‌ನಲ್ಲಿ ಎ.ಆರ್.ಎಂ. ಇಲ್ಲದಿದ್ದರೆ, ಆ ಬಜೆಟ್ ಬ್ಯಾಲೆನ್ಸ್ ಬಜೆಟ್ ಆಗುವುದಿಲ್ಲ ಅಥವಾ ಅಲ್ಲಿರತಕ್ಕಂಥ ಒಂದು financial management, it cannot be called a sound management. ಯಾವುದೇ ಒಂದು ಪಬ್ಲಿಕ್ ಪಾಲಿಸಿಯನ್ನು ಮಾಡುವಾಗ ಮುಖ್ಯವಾಗಿ ಇರುವ ಕೆಲವು ಗುಣಗಳನ್ನು ನಾವು ಯಾವತ್ತೂ ಕೂಡ ಮರೆಯುವುದಕ್ಕಾಗುವುದಿಲ್ಲ. ಅದೇನೆಂದರೆ, ಯಾವಾಗಲೂ ಕೂಡ that public policy must be backed up with certain transparency ಪಾರದರ್ಶಕತೆ ಏಕೆ ಬೇಕೆಂದರೆ ಈ ಒಂದು ವ್ಯವಸ್ಥೆ the system will take care of the administration. It should take care of the administration and not the pessonal with. ಅಥವಾ ಅರ್ಬಿಟ್ರರಿಸೆಸ್ ಅದರಲ್ಲಿರಬಾರದು. Discretion will have to be reduced to the most minimum. That rules the roost. If the arbitrariness rules the roost, I do not think you can definitely work with a system. If the system in the administration is demolished, every thing will be demolished. It will be anarchy in the administration.

ನಾನು ಅದನ್ನು ಜನರಲ್ ಕಾನ್‌ಸೆಪ್ಟ್ ಆಗಿ ಈಗ ಇಲ್ಲಿ ಪ್ರಸ್ತಾಪಿಸುತ್ತೇನೆ. ಆ ವಿಚಾರಕ್ಕೆ ಬಂದಾಗ ಆ ಕುರಿತು ವಿವರವಾಗಿ ಮಾತನಾಡಲು ಅಪೇಕ್ಷಿಸುತ್ತೇನೆ. ಇವೊತ್ತು ಮುಖ್ಯವಾಗಿ ವಾರ್ಷಿಕ ಯೋಜನೆಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ 1993-94 ಅಥವಾ 1996-97, 1997-98ರವಾರ್ಷಿಕ ಯೋಜನೆ ತೆಗೆದುಕೊಂಡರೂ ಕೂಡ whether the reduction in plan - I do not know whether consciously or unconsiciously you have taken as an administrative cut, ಅಂದರೆ, ಯೋಜನೆಯಲ್ಲಿ ವಿಶ್ವಾಸವಿಲ್ಲವೆಂದು ಹೇಳಿ. we do not believe in plan. your central administration, perhaps in 1977, started with that kind of note, is a rolling plan.

ಬಹುಶಃ ಒಂಭತ್ತನೇ ಪಂಚವಾರ್ಷಿಕ ಯೋಜನೆಯನ್ನು ಹಿನ್ನೆಲೆಯಾಗಿಟ್ಟು ಕೊಂಡು ಈ ಯೋಜನೆಯನ್ನು ತಯಾರಿಸಲಿಲ್ಲ. ಎರಡನೆಯದಾಗಿ, ಯೋಜನೆಯ ಬಗ್ಗೆ ಯಾವುದೇ ವಿಶ್ವಾಸ ಮತ್ತು ನಿಷ್ಠೆ ಇಟ್ಟಿಲ್ಲವೆಂಬುದಕ್ಕೆ ತಾವು ತಯಾರಿಸಿರುವ ಈ ಯೋಜನಾ ವೆಚ್ಚದಲ್ಲಿರುವ ಕಟ್ಸ್ ಏನಿದೆ, ಇದು ಬಹಳ ಪ್ರಾಮುಖ್ಯವಾದುದು. ಏಕೆಂದರೆ, 1993-94 ಅದು ನಮ್ಮ ಅವದಿ ಎಂದು ಇಟ್ಟುಕೊಳ್ಳೋಣ. 2,796.95 ಕೋಟಿ ರೂಪಾಯಿಗಳಿದ್ದುದು ನಿಜ, ಆದರೆ, ವಾಸ್ತವಿಕವಾಗಿ ಖರ್ಚಾಗಿದ್ದು 3,025 ಕೋಟಿ ರೂಪಾಯಿಗಳು. ಇದರ ಬಗ್ಗೆ ಕಳೆದ ಸಲ ವಿಶ್ಲೇಷಿಸಿರುವುದರಿಂದ ಈಗ ಅದನ್ನು ಮಾಡುವುದಿಲ್ಲ. 1994-95ನೇ ಸಾಲಿನಲ್ಲಿ 2,973.34 ಕೋಟಿ ರೂಪಾಯಿಗಳನ್ನು ಪ್ಲಾನ್‌ನಲ್ಲಿ ಖರ್ಚು ಮಾಡಿದ್ದೆವು ಆಗ ಡಿಸೆಂಬರ್ ತನಕವೂ ನಮ್ಮ ಸರ್ಕಾರದ ಆಡಳಿತವಿತ್ತು, ಅನಂತರದಿಂದ ತಾವು ನಡೆಸಿದ್ದೀರಿ. you have cut the plan. 1992-93ರ ಡಿಸೆಂಬರ್‌ನಲ್ಲಿ ನಾನು ಅಧಿಕಾರವನ್ನು ತೆಗೆದುಕೊಂಡಾಗ What was spent on the plan was only Rs. 700 crores as on that date but we fully met the plan by spending another Rs. 1200 crores within a period of five months

ಅದನ್ನು ಏಕೆ ಮಾಡುತ್ತಿದ್ದೇವೆಂದರೆ, ಆ ಯೋಜನೆಯಲ್ಲಿ ವಿಶ್ವಾಸ, ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟಾಗ, ಪ್ಲಾನನ್ನು ಶಿಸ್ತಿನ ಸ್ವರೂಪದಲ್ಲಿ ಅನುಷ್ಠಾನ ಮಾಡಲು ಸಾಧ್ಯ. ಆ ರೀತಿ ಯೋಜನೆಗೆ ವಿಜಶೇಷವಾದ ಆಸಕ್ತಿ ತೋರಿಸಬೇಕಾದ ಪದ್ಧತಿ ಇದೆಯೆಂದು ನಾನು ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ನಮ್ಮ ಕರ್ನಾಟಕ ರಾಜ್ಯದ ಯೋಜನಾ ವೆಚ್ಚದ ಬಗೆಗಿನ ಸ್ಥಾನ, ಪರ್ ಕ್ಯಾಪಿಟ ಔಟ್ ಲೇ ಬಗ್ಗೆ ಎಷ್ಟು ನಿಷ್ಠೆಯಿಂದ ಕೆಲಸ ಮಾಡಿದೆ ಎಂದರೆ ಅದು ಒಂದು ದೊಡ್ಡ ಪರಂಪರೆ ನಮ್ಮ ರಾಜ್ಯದ ಫೈನಾನ್‌ಷಿಯಲ್ ಮ್ಯಾನೇಜ್‌ಮೆಂಟ್‌ನ ಇತಿಹಾಸಕ್ಕೆ

ಇದೆ. 1992-93 ರಲ್ಲಿ the place of Karnataka in the per capital plan outlay was in 6th place. 1993-94, it received the first place. We planned in such a way, 94-95 also, it should take first place. of course, you never belived in other part of the plan of the rest of the year. Money was not spent, may be it must have come down to second or third place. ಇವತ್ತು ತಾವು ನಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಯಾವ ಸ್ಥಾನದಲ್ಲಿದ್ದೀರಿ? ಬಹುಶಃ ಪರ್ ಕ್ಯಾಪಿಟ ಔಟ್ ಲೇ ಯಲ್ಲಿ ನಮ್ಮ ರಾಜ್ಯ ಇಂದು ಹತ್ತು ಇಲ್ಲವೇ ಹನ್ನೊಂದನೆ ಸ್ಥಾನದಲ್ಲಿ ಇರಬಹುದು. ಇದಕ್ಕಿಂತ ಯೋಜನಾ ದುರಂತ ಯಾವುದೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕರ್ನಾಟಕ ಶೇರ್ ಇನ್ ಅಲ್ ಇಂಡಿಯಾ ಪ್ಲಾನ್‌ನ್ನು ದಯಮಾಡಿ ನೋಡಬೇಕು. 1985-90ರಲ್ಲಿ 4.4 ಪರ್‌ಸೆಂಟ್ 1991-92ರಲ್ಲಿ 5.3 ಪರ್‌ಸೆಂಟ್ 1992-93 6.7 ಪರ್‌ಸೆಂಟ್, 1993-94 8.9, 94-95 8.5 ಪರ್‌ಸೆಂಟ್. ಅದು ಇನ್ನೂ ಇಂಪ್ರೂವ್ ಆಗುತ್ತಿತ್ತು. ನಮ್ಮ ಅಧಿಕಾರದ ಅವಧಿ ಅಲ್ಲಿಗೆ ನಿಂತುಹೋಯಿತು, ಅದು ಇಂಪ್ರೂವ್ ಆಗಲಿಲ್ಲ. ಹಣಕಾಸು ಸಚಿವರು ನಮ್ಮ ರಾಜ್ಯದ ಇಂದಿನ ಸ್ಥಾನವನ್ನು ಹೇಳಬೇಕಾಗುತ್ತದೆ. What is the place now? what is the share of Karnataka in the planning history of the country.

ಬಹುಶಃ ನಾವು ಬಹಳ ಕೆಳಗೆ ಇಳಿದಿದ್ದೇವೆ. 1985-90ರ ಅವಧಿಯಲ್ಲಿ ಅದು ಮುಖ್ಯವಾಗಿ ತಮ್ಮ ಆಡಳಿತದ ಕಾಲ, ಆಗ 4.4 ಪರ್‌ಸೆಂಟ್ ಇತ್ತು. ಅಂದಿನ ಸ್ಥಾನವನ್ನೇ ಪುನಃ ಕಾಯ್ದಿಕೊಳ್ಳತಕ್ಕ ಪರಂಪರೆಯನ್ನು ತಂದಿದ್ದೀರಿ ಎಂಬುದನ್ನು ಹೇಳಬಯಸುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ವಿಚಾರವನ್ನು ಈ ಸದನದ ಗಮನಕ್ಕೆ ತರಲೇ ಬೇಕಾದ ಅವಶ್ಯಕತೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದೇನೆಂದರೆ, ಪ್ಲಾನಿಂಗ್ ಕಮಿಷನ್ ಡಾಕ್ಯುಮೆಂಟ್ ತಮ್ಮ ಪ್ಲಾನಿಂಗ್ ಇಲಾಖೆಯಲ್ಲಿದೆ. ಅಥವಾ ತಮ್ಮ ಅರ್ಥಿಕ ಇಲಾಖೆಯಲ್ಲಿ ಅದನ್ನು ತಿಳಿದು ಕೊಳ್ಳಬೇಕಾದಂಥ ಅವಶ್ಯಕತೆ ಇದೆ. ಪ್ಲಾನಿಂಗ್ ಕಮಿಷನ್ ಪ್ರಕಾರ eventhough the approved plan for the eighth five year plan period was only Rs. 12300 crores ಇನ್‌ಫ್ಲೇಷನ್ ಎಲ್ಲವನ್ನು ಲೆಕ್ಕ ಹಾಕಿ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ಲಾನಿಂಗ್ ಕಮಿಷನ್‌ನವರು ಏನು ಹೇಳಿದ್ದಾರೆಂದರೆ the Karnataka should spend Rs.16,192.32 crores. It was your commitment. This has been enalysed in the midterm Eighth Five year plan Appraisal by the planning Commission

ಇವತ್ತು ನಾವು ಮತ್ತು ನೀವು ಒಟ್ಟು ಸೇರಿ ಮಾಡಿದಂಥ ಖರ್ಚು 14,832.54 ಕೋಟಿ. ಅಂದರೆ ಶಾರ್ಟೇಜ್ 1,359.78 ಕೋಟಿ. ಇದರ ಬಗ್ಗೆ ಬಹುಶಃ ಅಧಿಕಾರಿಗಳು ತಮ್ಮ ಗಮನಕ್ಕೆ ತರಲಿಲ್ಲವೆಂದು ಕಾಣುತ್ತದೆ. ಇಲ್ಲದಿದ್ದರೆ ತಾವು ಖಂಡಿತವಾಗಿ ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಿರಿ. 1992-93ರಲ್ಲಿ 1971.41 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ 1993-94ರಲ್ಲಿ 2,796 ಕೋಟಿ ಖರ್ಚು ಮಾಡಿದ್ದೀರಿ Jump in one year, it was a bout Rs. 800 crores. compared to the first year, you have done it in the dsecond year. In 1994-95 I have planned for Rs. 3025 Crores. ಇದೆಲ್ಲಾ ಸೇರಿದರೆ 7,741.71 ಕೋಟಿ ನಮ್ಮ ನಾಲ್ಕೈದು ತಿಂಗಳ ಕಾಲ ನಿಮ್ಮ ಕಾಲದಲ್ಲಿ ಮೂರು ವರ್ಷದಲ್ಲಿ ಖರ್ಚು ಮಾಡಿದ್ದರೆ, ತಾವು ನಿಜವಾಗಿಯೂ ಉಳಿದ ವರ್ಷದಲ್ಲಿ you should have given that jump the planning commission has said how much you have to spend

199596ರ ತಮ್ಮ ಕಾಲದಲ್ಲಿ 3,390.84 ಕೋಟಿ ರೂಗಳು as against projected. 1996-97ರಲ್ಲಿ 3,700 ಕೋಟಿ ರೂ. 3826,46 you have spent as agains Rs. 4094.45 crores.

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1992-93ರಲ್ಲಿ ಬಜೆಟ್ ಹೆಡ್‌ನಲ್ಲಿ ಆ್ಯಕ್ಚುಚು ಪ್ಲಾನ್ ಸೈಜ್ 2159 ಕೋಟಿ. ರಿವೈಸ್ಟ್ ಪ್ಲಾನ್ 2175 ಕೋಟಿ. 2033 ಕೋಟಿ ಖರ್ಚು ಮಾಡಿದ್ದೇವೆ. ಮೈನಸ್ 92 ಆಗುತ್ತದೆ. 93-94ರಲ್ಲಿ ಪ್ಲಾನಿಂಗ್ ಕಮಿಷನ್‌ನವರು ಅಪ್ರೂವ್ ಮಾಡಿದ್ದು 3025 ಕೋಟಿ. 2797 ಕೋಟಿ ಖರ್ಚುಮಾಡಿದ್ದೇವೆ. ಮೈನಸ್ 228 ಕೋಟಿಯಾಗಿದೆ. ಏಕೆಂದರೆ, ನಾವು ಪ್ಲಾನನ್ನು ನಿಗದಿಮಾಡದೆಯೇ ಎಲ್ಲಾವನ್ನು ಮಾಡಿಬಿಟ್ಟಿದೇವೆಂದು ತಾವು ಹೇಳುತ್ತಿರುವುದರಿಂದ ಇದನ್ನು ಹೇಳಬೇಕಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಅದನ್ನೇ ಹೇಳಿದೆ. I am in a position to prove that actually you spent 3025 crores.

ನನ್ನ ಹತ್ತಿರವೂ ಲೆಕ್ಕದ ಅಂಕಿಅಂಶವಿದೆ. ಹೋದ ಸಲ ಹೇಳಿದ್ದೇನೆ. ಮತ್ತೆ ಅದನ್ನೇ ಹೇಳಲು ಬಯಸುವುದಿಲ್ಲ. ಆ್ಯಕ್ಚುಯಲ್ ಆಗಿ ಖರ್ಚು ಮಾಡಿದ್ದುದು 3025 ಕೋಟಿ ರೂ.ಗಳು. Whatever it may be, you have a commitment to spend Rs. 16,192.32 crores

ಒಟ್ಟಾರೆ ತಾವು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ 1359.78 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಯೋಜನಾ ವೆಚ್ಚಕ್ಕೆ ಆದ್ಯತೆಯನ್ನು ಕೊಟ್ಟಿಲ್ಲವೆಂದು ಹೇಳಲು ಅಪೇಕ್ಷಿಸುತ್ತೇನೆ. 1997-98ರ ಈಗಿನ ಯೋಜನೆಯ ಪ್ರಕಾರ 4545 ಕೋಟಿ ರೂ. ಪ್ಲಾನ್ ಮಾಡಿದ್ದೀರಿ. ಅದರಲ್ಲಿ 3065.45 ಕೋಟಿ ಬಜೆಟರಿ ಸಪೋರ್ಟ್ ಇದೆ. 1480.44 ಕೋಟಿ ರೂಪಾಯಿಗಳನ್ನು ಇಂಟರ್‌ನಲ್ ರಿಸೋರ್ಸ್ ಆಗಿ ಮೊಬಿಲೈಸ್ ಮಾಡುತ್ತೇವೆಂದು ನಿರೀಕ್ಷೆ ಮಾಡುತ್ತೀರಿ. ತಮ್ಮ ಇತಿಹಾಸವನ್ನು ನಡೆದುಕೊಂಡು ಬಂದ ದಾರಿಯನ್ನು ನೋಡಿದರೆ in respect of internal resource mobilisation your performance has been quit poor ತಾವು ಈಗ ಕೊಟ್ಟಿರುವ ವಿನಾಯಿತಿಯನ್ನು ನೋಡಿದರೆ, ಬಜೆಟ್‌ನಲ್ಲಿ 1480 ಕೋಟಿ ರೂ. ಕೊರತೆಯನ್ನು ತೋರಿಸಿದ್ದರೂ ಸಹ, ಆ ಕೋರತೆಯನ್ನು ನೀಗಿಸಲು ಇಂಟರ್‌ನೆಲ್ ರಿಸೋರ್ಸ್‌ನ್ನೇನು ನಿರೀಕ್ಷೆ ಮಾಡುತ್ತೀರಿ, A.R.M.-(-186) ಆಗುವಾಗ 1480 ಕೋಟಿ ರೂಪಾಯಿಗಳನ್ನು ಹೇಗೆಮಾಬಿಲೈಸ್ ಮಾಡುತ್ತೀರಿ? ಇದಕ್ಕೆ ಸರಿಯಾದ ಮಾಹಿತಿ, ಆಧಾರ ತಮ್ಮ ಬಜೆಟ್‌ನಲ್ಲಿ ತೋರಿಸಬೇಕು.

That transparency should be seen, to be belived. ಮ್ಯಾಜಿಕ್‌ಪ್ಲಾನ್ ನಿಂದ 1480 ಕೋಟಿ ರೂ.ಗಳನ್ನು ತಾವು ಎಲ್ಲಿಂದಲೋ ತರಲಿಕ್ಕಾಗುವುದಿಲ್ಲ. ಏಕೆಂದರೆ ತಮ್ಮ ಎಕ್ಸ್‌ಟರ್ನಲ್ ಏಡ್ ಎಕ್ಸ್‌ಪೆಂಡೀಚರ್ ಕೂಡ ಈ ವರ್ಷದಲ್ಲಿ ಎಷ್ಟಿದೆ ಎಂದರೆ, 435 ಕೋಟಿ ರೂ.ಗಳ ಎಕ್ಸ್‌ಟರ್ನಲ್ ಎಡ್ ಅನ್ನು ತಾವು ಪಡೆದುಕೊಳ್ಳಬೇಕಾಗಿತ್ತು. ಆದರೆ ತಾವು ಪಡೆದು ಕೊಂಡಿದ್ದು ಕೇವಲ 262 ಕೋಟಿ ರೂ.ಗಳು ಮಾತ್ರ. ಅಂದರೆ ಎಕ್ಸ್‌ಟರ್ನಲ್ ಏಡ್‌ಗ್ರಾಂಟ್ ಅನ್ನೂ ಕೂಡ 1996-97ರಲ್ಲಿ ತೆಗೆದುಕೊಳ್ಳುವುದರಲ್ಲಿ 175 ಕೋಟಿ ರೂ.ಗಳು ಕಡಿಮೆಯಾಗಿದೆ. ಎಕ್ಸ್‌ಟರ್ನಲ್‌ಏಡ್ 1996-97ರಲ್ಲಿ ತೆಗೆದುಕೊಳ್ಳುವಾಗ ಕೂಡ 175 ಕೋಟಿ ರೂ.ಗಳು 1996-97ರಲ್ಲಿ ತೆಗೆದು ಕೊಳ್ಳುವಾಗ ಕೂಡ ಶಾರ್ಟೇಜ್ ಬಂದಿವೆ. Karnataka has a history of availing full componment of the external aid

ಆ ದಿಸೆಯಲ್ಲಿಯೂ ಕೂಡ ತಾವು ಎಡವಿದ್ದೀರಿ. ಆದುದರಿಂದ 186 ಎಆರ್‌ಎಂ ಜೀರೋ ಅಥವಾ ಮೈನಸ್ 186 ಇವತ್ತು ಆಗಿದೆ. ನಮ್ಮ ರಾಜ್ಯದ ತೆರಿಗೆಯಲ್ಲಿ ಕೂಡ ಸುಮಾರು 192.72 ಕೋಟಿ ರೂ.ಗಳು 1996-97ನೇ ವರ್ಷದಲ್ಲಿ ವಿಶೇಷವಾಗಿ ಕಡಿಮೆಯಾಗಿದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಅದರಲ್ಲಿ ಕೂಡ ಯೋಜನಾ ವೆಚ್ಚ ಏಕೆ ಕಡಿಮೆಯಾಗುತ್ತಿದೆ, ಅಭಿವೃದ್ಧಿ ಕೆಲಸ ಇವತ್ತು ಏಕೆ ಕಡಿಮೆಯಾಗುತ್ತಿದೆ, ಇವತ್ತು ಬಹಳ ಸಬ್ ಕಮಿಟಿ ಮೀಟಿಂಗ್‌ಗಳು ಆಗುತ್ತಿವೆ, ಒಂದು ಬಡ್ಜೆಟ್ ಸ್ಪೀಚ್ ಕೇಳಬೇಕು ಅಥವಾ ತಾವು ಮೀಟಿಂಗ್ ಮಾಡುವುದಾದರೆ ನನ್ನದೇನೂ ಅಡ್ಡಿ ಇಲ್ಲ. ಇದು ಏಕೆ ಆಗಿದೆ ಎಂಬುದಕ್ಕೆ

ಹಲವಾರು ಕಾರಣಗಳು ಇವೆ. ಒಂದು ಪ್ರಮುಖವಾದಂತಹ ಕಾರಣವನ್ನು ಇವತ್ತು, ಸ್ಯಾಂಪಲ್‌ಗಾಗಿ ತಮ್ಮ ಗಮನಕ್ಕೆ ತರಲಿಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಅದೇನೆಂದರೆ funding of the plan, funding of the development ಈ ರೇಷಿಯೋ ಇವತ್ತು ಕಡಿಮೆಯಾಗುತ್ತಿದೆ. 1992-93ರಲ್ಲಿ we used to spend 55.18 per cent ಡೆವಲಪ್‌ಮೆಂಟ್‌ಗೆ ನಾವು ಖರ್ಚು ಮಾಡುತ್ತಿದ್ದೆವು. 1993-94ರಲ್ಲಿ ಶೇಕಡಾ 70.71 ಡೆವಲಪ್ ಮೆಂಟ್‌ಗೆ ಪ್ಲಾನ್‌ನಲ್ಲಿ ಖರ್ಚು ಮಾಡುತ್ತಿದ್ದೆವು. 1993-95ರಲ್ಲಿ ಶೇಕಡ 64ರಷ್ಟು ನಾವು ಖರ್ಚು ಮಾಡಿದೆವು. ಅಂದರೆ it is as against 55.51 per cent which was spent for the development in Eighth plan in that 83-89 period.

ಆದುದರಿಂದ ಇವತ್ತು ಇದನ್ನು ಗಮನಿಸಿದಾಗ ಈಗ ಪ್ರತಿ ವರ್ಷ ನೋಡಿದಂತೆ ಡೆವಲಪ್‌ಮೆಂಟ್ ಖರ್ಚು ಕಡಿಮೆಯಾಗುತ್ತಿದೆ. ನಾನ್ ಡೆವಲಪ್‌ಮೆಂಟ್ ಖರ್ಚು ಇವತ್ತು ಜಾಸ್ತಿಯಾಗುತ್ತಿದೆ. ಆದುದರಿಂದ ಇದನ್ನು ತಡೆಗಟ್ಟಲು ತಾವು ಹೇಳಿದ್ದೀರಿ, ಶೇಕಡ 5ರಷ್ಟು ನಾವು ಸ್ಟಾಫ್ ಕಡಿಮೆ ಮಾಡುತ್ತೇವೆ ಎಂದು. ಇದರ ಬಗ್ಗೆ ಚಿಂತನೆ ಹಸಿರಿಲ್ಲ ಎಂದು ನಾನು ಹೇಳುತ್ತೇನೆ. ಅದರೆ ಇದೊಂದು ರೀತಿ ಗಂಭೀರವಾದಂತಹ ಒಂದು ಸ್ವರೂಪವನ್ನು ತಾಳಿದೆ. ಇವತ್ತು ನಾನ್-ಡೆವಲಪ್‌ಮೆಂಟ್‌ಗೆ ಖರ್ಚು ಮಾಡುವುದನ್ನು ಏಕೆ ನೀವು ಹತೋಟಿಗೆ ತರಬಾರದು ? you could do that . ಅದನ್ನು ನಾವು ಹತೋಟಿಯಲ್ಲಿ ಇಟ್ಟಿದ್ದೇವೆ. The thing which was reversed before 89 has been positively put on the right track ಆದುದರಿಂದ ಈ ದೃಷ್ಟಿಯಲ್ಲಿ ಕೂಡ ನೀವು ಒಂದು ಸರಿಯಾದಂಥ ರೀತಿಯಲ್ಲಿ ಸಂಯಮದಿಂದ ಇದನ್ನು ಸರಿದೂಗಿಸಲಿಕ್ಕೆ ಶಕ್ತಿ ಪಡೆದಿಲ್ಲ ಎಂಬುದನ್ನು ನಾನು ವಿಶೇಷವಾಗಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇಲ್ಲಿ ಫೈನಾನ್‌ಷಿಯಲ್ ಸ್ಟೇಟ್‌ಮೆಂಟ್ ಇದೆ ನನ್ನದು, ನಾನು ಪಿಕ್‌ಅಫ್ ಮಾಡಿದಂತಹ ಮಾಹಿತಿ ಇದರಲ್ಲಿದೆ. ಯಾವ ರೀತಿಯಲ್ಲಿ ಅಸೆಟ್ಸ್ ಓವರ್, ಲಯಬಲಿಟೀಸ್ ಕ್ಯಾನ್ಸರ್ ತರಹ ಇರೋಡ್ ಆಗಿದೆ ಎಂಬುದನ್ನು ನಾವು ವಿಶೇಷವಾಗಿ ಇವತ್ತು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. It has got to be arrested ಇದು ಆದ್ಯತೆಯ ಯೋಜನಾ ವೆಚ್ಚವನ್ನು, ಇಡೀ ರಾಜ್ಯದ ಆಸ್ತಿಯನ್ನೇ ಜ್ವಾಲಾಮುಖಿಯಂತೆ ಬಲಿ ತೆಗೆದುಕೊಳ್ಳತಕ್ಕ ಪ್ರವೃತ್ತಿ ಕರ್ನಾಟಕ ರಾಜ್ಯದ ಒಂದು ಹಣಕಾಸಿನ ವ್ಯವಸ್ಥೆಯಲ್ಲಿ ಇವತ್ತು ಆಗುತ್ತಿದೆ, ಎಂಬುದನ್ನು ತಮ್ಮ ಗಮನಕ್ಕೆ ತಂದರೆ ಇವತ್ತು ರಾಜ್ಯ ದಿವಾಳಿಯ ಅಂಚಿನಲ್ಲಿದೆ ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಆಧಾರ ಬೇರೆ ಯಾವುದೂ ಕೂಡ ಇಲ್ಲ. 1995-96ರಲ್ಲಿ ತಾವು ನೋಡಿರಬೇಕು. ಅಸೆಟ್ಸ್ ಓವರ್ ಲಯಬಲಿಟೀಸ್ 654.06 ಕೋಟಿ ರೂ.ಗಳು ಇತ್ತು, 1996-97ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 271.90 ಕೋಟಿ ರೂ.ಗಳು ಅಸೆಟ್ಸ್ ಓವರ್ ಲಯಬಲಿಟೀಸ್

ಇತ್ತು. ತಮಗೆ ಆಶ್ಚರ್ಯವಾಗಬಹುದು. You have projected in your budget 97-98, Rs 72.90 crores. Total erosion! This is what is called bankruptcy. you have to take very positive steps to correct th is venom.

ಇಲ್ಲದಿದ್ದರೆ ಬಹುಶಃ ಇಡೀ ರಾಜ್ಯದ ಆರ್ಥಿಕ ವ್ಯವಸ್ಥೆಯ ತಳಪಾಯವೇ ಕೊಚ್ಚಿಕೊಂಡು ಹೋಗುತ್ತದೆ. ಇದನ್ನು ವಿಶೇಷವಾಗಿ ನಿಮ್ಮ ಉಗಮನಕ್ಕೆ ತರಲಿಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ನೀವು ಹಿಂದಿನ ಇತಿಹಾಸ ಕೂಡ ನೋಡಬೇಕು. In 1993-94-assets-Rs. 9955 crores, liabilities-Rs. 9124 crores, percehtage of assets over liability-9% It is dwindled in 1995-96 to 6th place-6%, 96-97 in 4th place, In 95, it was in 6th place, 96 it was in 4th place and it was 9% ಆದುದರಿಂದ ಇವತ್ತು ಈ ಅನಾಮಲಿ ಅನ್ನೂ ಕೂಡ ನೀವು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕಾದಂತಹ ಅವಶ್ಯಕತೆ ಖಂಡಿತವಾಗಿಯೂ ಕೂಡ ಇದೆ ಎಂಬುದನ್ನು ತಮಗೆ ಹೇಳುತ್ತಿದ್ದೇನೆ. ಏಕೆಂದರೆ, development and non-development ಇದರ ಬಗ್ಗೆ ಪುನಃ ನಾನು ಹೇಳುವುದಾದರೆ,,1989-90ರಲ್ಲಿ development was 68.9%, and non-development was 31%. I reversed the process by making it 72.28% in 1993-94 to 27.72 per cent. For non-development, you will have to bring it at least to 25 percent. ಹಾಗಿದ್ದರೆ ನಾವು ನಿಮಗೆ ಶಭಾಷ್‌ಗಿರಿಯನ್ನು ಹೇಳುತ್ತೇವೆ. ಈ ಒಂದು ಆರ್ಥಿಕ ಶಿಸ್ತನ್ನು ತರಲಿಕ್ಕೆ ಮಾನ್ಯ ಸಿದ್ಧರಾಮಯ್ಯನವರು ಶಕ್ತರಾಗಿದ್ದಾರೆ ಎಂಬ ಒಂದು ವಿಚಾರವನ್ನು ತಿಳಿಯಪಡಿಸ ಬೇಕು. You have to make conscious efforts to do it. Officers will not do that. ತಾವು ದಯಮಾಡಿ ಇದನ್ನು ಡೆವಲಪ್‌ಮೆಂಟ್ ಮತ್ತು ನಾನ್‌ಡೆವಲಪ್‌ಮೆಂಟ್ ಈ ವರ್ಷ ಯಾವ ರೀತಿಯಲ್ಲಿ ಅದನ್ನು ನೀವು ಹತೋಟಿಗೆ ತರಬಹುದು ಎಂಬುದನ್ನು ಯೋಚಿಸಬೇಕು. ಇಲ್ಲದಿದ್ದರೆ ಅದು ಲಂಗು ಲಗಾಮು ಇಲ್ಲದ ಕುದುರೆಯಂತೆ ಹಾರಿ ಹೋಗುತ್ತದೆ. that is called financial anarchy ಅದನ್ನು ತಡೆಹಿಡಿಯತಕ್ಕಂತಹ ಒಂದು ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇಲ್ಲೊಂದು ಸ್ಯಾಂಪಲ್ ಕೊಡುತ್ತೇನೆ,ಎಲ್ಲವನ್ನೂ ಹೇಳಲಿಕ್ಕೆ ಇಲ್ಲಿ ಅವಕಾಶ ಇಲ್ಲ, ನಾನು ಹೇಳುತ್ತಲೂ ಇಲ್ಲ. ಇವತ್ತು ರೆವಿನ್ಯೂ ಎಕ್ಸ್‌ಪೆಂಡಿಚರ್ ಬಗ್ಗೆ ತಾವು ನಿಗಾ ಇಟ್ಟು ಕೊಂಡಿದ್ದೀರಿ. Any finance with the revenue deficit is not a good finance management ರೆವಿನ್ಯೂ ಸೈಡ್‌ನಲ್ಲಿ ಸರ್‌ಪ್ಲಸ್ ಇದ್ದರೆ

you canfinancially plan when there is no surplus, there is no money for the finance ಹಿಂದಿನ ಒಂದು ಚಿತ್ರಣವನ್ನು ನಾನು ಇವತ್ತು ಸದನದ ಗಮನಕ್ಕೆ ತರಲಿಕ್ಕೆ ಅಪೇಕ್ಷೆ ಪಡುತ್ತೇನೆ.

1989-90 - Revenue deficit was Rs.(-147) crores

90-91 - Rs. (-79) Crores

91-92 - Rs. (-179) Crores

92-93 - Rs. (-170) Crores

93-95 - Rs. (+117) Crores.

I could receive the revenue surplus stage at that time. Again it has deteriorated.

95-96 - Rs. (-135) Crores.

96-97 - Rs. (-462.16) Crores

97-98 - Rs. (-199) crores.

ಈ ದಿಕ್ಕಿನಲ್ಲಿ ನೀವು ಹೋದರೆ ರೆವಿನ್ಯೂ ಯಾವ ರೀತಿಯಲ್ಲಿ ಹೆಚ್ಚಾಗುತ್ತದೆ? ಅದಕ್ಕೇ ಪ್ಲಾನ್ ಆಫ್‌ಸೆಟ್ ಆಗುತ್ತದೆ. The Planing process itself is destabilised ಇದನ್ನು ರೆವಿನ್ಯೂ ಸರ್‌ಪ್ಲಸ್ ಮಾಡತಕ್ಕಂತಹ ಒಂದು ದಿಕ್ಕಿನಲ್ಲಿ ತಾವು ತಮ್ಮ ಚೌಕಟ್ಟಿನ್ನು ಉಳಿಸಿಕೊಳ್ಳಬೇಕೇ ಹೊರತು, ಅನ್ಯಥಾ ಮಾಡಿದರೆ ಅದು slippery finance ಆಗುತ್ತದೆ. ಅದು ಯಾರು ಹತೋಟಿಗೂ ಕೂಡ ಸಿಗುವುದಿಲ್ಲ. ಇನ್ನೊಂದು, ನಿಜವಾಗಿ ತಾವು ಈ plan programmes financed by the state undertakings.

ದಯಮಾಡಿ ಇದು ತಮ್ಮ ಹತ್ತಿರ ಕೂಡ ಇದೆ. ಆದರೆ ಇವತ್ತು ನೆಟ್ ಕಾಂಟ್ರಿಬ್ಯೂಷನ್ ತಾವು ದಯಮಾಡಿ ನೋಡಬೇಕು. Net contribution from KEB, KPC, KSRTC, KSFC, KHB.

6.30 ಪಿ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : (ಮುಂದುವರೆದುದು)

ಮುಖ್ಯವಾಗಿ ಕೆಇಬಿ ತೆಗೆದುಕೊಳ್ಳಿ, ಕೆಬಿ ಅಥವಾ ಕೆಪಿಸಿ, ಕೆಎಸ್‌ಆರ್.ಟಿಸಿ, ಕೆಎಸ್‌ಎಫ್‌ಸಿ ಮತ್ತು ಕೆಹೆಚ್.ಬಿ, ಕೃಷ್ಣ ಜನ ನಿಗಮ, ಇದನ್ನೆಲ್ಲಾ ತೆಗೆದುಕೊಂಡಾಗ ನಿಜವಾಗಿ ಸರಿಯಾದಂಥ ಸಹಾಯ ಇವತ್ತು ಪಬ್ಲಿಕ್ ಸೆಕ್ಟಾರ್‌ಗಳಿಂದ ಖಂಡಿತವಾಗಿ ಬರುತ್ತಿಲ್ಲ ಎಂಬುದನ್ನು ನಾನು ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ಮುಖ್ಯವಾಗಿ ಇನ್ನು ಒಂದು ವಿಚಾರ ತಮ್ಮ ಗಮನಕ್ಕೆ ತರುವುದು ಎಂದರೆ, ಟ್ಯಾಕ್ಸೇಷನ್. ಇದರಲ್ಲಿ ಕೆಲವು ಸರ್ ಛಾರ್ಜ್ ತಾವು ತೆಗೆದಿದ್ದೀರಿ ಎಂದು ನಾನು ಈಗುಗಲೇ ಹೇಳಿದ್ದೇನೆ. ಇವತ್ತು ರ್‍ಯಾಷನಲೈಸ್ ಮಾಡಿದ್ದೀರಿ. ಕೆಲವು ಟ್ಯಾಕ್ಸೇಷನ್ ಕನ್‌ಸೆಷನ್ ಕೂಡ ಸರಿಯಾಗಿ ಕೊಟ್ಟಿದ್ದೀರಿ. ಕೆಲವು ಐಟಂಸ್ ವಿಚಾರದಲ್ಲಿ ಬಹುಶಃ ತಮಗೆ ಸರಿಯಾದ ಗ್ರಹಿಕೆ ಇಲ್ಲವೆಂದು ಹೇಳಿ ತಮ್ಮ ಅಧಿಕಾರಿಗಳು ಕೊಟ್ಟಿಲ್ಲ. ಏಕೆಂದರೆ, ಸೀಮೆ ಎಣ್ಣೆಗೆ ಹಾಕಿದಿರಿ, ತಾವು ಏನು ಹೇಳಿದಿರಿ, ರೇಷನ್ ಶಾಫ್‌ಗೆ ಕೊಡತಕ್ಕಂತಹ ಸೀಮೆ ಎಣ್ಣೆ ಹೊರತು ಎಂದು ನಮ್ಮ ಹಳ್ಳಿಯಲ್ಲಿ ಅನೇಕ ಸಣ್ಣ ಸಣ್ಣ ರೈತರು ಅವರು ಅವರ ಪಂಪ್‌ಸೆಟ್‌ಗಳನ್ನು ಸೀಮೆ ಎಣ್ಣೆಯಿಂದ ನಡೆಸುತ್ತಾರೆ. ಇದೇ ರೀತಿಯಲ್ಲಿ ಬೀಡಿ ಕಾರ್ಮಿಕರೂ ಕೂಡ ಅವರು ಸೀಮೆಎಣ್ಣೆ ಉರಿಹಿ ಇವತ್ತು ಜೀವನ ಮಾಡಬೇಕು. ಅದರಿಂದ ತಾವು ತಿಳಿದುಕೊಳ್ಳಬೇಕಾಗುತ್ತದೆ, ಜನಸಾಮಾನ್ಯರು, ಅನೇಕ ಬಡವರು, ಬಡ ರೈತರಿಗೂ ಕೂಡ ಸೀಮೆ ಎಣ್ಣೆ ಬೇಕು ತಾವು ಬೇಕಾದರೆ ಇದನ್ನು ಪುನರ್ ಮಿಮರ್ಶೆ ಮಾಡಬೇಕಾದ ಅವಶ್ಯಕತೆ ಇದೆ. ಸೀಮೆ ಎಣ್ಣೆ ಯಾರು ಶ್ರೀಮಂತರು ಉಪಯೋಗ ಮಾಡುವುದಿಲ್ಲ. ಸೀಮೆ ಎಣ್ಣೆ ಪಂಪ್‌ಸೆಟ್‌ಗಳನ್ನು ಬಹಳ ದೊಡ್ಡ ರೈತರು ಉಪಯೋಗ ಮಾಡುವುದಿಲ್ಲ. ಇವೆಲ್ಲಾ ಸಣ್ಣ ಸಣ್ಣ ರೈತರು ಉಪಯೋಗ ಮಾಡತಕ್ಕಂಥದ್ದು. ನಮ್ಮ ಫಿಷರೀಸ್ ಬೋಟ್ ಇದರಲ್ಲಿ ಕೂಡ ಸೀಮೆಎಣ್ಣೆ ಉಪಯೋಗ ಮಾಡಿಕೊಂಡು ಅವರು ಜೀವನ ಮಾಡತಕ್ಕಂತಹ ಪರಿಸ್ಥಿತಿಯಲ್ಲಿದ್ದಾರೆ. ಡೀಸಲ್‌ಗೆ ಕೂಡ ತಾವು ಎಂಟ್ರಿ ಟ್ಯಾಕ್ಸನ್ನು ಜಾಸ್ತಿ ಮಾಡಿದ್ದೀರಿ. ಡೀಸಲ್ ಎಲೆಕ್ಟ್ರಿಸಿಟಿ ಇಲ್ಲ, ಸಣ್ಣ ಕೈಗಾರಿಕೆಗಳು, ಮತ್ತೊಬ್ಬರು, ಇನ್ನೊಬ್ಬರು ಡೀಸಲ್ ಜನರೇಟರ್‌ಗಳನ್ನು ಉಪಯೋಗ ಮಾಡಬೇಕಾಗುತ್ತದೆ. That has become very costly We put most minimum or sometimes no tax at all for the life saving drugs. Oxyzen Gas, is it not life saving? It is also life saving.

ತಾವು ಹಾಕಿದ್ದೀರಿ ದಯಮಾಡಿ ನೋಡಿ. ಅಮ್ಲಜನಕ ಗ್ಯಾಸ್‌ಗೆ ಟ್ಯಾಕ್ಸ್ ಹಾಕಿದ್ದೀರಿ. ದಯಮಾಡಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ. Because it is used for life saving instruments.

ಇನ್ನು ಪೆಟ್ರೋಲ್ ಉತ್ಪನ್ನಗಳಿಗೆ ಕೂಡ ಇದು ವಿಪರೀತಿ ಹಾಕಿದ್ದೀರಿ. ಕೆಎಸ್‌ಆರ್‌ಟಿಸಿಯವರು ಈಗಾಗಲೇ ದರಗಳನ್ನು ಏರಿಸಿ ಬಿಟ್ಟಿದ್ದಾರೆ. ಇದು ಕೂಡ ಏನಾಗುತ್ತದೆ ಎಂದರೆ, ಬಹಳ ವಿಪರೀತವಾಗಿ ತೊಂದರೆ ನಮ್ಮ ಗ್ರಾಹಕರಿಗೆ ಖಂಡಿತವಾಗಿ ಆಗುತ್ತದೆ. ಇನ್ನೊಂದುವಿಚಾರ ತಮ್ಮ ಗಮನಕ್ಕೆ ತರುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಸಿಮೆಂಟ್‌ವಿಚಾರ, ಇದರಲ್ಲಿ ಮಿನಿ ಸಿಮೆಂಟ್ ಕೂಡ ಈಗಾಗಲೇ ತತ್ತರಿಸುತ್ತಿದೆ. ಅವರುಬದುಕತಕ್ಕಂತಹ ಅವಕಾಶ ಇಲ್ಲ. ನಮ್ಮಲ್ಲಿ ಕೆಲವು ಈಗಾಗಲೇ ಚೇತರಿಸಿಕೊಳ್ಳುತ್ತಿವೆ. ಆ ಸಮಯಕ್ಕೆ ಕೂಡ ತಾವು ಒಂದು ಕಡೆ ಸೇಲ್ಸ್ ಟ್ಯಾಕ್ಸ್ ಇನ್‌ಕ್ರೀಸ್, ಮತ್ತೊಂದು ಕಡೆ ಎಂಟ್ರಿ ಟ್ಯಾಕ್ಸ್ ಇವೆರಡರಿಂದ ತತ್ತರಿಸತಕ್ಕಂತಹ ಪರಿಸ್ಥಿತಿ ಬರುತ್ತಿದೆ. ಕರ್ನಾಟಕದಲ್ಲಿ We had taken a conscious decision. ಅದೇನೆಂದರೆ, ನಮ್ಮ ಕಾಲದಲ್ಲಿ ಸುಮಾರು ಒಂಬತ್ತು ಸಿಮೆಂಟ್ ಕಾರ್ಖಾನೆಗಳು, ಕರ್ನಾಟಕದಲ್ಲಿ ಒಂದು ಕಾಲದಲ್ಲಿ ಸುಮಾರು 10-20 ವರ್ಷಗಳ ಕಾಲ ನಮ್ಮಲ್ಲಿ ಇಷ್ಟೇ ಅನುಕೂಲ ಇದ್ದರೂ ಕೂಡ ಯಾರೂ ಸಿಮೆಂಟ್ ಕೈಗಾರಿಕೆ ಮಾಡುವುದಕ್ಕೆಮುಂದೆ ಬರುತ್ತಿಲ್ಲ. ಏಕೆಂದರೆ, ನಮ್ಮ ಟ್ಯಾಕ್ಸೇಷನ್ ಜಾಸ್ತಿ. ಎಲ್ಲಾ ಆಂಧ್ರದಲ್ಲಿ ಮಾಡುವುದಕ್ಕೆ ತಯಾರಿದ್ದಾರೆ. There was flight of cement industries from Karnataka to the neighbouring states particularly andhra pradesh. Therefore, we use to take very conscions decision of encouraging them. That's how we could attract about nine cement factories. ಇದರಿಂದ ಏನಾಗುತ್ತದೆ ಎಂದರೆ, ತಾವು ಇವತ್ತು ಎಂಟ್ರಿ ಟ್ಯಾಕ್ಸ್ ಒಂದು ಕಡೆ ಅಂದರೆ, ಮತ್ತೊಂದು ಕಡೆ ತಾವು ಇವತ್ತು ಈ ಸಿಮೆಂಟ್ ಕಾರ್ಖಾನೆಗಳಿಗೆ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಮಾಡಿ ಯಾವ ಒಂದು ಉದ್ದೇಶದಿಂದ ನಾವು ಕೈಗಾರಿಕಾ ನೀತಿಯನ್ನು ಅನುಸರಿಸಿ ಸಿಮೆಂಟ್ ಕೈಗಾರಿಕೆಗೆ Karnataka could get a primacy of place. We are at the process of acquiring number on place. Again for another twenty years there will be a flight of cement industries.

ಇದು ನಮ್ಮ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್‌ಗೆ ತೊಂದರೆಯಾಗುತ್ತದೆ. ತಮಗೆ ಬರತಕ್ಕಂತಹ ಆಧಾಯಕಕ್ಕೆ ತೊಂದರೆ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಬಹುಶಃ ತಾವು ಮರುಪರಿಶೀಲನೆ ಮಾಡಬೇಕು ಎಂಬುದನ್ನು ನಾನು ಹೇಳುತ್ತೇನೆ. ಏಕೆಂದರೆ, ಆಂಧ್ರ ಪ್ರದೇಶದಲ್ಲಿ ಮಿನಿ ಸಿಮೆಂಟ್ ಉತ್ಪಾದನೆ ಅಗತಕ್ಕಂತಹ ಸಿಮೆಂಟ್ ಕಾರ್ಖಾನೆಗಳಿಗೆ 50 ಪರ್ಸೆಂಟ್ ರೇಟ್ ಆಫ್ ಟ್ಯಾಕ್ಸ್ ಮಾಡಿದಿರಿ. 1991ರಲ್ಲಿ ಮಾಡಿದ್ದೀರಿ. ನಮ್ಮದು ನಾವು ಮಾಡಬೇಕಾಗಿತ್ತು, ಆದರೆ ನಾವು ಮಾಡಲಿಲ್ಲ. ಇತ್ತೀಚಿಗೆ ಆ ವಿಷಯವು ನನ್ನ ಗಮನಕ್ಕೆ ಬಂತು ಹಾಗೇನು ಬಂದಿದ್ದರೆ I would have done the same thing.

ಈಗ ಮಿನಿ ಸಿಮೆಂಟ್ ಕಾರ್ಖಾನೆಗಳು ಚೇತರಿಸಿದರೆ, You can also demonstrate the same gesture here in Karnataka. ಇದನ್ನು ದಯಮಾಡಿ ಮಾಡಬೇಕೆಂದು ಹೇಳುತ್ತೇನೆ ಹಾಗೂ ಇದರ ಬಗ್ಗೆ ವಿಚಾರ ಮಾಡಬೇಕೆಂದು ತಮ್ಮ ಹತ್ತಿರ ನಾನು ವಿನಂತಿಮಾಡಿಕೊಳ್ಳುತ್ತೇನೆ. ನಾವು ಎಂಟರ್‌ಟೈನ್‌ಮೆಂಟ್ ಟಾಕ್ಸ್ ಬಗ್ಗೆ ಸನ್ಮಾನ್ಯ ವಿ. ಎನ್ ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿ ಮಾಡಿಕೊಂಡು We had implemented that report. This is a part of that. ಎರಡು ವರ್ಷಾವಾಯಿತು, ರಿಪೋರ್ಟ್ ಕೊಟ್ಟು. ಎರಡು ವರ್ಷದಲ್ಲಿ ರಿವ್ಯೂ ಮಾಡುವ ಬದಲು ಎರಡು ವರ್ಷದ ಮೇಲೆ ಕೈಬಿಟ್ಟು ಹಿಂದಿನ ಸಿಸ್ಟಮ್‌ಗೆ ಹೋಗತಕ್ಕಂಥದ್ದರಲ್ಲಿ ಏನು ಪುರುಷಾರ್ಥ ಇದೆ. ಇದು ದಯಮಾಡಿ ಪುನರ್ ಪರಿಶೀಲನೆ ಮಾಡಬೇಕಾದುದು ಪ್ರಾಮುಖ್ಯವಾದ ವಿಚಾರ.

ಶ್ರೀ ಕಾಗೋಡು ತಿಮ್ಮಪ್ಪ : ಆಗ ಅದನ್ನು ಜಾರಿಗೆತರಕ್ಕಂಥ ಉದ್ದೇಶ, ಅಥವಾ ವಿ. ಎನ್. ಸುಬ್ಬರಾಯರ ಕಮಿಟಿ ಮಾಡುವ ಉದ್ದೇಶ ಏನೆಂದರೆ, ಡಾ॥ ರಾಜ್‌ಕುಮಾರ್ ಅವರೆಲ್ಲಾ ಸೇರಿ ತುಂಬಾ ಒತ್ತಾಯ ಮಾಡಿದ್ದರು. ಈಗ ರಾಜ್‌ಕುಮಾರ್ ಅವರ ಹತ್ತಿರ ಏನು ಹೇಳುತ್ತಿದ್ದಾರೆ ಎಂದರೆ, ನಾವು ಒತ್ತಾಯ ಮಾಡಿದ್ದೇ ತಪ್ಪು, ನಮಗೆ ಇದರಿಂದ ಏನೂ ಪ್ರಯೋಜನವಿಲ್ಲ ಬೇರೆಯವರೆ ಪ್ರಯೋಜನವಾಗಿದೆ ಎಂದು ಅವರೇ ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ ಮಾಡಿ ಮುಖ್ಯ ಮಂತ್ರಿಗಳು ಬಡ್ಜೆಟ್ ಬಗ್ಗೆ ಮಾತನಾಡುತ್ತಾರೆ, ಅನಿವಾರ್ಯವಾಗಿ ನಾವು ಏಳು ಗಂಟೆಗೆ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ, ನಾವು ಹೋಗುತ್ತಿದ್ದೇವೆ. ಹಣಕಾಸಿನ ಮಂತ್ರಿಗಳು ಒಳಗಡೆ ಮಾತನಾಡುವ ಸಂಧರ್ಭದಲ್ಲಿ ಇವತ್ತೇ ಈ ಬಡ್ಜೆಟ್‌ಗೆ ಉತ್ತರ ಕೊಡುತ್ತೇವೆ

ಎನ್ನುವ ಮಾತು ಹೇಳಿದರು. ನಾವು ಅಲ್ಲಿ ಚರ್ಚೆ ಮಾಡುವ ಕಾಲದಲ್ಲಿ ನಾಳೆ ಬೆಳಿಗ್ಗೆ 10 ಗಂಟೆಗೆ ಕೊಡಬೇಕೆಂದು ಹೇಳಿದೆವು. ದಯಮಾಡಿತಮ್ಮ ಅಪ್ಪಣೆಯನ್ನು ಕೇಳಿ, ಇನ್ನು ಒಂದು ಪ್ರಮುಖವಾದ ವಿಚಾರ, ಈ ಪಾನ ನಿಷೇಧ ಜಾರಿಗೆ ತರುವ ಬಗ್ಗೆ ಎಲ್ಲರೂ ಶಾಸಕರು ಅಲ್ಲಿ ಒಪ್ಪಿಕೊಂಡು ಬಂದು ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ, ಮುಂದೆ ಏನುಮಾಡಬೇಕು ಎನ್ನುವ ದೃಷ್ಟಿಯಿಂದ ಅನಿವಾರ್ಯವಾಗಿ ನಾವು ಸಭೆಗೆ ಹೋಗಬೇಕಾಗಿದೆ. ನಾಳೆ ಬೆಳಿಗ್ಗೆ 10 ಗಂಟೆಗೆ ರಿಪ್ಲೇ ಕೊಡ ತಕ್ಕಂತಹ ವ್ಯವಸ್ಥೆಯ ತಾವು ಮಾಡಿಕೊಂಡಬೇಕೆಂದು ನಾನು ವಿಂನತಿ ಮಾಡುತ್ತೇನೆ.

ಉಪಾಧ್ಯಕ್ಷರು : ಅವರು ನೀವು ಒಪ್ಪಿಕೊಂಡರೆ, ನನ್ನದು ಏನೂ ಅಭ್ಯಂತರವಿಲ್ಲ.

ಶ್ರೀ ಸಿದ್ಧರಾಮಯ್ಯ : ನಾಳೆ ಇಲ್ಲಿ ಆಗಬೇಕು, ಮತ್ತು ಮೇಲ್ಮನೆಗೆ ಹೋಗಬೇಕಾಗುತ್ತದೆ. 28, 29 ಮತ್ತು 30 ಎಲ್ಲಾ ರಜ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 11 ಗಂಟೆಗೆ ಮೊದಲು ಕೊಡಿ. ಕೊಶ್ಚನ್ ಹವರ್‌ಗಿಂತ ಮೊದಲು ಕೊಡಿ. ನಂತರ ಪ್ರಶ್ನೋತ್ತರ ವೇಳೆ ತೆಗೆದುಕೊಂಡರೆ ಒಳ್ಳೆಯದು. ಇಲ್ಲಿ ಏನಾದರೂ ಇದ್ದರೆ ಮಧ್ಯಾಹ್ನದ ಮೇಲೆ ಬನ್ನಿ

ಶ್ರೀ ಸಿದ್ಧರಾಮಯ್ಯ : ಇವೆಲ್ಲಾ ಪ್ರಿಂಟ್ ಆಗಬೇಕು, ಅಲ್ಲಿಗೆ ಹೋಗಬೇಕು ಬಹಳ ತೊಂದರೆಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನೂ ಆಗಿಲ್ಲ, ಸರ್ಕಾರದ ಪ್ರೆಸ್ ಇದೆ. ಎಮರ್ಜೆನ್ಸಿಗೆಂದೇ ಸರ್ಕಾರದ ಪ್ರೆಸ ಇರುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾವು ವಿರೋಧ ಪಕ್ಷದಲ್ಲಿದ್ದಾಗ ನಾವೆಲ್ಲಾ ನಿಮಗೆ ಸಹಕಾರ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ ಅಬಕಾರಿನೀತಿಯ ಬಗ್ಗೆ ವಿಶೇಷವಾದಂಥ ಒಂದು ಟರ್ನ್ ಅರೌಂಡ್ ಒಂದು ಮಾರ್ಪಾಡನ್ನು ಈ ಸರ್ಕಾರ ಮಾಡಿದೆ. ಈಗ ಸುಮಾರು ಎರಡೂವರೆ ವರ್ಷದಿಂದ ಪಾನ ನಿಷೇಧ ಮಾಡುತ್ತೇವೆ ಎಂದು ಹೇಳಿಕೆ ಕೊಡುತ್ತಾ ಬಿಂದಿದ್ದಾರೆ. ಅದಕ್ಕೆ ಒಂದು ಸಬ್ ಕಮಿಟಿ ಮಾಡಿದರು, ಮಹಾತ್ಮಾ ಗಾಂಧೀಜಿಯರ ಹೆಸರನ್ನು ಸಾಕಷ್ಟು ಚಲಾವಣೆಗೆ ತಂದರು. ಕೊನೆಗೆ ಪಾನ ನಿಷೇಧ ಮಾಡಲಿಲ್ಲ. ಅದರ ಬದಲು ಇನ್ನೂ ಆ ಒಂದು ನೀತಿಯಲ್ಲಿ ಸಂಪೂರ್ಣ ಸಡಿಲ ಮಾಡಿದರು. ಟೋಟಲ್ ಶರಣಾಗತಿ. ಇವೊತ್ತು ಒಂದು ದೊಡಡ್ ದುರಂತ ಈ ಸರ್ಕಾರಕ್ಕೆ

ಆಗಿದೆ. ಅದು ಹೇಗ ಸಂಭಾಳಿಸಿಕೊಳಿಸಿಕೊಳ್ಳುತ್ತೀರೋ ಅದು ಪ್ರತ್ಯೇಕ ವಿಚಾರ. Prohibition is a good policy and relaxation is a bad one and fully privatising is worst. Now, I don't say what we are doing is good. It was bad policy relaxing the prohibition.

ಈವಾಗ ಅದಕ್ಕಿಂತ ಹೆಚ್ಚು ಮುಂದೆ ತಾವು ಹೋಗಿದ್ದೀರಿ. ನಾನು ಹೇಳಿದೆ, ಒಂದು ಪಬ್ಲಿಕ್ ಪಾಲಿಸಿ ಮಾಡುವಾಗ ಟ್ರಾನ್ಸ್‌ಫರೆನ್ಸಿ ಇರಬೇಕು, ಆಗ ಅಕೌಂಟ್‌ಬಿಲಿಟಿ ಬರುತ್ತದೆ, ಆದರಿಂದ ಆರ್ಬಟ್ರೆ ರೀನೆಸ್ ಹೋಗುತ್ತದೆ. ಇಚ್ಛಾನುಸಾರವಾಗಿ ಒಂದು ಸರ್ಕಾರದ ವ್ಯವಸ್ಥೆಯನ್ನು ಉಪಯೋಗ ಮಾಡಿಕೊಳ್ಳುವಂಥ ಪರಿಸ್ಥಿತಿ ಅದರಿಂದ ಉದ್ಭವವಾಗುತ್ತದೆ. ಇದು ಯಾವುದನ್ನೂ ಲಕ್ಷಕ್ಕೆ ತೆಗೆದುಕೊಳ್ಳಲಿಲ್ಲ, ಹರಾಜನ್ನು ನಿಲ್ಲಿಸಿ ಪರವಾನಗಿ ಸಿಸ್ಟಮ್ That will lead to.

ಸಿಎಲ್-2, ಸಿಎಲ್-9 ಇದರಲ್ಲಿ ಏನಾಗುತ್ತಿತ್ತು, ಇದೇ ರೀತಿಯಲ್ಲಿ, ಅಂದರೆ The centract will result in perpetuality.

ಈಗ ಸಿಎಲ್-2, ಕೊಟ್ಟಿದ್ದೀರಿ, ಅದು ಪರಮನೆಂಟ್ ಪ್ರತಿವರ್ಷ ರಿನ್ಯೂ ಮಾಡುತ್ತಾರೆ ಅದು ಶಾಶ್ವತ. That means you are going to create a vested interest in perpetuality with regard to the arrack trade.

ಇದು ಸರ್ಕಾರದ ವರಮಾನ ದೃಷ್ಟಿಯಲ್ಲಿ ಕೂಡ ಒಳ್ಳೆಯದಲ್ಲ. ಸಾರ್ವಜನಿಕ ದೃಷ್ಟಿಯಲ್ಲಿಕೂಡ ಒಳ್ಳೆಯದಲ್ಲ. It will lead to lot of discretion, lot of arbitrariness and partisanship.

ಮತ್ತು ಸಾಕಷ್ಟು ಅಪವಾದಕ್ಕೆ ಪ್ರತಿ ಸಾರಿ ಕೂಡ ಸರ್ಕಾರ ಗುರಿ ಆಗಬೇಕಾದಂಥ ಒಂದು ವ್ಯವಸ್ಥೆ ತಾವು ಇಚ್ಛಾನುಸಾರ ಮಾಡಿದ್ದೀರೋ ಅಥವಾ ಸರಿಯಾಗಿ ತಿಳಿದುಕೊಳ್ಳದೆ ಮಾಡಿದ್ದೀರೋ ಅದು ಗೊತ್ತಿಲ್ಲ. ಆದರೆ ಈ ಹರಾಜು ಎಷ್ಟೋ ವರ್ಷಗಳಿಂದ ನಡೆದಿದೆ that was a time-tested method.

ಈ ಹರಾಜಿನಲ್ಲಿ ಯಾವ ರೀತಿಯಾಗಿ ಕೆಲವವು ಅದನ್ನು ಮೊನಾಪಲಿ ಮಾಡಿ ಕೊಳ್ಳುತ್ತಿದ್ದರು ಅಂತಹ ಮೋನಾಪಲಿಗಳನ್ನು ನಿಲ್ಲಿಸಿ ಕೂಡ ಕಟ್ಟುನಿಟ್ಟಾದ ಒಂದು ನೀತಿಯನ್ನು ನಮ್ಮ ಸರ್ಕಾರ ಇದ್ದಾಗ ಮಾಡಿತ್ತು ನಾವು ತಾಲ್ಲೂಕು ಲೇವಲ್‌ನಲ್ಲಿ ಹರಾಜು ಮಾಡಿದ್ದೇವೆ, ಶಾಪ್‌ವೈಸ್ ಹರಾಜು ಮಾಡಿದ್ದೇವೆ ತಮ್ಮ ಕಾಲದಲ್ಲಿ. ಬೇರೆ ಬೇರೆ ರೀತಿಯಲ್ಲಿ ತಾವು

ಪ್ರಯೋಗವನ್ನು ಮಾಡುವುದಕ್ಕೆ ಅಡ್ಡಿ ಇರಲಿಲ್ಲ. ಆದರೆ a well tested system like a ಹರಾಜು where the flexibility, elasticity of generation of more income iwll be seen.

ಇದು ಈ ಪರವಾನಿಗೆ ನೀತಿಯನ್ನು ಅದರಿಂದ ಖಂಡಿತವಾಗಿಕೂಡ ಸರ್ಕಾರ ಹೆಚ್ಚಿನ ಒಂದು ಅಪವಾದಕ್ಕೆ ಗುರಿ ಆಗುತ್ತದೆ ಮತ್ತು ಸರ್ಕಾರದ ಎಕ್ಸೈಜಿಕ್ಕರೆಗೂ ಕೂಡ ಅಪಾರವಾದ ನಷ್ಟವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಆದುದರಿಂದ ಪಾನ ನಿಷೇಧವನ್ನು ಖಂಡಿತವಾಗಿ ಜಾರಿಗೆ ತನ್ನಿ ಎಂದು ನಾನು ಒತ್ತಾಯ ಮಾಡತ್ತಿದ್ದೇನೆ. ಕೊನೆಯ ಪಕ್ಷ ಆರ್ಯಾಕನ್ನಾದರೂ ಕೂಡ ನಿಲ್ಲಿಸುವ ಅಶಾಭಾವನೆ ನನ್ನಲ್ಲಿ ಇತ್ತು. ಅದನ್ನೂ ಕೂಡ ಮಾಡಲಿಕ್ಕೆ ತಾವು ಹೋಗಲಿಲ್ಲ. ಇನ್ನೊಂದು ತಾವು ತಂದಿದ್ದು ಸ್ಯಾಚೆಟ್ ಬದಲಬ್ಬಾಟ್ಲಿಂಗ್. ಬಾಟ್ಲಿಂಗ್ ಕಾಂಟ್ರ್ಯಾಕ್ಟ್ ಬಗ್ಗೆ ಸರ್ವೋಚ್ಚನ್ಯಾಯಾಲಯದಲ್ಲಿ, ಸುಪ್ರೀಮ ಕೋರ್ಟ್ ಡಿಸಿಜನ್ ಇದೆ. ಯಾವ ರೀತಿಯಲ್ಲಿ It was a most scandalous episode during your previous regime. ನಾನು ಅಧಿಕಾರಕ್ಕೆಬಂದ ಕೂಡಲೇ, 1993ನೇ ಸಾಲಿನಲ್ಲಿ ನಾವು ಅದನ್ನು ಸ್ಯಾಜೆಟ್‌ಗೆ ಬದಲಾವಣೆ ಮಾಡಿದ್ದೇವೆ..ಈಗ ತಾವು ತೆಗೆದುಕೊಂಡಿರತಕ್ಕಂಥ ಕೆಲಸ ತಮ್ಮ ಬಡ್ಜೆಟ್ ಭಾಷಣದಲ್ಲಿ ನಿವೇ ಹೇಳಿದ್ದೀರಿ 150 ಕೋಟಿ ರೂಪಾಯಿ ನಷ್ಟ ಆಗುತ್ತದೆಂದು. ನಾನು ನಿಮಗೆ ಹೇಳುವುದಾದರೆ ನಾನು ಅಬಾಲಿಷ್ ಮಾಡಿದಂಥ ಸಂದರ್ಭದಲ್ಲಿ ಕೂಡ ಸುಮಾರು ಸರ್ಕಾರ ಎಕ್ಸೈಜಿಕ್ಕರ್‌ಗೆ ಕಾಂಟ್ರ್ಯಾಕ್ಟರಿಗೆ ಕೊಟ್ಟು ಸುಮಾರೂ 58-60 ಕೋಟಿ ರೂಪಾಯಿಗಳ ವರೆಗೆ ಬಾಟ್ಲಿಂಗ್ ಮಾಡುತ್ತಿರಲಿಲ್ಲ ಅಧ್ಯಕ್ಷರೆ. It was a known fact. It was even either.

ಗ್ಲಾಸ್ ಮುಖಾಂತರ ಅಥವಾ ಸ್ಯಾಜೆಟ್ ಮುಖಾಂತರ ಕೊಡುತ್ತಿದ್ದರು. ಬಾಟ್ಲಿಂಗ್‌ಗಳು ಆಗುತ್ತಿರಲಿಲ್ಲ. ಬಾಟ್ಲಿಂಗ್ ಕಾಂಟ್ರ್ಯಾಕ್ಟರ್‌ಅವರೇ ನಡೆಸುತ್ತಿರಲಿಲ್ಲ. ಯಾರಿಗೋಪವರ್ ಆಫ್‌ಅಟಾರ್ನಿಯನ್ನು ಕೊಟ್ಟು ಅಥವಾ ಮ್ಯಾನೇಜಮೆಂಟ್ ಕನ್ಸಲೆಟೆಂಟ್ ಮಾಡಿ ಆ ಬಾಟ್ಲಿಂಗ್ ಕಂಟ್ರಾಕ್ಟ ಮಾಡಿ, ಕಾಂಟ್ರ್ಯಾಕ್ಟಗಳನ್ನು ಮಾರಿ ಅವರು ಸುಲಭವಾಗಿ ಹಣವನ್ನು ಗಳಿಸತಕ್ಕಂಥ ಒಂದು ಪರಿಸ್ಥಿತಿ ಆ ಫಿಲ್ಡನಲ್ಲಿ ಇತ್ತು.ಇವೊತ್ತು 150 ಕೋಟಿ ರೂಪಾಯಿ ಯಾರಿಗೆ? ಗ್ರಾಹಕರಿಗಲ್ಲ, This arrack cost will increase and it will go to the middle pomple who will not do any efforts. ಅದು 150 ಕೋಟಿರೂಪಾಯಿ ನೇರವಾಗಿ ಕಾಂಟ್ರ್ಯಾಕ್ಟರ್‌ಗಳಿಗೆ ಅಥವಾ ದಲ್ಲಾಳಿಗಳಿಗೆ ಅವರುಗಳ ಜೇಬಿಗೆಹೋಗತಕ್ಕಂಥ ಒಂದು ಸುಲಲಿತವಾದ ವ್ಯವಸ್ಥೆಯನ್ನು, ಈ ಬಾಟ್ಲಿಂಗ್ ಕಾಂಟ್ರ್ಯಾಕ್ಟಗಳನ್ನು ಇವೊತ್ತು

ಪ್ರಾರಂಭ ಮಾಡಿದ್ದೀರಿ ನೀವು ಎಂದು ಹೇಳಿದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ಬಾಟ್ಲಿಂಗ್ ಕಾಂಟ್ರಾ್ಯಕ್ಟಗಳನ್ನು ನಾನು ಸಂಪೂರ್ಣವಾಗಿ ಮುಖ್ಯವಾಗಿ ಲೆಕ್ಕರ್ ಲಾಬಿಯನ್ನು ಎದುರಿಸಬೇಕಾದಂಥ ಪರಿಸ್ಥಿತಿಯಲ್ಲಿ ಅದನ್ನು ನೀವು ಏತಕ್ಕೆ ಮಾಡುತ್ತಿದ್ದೀರಿ ಎಂದು ಅನೇಕ ಜನರು ನನಗೆ ಎಚ್ಚರಿಕೆ ಕೊಟ್ಟರು. ಆದರೆ ರಾಜ್ಯದ ಬೊಕ್ಕಸ ಮುಖ್ಯ ರಾಜ್ಯದ ಒಂದು ನೀತಿ ಮುಖ್ಯ, ಮತ್ತು ಯಾವುದೇ ರೀತಿಯಾಗಿ ಒಂದು ವ್ಯವಸ್ಥೆಯಲ್ಲಿ ಇವೊತ್ತು ಸೋರಿಕೆ ಆಗದ ರೀತಿಯಲ್ಲಿ ಗ್ರಾಹಕರನ್ನು ದೃಷ್ಟಿಯಲ್ಲಿಟ್ಟು ಕೊಂಡು ನಾವು ಮಾಡಿದ್ದೆವು. ಏಕೆಂದರೆ ಬಾಟ್ಲಿಂಗ್ ಮಾಡುವುದರಿಂದ ಇಲ್ಲಿ ಗಲ್ ಪ್ರಾಫಿಟ್ಸ್ ಅಕ್ರೂ ಆಗುತ್ತದೆ ಮತ್ತು ಬಾಟ್ಲಿಂಗ್ ಮಾಡಿರುವುದಿಲ್ಲ. ಮತ್ತು ಬಾಟ್ಲಿಂಗ್ ಸ್ಯಾಚೆಟ್ ಇಂಟ್ರಡ್ಯೂಸ್ ಮಾಡುವುದರಿಂದ ಆಗ ನಾನು ಲೆಕ್ಕ ಹಾಕಿದ್ದು 1993 ಇಸ್ವಿಯಲ್ಲಿ 8 ರೂ. ಈಗ ಬಹುಶಃ ಅದು 15 ರೂ. ಆಗಿರಬಹುದು. The expenditure for the sachet was only 2.32 for bulk litre.

ಈಗ ಒಂದು ವಿಚಾರದ ಬಗ್ಗೆ ಕೂಡ. ಮಾನ್ಯ ಬೈರೇಗೌಡರು ಈಗ ಇಲ್ಲಿ ಇಲ್ಲ. 23-2-1993ರಲ್ಲಿ ನಾನು ಬಾಟ್ಲಿಂಗ್ ಕಂಟ್ರಾ್ಯಕ್ಟ್‌ರದ್ದು ಮಾಡುವ ಮೊದಲುಆ ಬಾಟ್ಲಿಂಗ್‌ದಿಂದ ಏನೇನು ಅನಾಹುತಗಳು ಆಗುತ್ತವೆ, ಸಕೆಂಡ್ಸ್ ಆಗುತ್ತದೆ, ಥರ್ಡ್‌ಗಳು ಇಲೀಗಲ್ ಪ್ರಾಫೀಟ್ ಇವೊತ್ತುಯಾವ ರೀತಿ ಆಗುತ್ತವೆ ಎನ್ನುವಂಥದ್ದರ ಬಗ್ಗೆ ಒಂದು ದೊಡ್ಡ ಭಾಷಣ ಮಾಡಿದರು. ಈಗ ಯಾವ ರೀತಿ ಮನುಷ್ಯನ ದುರಂತ ಆಗುತ್ತದೆ ನೋಡಿ. ಯಾವ ರೀತಿ ಸರ್ಕಾರದ ದುರಂತ ಆಗುತ್ತದೆ ಎನ್ನುವುದಕ್ಕೆ ಆ ಬೈರೇಗೌಡರ ಭಾಷಣವೇಸಾಕ್ಷಿ. ಅಂದು ಅವರು ಸಾಕಷ್ಟು ವೀರಾವೇಶದ ಮಾತುಗಳನ್ನಾಡಿದರು. ಇವೊತ್ತು ವೀರಾವೇಶ ಕಳೆದುಕೊಂಡು, ಇವೊತ್ತು ಮಂತ್ರಿಮಂಡಲ ಸೇರಿದ ಮೇಲೆ ಯಾವ ರೀತಿಯಲ್ಲಿ ಪರಿಸ್ಥಿತಿಯ ಬಗ್ಗೆ ಕಾಂಪ್ರೋಮೈಸ್ ಮಾಡಿ ಒಪ್ಪಂದ ಮಾಡಿ, ಇವೊತ್ತು ಯಾವ ರೀತಿ ವೀರಾವೇಶ ಕಳೆದುಕೊಂಡು ಏನು ಆಗಿದ್ದಾರೆ ಅದರ ಬಗ್ಗೆ ನಾನು ಮಾತನಾಡಲು, ಯಾವ ಕನ್ನಡ ಶಬ್ದ ಕೂಡ ಉಪಯೋಗ ಮಾಡಲು ಅಪೇಕ್ಷೆ ಮಾಡುವುದಿಲ್ಲ. ಇನ್ನು ಸಿ.ಎಫ್.ಟಿಆರ್.ಐ.ದವರೂ ಕೂಡ Sachet is more convenient and more safe ಎಂದು ಸಿ.ಎಫ್.ಟಿ.ಆರ್.ಐ ಕೇಂದ್ರ ಸರ್ಕಾರದ ಒಂದು ಸಂಸ್ಥೆ. ಮೈಸೂರಿನಲ್ಲಿದೆ ಈ ಸಂಸ್ಥೆ ಕೂಡ ಈ ವರದಿಯನ್ನು ಕೊಟ್ಟಿದ್ದಿತು. ನಾನು ಮತ್ತೊಂದು ನಾಲ್ಕು ವರ್ಷ ಇದ್ದರೂ ಕೂಡ ಬಾಟ್ಲಿಂಗ್ ಕಾಂಟ್ರಾ್ಯಕ್ಟಗಳಿಗೆ, ನಾನು ಆ ಕಾಂಟ್ರಾ್ಯಕ್ಟ್‌ನ ಲೀಸನ್ನು ರದ್ದು ಮಾಡಿ, ಇನ್‌ವ್ಯಾಲಿಡೇಟ್ ಮಾಡಿ

ಮೈಸೂರು ಶುಗರ್ ಫ್ಯಾಕ್ಟರಿಯವರಿಗೆ ಮತ್ತು ಎಂ.ಎಸ್.ಎ.ಎಲ್. ಈ ಎರಡೂ ಸಂಸ್ಥೆಯವರಿಗೂಕೂಡ ಸ್ಯಾಜೆಟ್ ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ತಕ್ಷಣ ಕೊಟ್ಟಿದ್ದೆವು. ಅದರ ಮೇಲೆ ಹೈಕೋರ್ಟಿಗೆ ಹೋದರು. ಅದೂ ಕೂಡ ನಮ್ಮ ಅಧ್ಯಾಧೇಶವನ್ನು, ಸುಗ್ರೀವಾಜ್ಞೆಯನ್ನು ಮನ್ನಣೆ ಮಾಡಿತು.ಸುಪ್ರೀಮ್ ಕೋರ್ಟಿಗೆ ಹೋಯಿತು. ಅವರೂ ಕೂಡ ನಮ್ಮ ಅಧ್ಯಾದೇಶವನ್ನು ಮನ್ನಣೆ ಮಾಡಿದರು. ಇಷ್ಟೆಲ್ಲಾ ಕೋರ್ಟುಗಳು ಮನ್ನಣೆ ಮಾಡಿದರೂ ಕೂಡ ಇವೊತ್ತು ದೇಸಾಯಿ ಕಮಿಷನ್ ಕೂಡ ಏನು ಲೆಕ್ಕರ್ Hootch Tagedy ಬಗ್ಗೆ ಏನು ಹೇಳಿದರು ಎಂದರೆ The Government should control the liquer trade. It should be given to the public sectar ಎಂದು ಹೇಳಿ ಬಹಳ ಪ್ರಮುಖವಾದಂಥ ಒಂದು ಶಿಪಾರಸ್ಸನ್ನು ಜಸ್ಟೀಸ್ ಆರ್.ಜಿ. ದೇಸಾಯಿಯವರು ಕೂಡ ಮಾಡಿದರು. ಅದನ್ನು ಅನುಸರಿಸಿ ನಾವು ಐ.ಎಂ.ಎಫ್.ಎಲ್ ಕೂಡ.

ಶ್ರೀ ಸಿದ್ಧರಾಮಯ್ಯ : ಬಾಟ್ಲಿಂಗನ್ನು ಪ್ರೈವೇಟ್‌ನವರಿಗೆ ಕೊಡತ್ತೇವೆಂದು

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರಿಗೆ ಗೊತ್ತು, ನೀವೇ ಹೇಳಬೇಕು ಬಾಟ್ಲಿಂಗ್ ಕಾಂಟ್ರ್ಯಾಕ್ಟ್ ಹಿಂದೆ ಮಾಡಿದ್ದು ಇದೆ. ಆಗಲಿ ನೀವು ಹೇಳಿ ನಾವು ಕೊಡುವುದಿಲ್ಲ ಎಂದು ಹೇಳಿ.

ತಾವು ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಈ ವಿಚಾರವನ್ನು ಮೆನಷನ್ ಮಾಡಲಿಲ್ಲ. ಆದುದರಿಂದ ಇಂದು ಪಬ್ಲಿಕ್ ಸೆಕ್ಟರ್‌ಗೆ ಸಂಬಂಧಪಟ್ಟಂತೆ ಎರಡು ವಿಚಾರಗಳು ಬರುತ್ತವೆ. ಮೊದಲನೆಯದಾಗಿ ಎಂ.ಎಸ್.ಐ.ಎಲ್.ಗೆ ಟೋಟಲ್ ಲಿಕ್ಕರ್ ಟ್ರೇಡ್ ಐ.ಎಮ್.ಐ.ಎಮ್.ಎಫ್.ಎಲ್ ತೆಗೆದುಕೊಳ್ಳತಕ್ಕಂಥ ವಿಚಾರದಲ್ಲಿ ಈ ಸದನದಲ್ಲಿ ಸಾಕಷ್ಟುಬಾರಿ ಚರ್ಚೆಯಾಗಿದೆ. ಇದರಲ್ಲಿ ಸುಮಾರು 500 ಕೋಟಿ ರೂ.ಗಳು ಲಾಭವಾಗಿದೆ. It should have otherwise gone to private people. ನೇರವಾಗಿ ಯಾವುದೇ ಒಂದು ಸೂಕ್ಷ್ಮದ ಅರಿವಿಲ್ಲದೆ ಸರ್ಕಾರದ ಬೊಕ್ಕಸವನ್ನು ರಕ್ಷಣೆ ಮಾಡುವ ಒಂದು ಕರ್ತವ್ಯದ ಪ್ರಜ್ಞೆಯಿಲ್ಲದೇ ಇಂದು ತಾವು ಎಂ.ಎಸ್.ಐ.ಎಲ್.ನ್ನು ಕಿತ್ತೊಗೆದು, ಸುಪ್ರೀಂ ಕೋರ್ಟ್ ತೀರ್ಪನ್ನು ಸರ್ಕಾರದ ಪರವಾಗಿ ಕೊಟ್ಟರೂ ಕೂಡ, ಈಗ ನಾನು ಮೂರ್ಖನಾದೆ. ಏಕೆಂದರೆ fighting tooth and mail in the High Court and the supreme Court, I become a most foolish man and you have become a wiser man; I don't mind.

ಆದುದರಿಂದ ಲಿಕ್ಕರ್ ಹೇಳಬೇಕೆಂದರೆ ಇಂದು ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಬಹಳ ಪಶ್ಚಾತ್ತಾಪ ಪಡುತ್ತಿದ್ದರು, ಏಕಪ್ಪಾ ಇವರನ್ನೆಲ್ಲಾ ಮೇಲೆ ಹಾಕಿಕೊಂಡೆವು ಎಂದಗು. ಇವೊತ್ತು ಕೂಡ ಜನರು ಇದನ್ನು ಸ್ವೀಕಾರ ಮಾಡುತ್ತಾರೆ. ಇವರು ಪುನಃ ಬಾಟ್ಲಿಂಗ್ ಕಾಂಟ್ರಾಕ್ಟ್‌ನ್ನು ತಂದು ಹರಾಜು ರದ್ದುಮಾಡಿ ಪರ್ಮಿಟ್ ಸಿಸ್ಟಂನ್ನು ಜಾರಿಗೆ ತಂದರು. ಎಂ.ಎಸ್.ಐ.ಎಲ್. ಸ್ವಾಮ್ಯದಲ್ಲಿರತಕ್ಕಂಥ ಲಿಕ್ಕರ್ ಟ್ರೇಡ್‌ನ್ನು ಪ್ರೈವೇಟ್ ಹ್ಯಾಂಡ್ಸ್‌ನವರಿಗೆ ಕೊಟ್ಟರು. ಅದೂ ಕೂಡ ಈ ರಾಜ್ಯದ ಜನತೆ ಏನು ಮಾತನಾಡಿದರು, ಏನೂ ಮಾತನಾಡುವುದಿಲ್ಲ ಏಕೆಂದರೆ ಇದು ನಮ್ಮ ದೇಶದ ದುರಾದೃಷ್ಟ. ಆದುದರಿಂದ ನನ್ನಂಥವರಿಗೆ ಏನೆನಿಸುತ್ತದೆಂದರೆ ಇದನ್ನು ಏಕೆ ಮಾಡುವುದಕ್ಕೆ ಹೋಗಬೇಕು. Let us compremise with the present situation and carry on comfortably.

ಸರ್ಕಾರ ಇರುತ್ತದೆ, ಕುರ್ಚಿ ಇರುತ್ತದೆ, ಆರಾಮವಾಗಿ ಜೀವನ ಮಾಡತಕ್ಕಂಥ ಪರಿಸ್ಥಿತಿಯನ್ನು ಬಿಟ್ಟು ನಾವು ಮುಳ್ಳಿನ ದಾರಿಯನ್ನು ಹಿಡಿದು ಇವೊತ್ತು ಹೋಗತಕ್ಕಂಥ ಪರಿಸ್ಥಿತಿ ನಮ್ಮಂಥವರಿಗೆ ಬರುತ್ತಿದೆ. But, I will repeatedly do this. ಅದು ಮುಳ್ಳಾಗಲಿ ಅಥವಾ ಪಾತಾಳವೇ ಆಗಲೀ ಸರ್ಕಾರದ ಕಜಾನೆಯನ್ನು ರಕ್ಷಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಒಂದು ರಾಷ್ಟ್ರದಲ್ಲಿನಮ್ಮ ಮೌಲ್ಯವನ್ನು ಎತ್ತಹಿಡಿಯುವ ವಿಚಾರದಲ್ಲಿ ಏನೇಬಂದರೂ ಕೂಡ ಅಂಥ ಸವಾಲುಗಳನ್ನು ಸ್ವೀಕಾರಮಾಡುವುದಕ್ಕೆ ನಾನಂತೂ ಸಿದ್ಧನಾಗಿದ್ದೇನೆ. ಆದರೆ ನಾನು ಈ ವಿಚಾರವನ್ನು ವಿಶೇಷವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಬಾಟ್ಲಿಂಗ್ ಕಾಂಟ್ರಾಕ್ಟ್‌ನ್ನು ಗೌವರ್ನಮೆಂಟ್ ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೀರಿ ಆದರೂ ಕೂಡ ಅದರ ಲೆಕ್ಕಚಾರವನ್ನು ನಾನು ನೋಡಿದರೆ ಇದನ್ನು ಏಕೆ ಮಾಡಬೇಕು. ಏನು ಅವಶ್ಯಕತೆ ಇದೆ ಎಂಬುದನ್ನೆಲ್ಲಾ ವಿಶೇಷವಾಗಿ ಇವೊತ್ತು ಗಮನದಲ್ಲಿ ತಾವು ತೆಗೆದುಕೊಂಡು ಚರ್ಚೆ ಮಾಡಬೇಕಾದ ಅವಶ್ಯಕತೆ ಖಂಡಿತವಾಗಿಯೂ ಕೂಡ ಇದೆ. ಇಷ್ಟೇ ಅಲ್ಲದೆ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್‌ಗಳೂ ಇವೆ, ಆದರೆ ಇದರ ಬಗ್ಗೆ ನಾನು ವಿವರವಾಗಿ ಮಾತನಾಡುತ್ತಾಹೋದರೆ ಹೆಚ್ಚುಸಮಯ ಬೇಕಾಗುತ್ತದೆ ಆದರೆ ನೀವು ಈ ಸ್ಕೀಮ್‌ಗಳನ್ನೂ ಕೂಡ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಒಂದೊಂದು ತಾಲ್ಲೂಕಿಗೆ, ಒಂದೊಂದು ಮತಕ್ಷೇತ್ರಕ್ಕೆ ಸುಮಾರು 1 ರಿಂದ 1 1/2 ಕೋಟಿ ರೂ.ಗಳು ಇ.ಎ.ಎಸ್. ಸ್ಕೀಮ್‌ನಡಿಯಲ್ಲಿ ಬರುತ್ತದೆ. ಈ ವರ್ಷ ಎಷ್ಟು ಬಂದಿದೆ ಎಂಬುದನ್ನು ತಾವು ಲೆಕ್ಕ ಕೊಡಬೇಕಾಗುತ್ತದೆ. ಆದುದರಿಂದ ನಾನು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್‌ಗಳ ಬಗ್ಗೆ ಸಂಪೂರ್ಣವಾಗಿ ಲೆಕ್ಕ ನೋಡಿದ್ದೇನೆ, ಸಂಪೂರ್ಣವಾಗಿ ಈ ಯೋಜನೆಗಳಡಿಯಲ್ಲಿ ಕೊಟ್ಟ ಹಣವನ್ನು ಖರ್ಚು ಮಾಡುವುದಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ತಾವು

ಮಾಡಲಿಲ್ಲ ಎಂಬುದು ಇವೊತ್ತು ಕಂಡುಬರುತ್ತಿದೆ. ತಮ್ಮ ಬಜೆಟ್‌ನಲ್ಲಿ ಕೆಲವು ಮುಖ್ಯವಾದ ನೀತಿಗಳಿವೆ, ಅದರಲ್ಲಿ ಪ್ರಾದೇಶಿಕ ಸಮತೋಲನವನ್ನು ಒದಗಿಸುವ ಬಗ್ಗೆ. ಕರ್ನಾಟಕ ಏಕೀಕರಣವಾದ ಮೇಲೆ, ಬಹುಶಃ ಕಾವ್ಯರೂಪದ ಏಕೀಕರಣ ಭಾವೈಕ್ಯತೆ ಆದರೆ ಸಾಕಾಗುವುದಿಲ್ಲ, ಆರ್ಥಿಕ ಏಕೀಕರಣವಾಗಬೇಕಾಗುತ್ತದೆ. ಆರ್ಥಿಕ ಏಕೀಕರಣ ಇವೊತ್ತು ಇದರ ಜೊತೆಯಲ್ಲಿ ಹೊಂದಾಣಿಕೆ ಆದರೆ ಮಾತ್ರ ಸರಿಯಾದಂಥ ಆಡಳಿತವನ್ನು ನಾವು ಕೊಟ್ಟ ಹಾಗೆ ಆಗುತ್ತದೆ. ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಸರ್ಕಾರದಲ್ಲಿರುವವರು ಯಾರಿದ್ದಾರೆ ಅವರು ತಮ್ಮ ಹೃದಯದಲ್ಲಿ ಇಟ್ಟುಕೊಂಡು ಮುದುವರಿಯಬೇಕಾಗುತ್ತದೆ. ಇಲ್ಲದಿದ್ದರೆ ಅಲ್ಲಲ್ಲಿ ಒಡಕು ಉಂಟಾಗುತ್ತದೆ. ಕೊಡಗು ಬೇರೆ ರಾಜ್ಯವಾಗಬೇಕು ಎರಡು ಮಾಡುತ್ತಾರೆ, ಹೈದ್ರಾಬಾದ್ ಕರ್ನಾಟಕ ಭಾಗ ಒಂದು ರಾಜ್ಯವಾಗಬೇಕೆಂದು ಮಾಡುತ್ತಾರೆ, ಬಾಂಬೆ-ಕರ್ನಾಟಕ ಮತ್ತೊಂದು ರಾಜ್ಯವಾಗಬೇಕೆಂದು ಮಾಡುತ್ತಾರೆ, ನಕ್ಸಲಿಯೆಟ್ಸ್‌ಗಳು ನಮ್ಮ ಗಡಿಯಲ್ಲಿ ನುಗ್ಗುತ್ತಾರೆ. ಇದನ್ನು ತಡೆಹಿಡಿಯುವುದಕ್ಕೋಸ್ಕರ ನಾವು ಉದ್ದೇಶಪೂರ್ವಕವಾಗಿಕೆಲವು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ನಾವು ಕೊಡಗಿಗೆ ಅದು ಹಿಲ್‌ಏರಿಯಾ ಎಂದು ಹೇಳಿ ಪ್ರಾರಂಭದಲ್ಲಿ 5 ಕೋಟಿ ರೂ.ಗಳನ್ನು ನಾವು ಬಿಡುಗಡೆ ಮಾಡಿದೆವು. ಹಿಲ್ ಏರಿಯಾ ಎಂದು ಹೇಳಿ ವಿಶೇಷವಾಗಿ ಪ್ರತ್ಯೇಕವಾಗಿ ಮಾಡಿದ್ದೇವೆ. ಆಮೇಲೆ ಕೊಡಗು ಬೇರೆ ರಾಜ್ಯವಾಗ ಬೇಕು ಎಂದು ಏನು ಹೋರಾಟವನ್ನು ಉಗ್ರವಾಗಿ ಮಾಡುತ್ತಿದ್ದರು ಇದು ಒಂದೆರಡು ವರ್ಷಗಳ ನಂತರ ಸ್ವಲ್ಪ ಕಡಿಮೆಯಾಯಿತು. ಹಿಲ್ ಏರಿಯಾ ಕಾರ್ಯಕ್ರಮಕ್ಕೆ ತಾವು ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ನಾನಂತೂ ತಮ್ಮ ಬಜೆಟ್‌ನಲ್ಲಿ ನೋಡಲಿಲ್ಲ. ಹಿಲ್ ಏರಿಯಾ ಕಾರ್ಯಕ್ರಮಕ್ಕೆ ಹಿಂದೆಯೂ ಕೊಟ್ಟಿಲ್ಲ, ಇವೊತ್ತು ಕೊಟ್ಟಿಲ್ಲ. ಆದರೆ ಇದು ಬಹಳ ಪ್ರಮುಖ್ಯವಾದುದು. ಏಕೆಂದರೆ ಕೊಡುಗು ಜಿಲ್ಲೆಗೆ ಆ ಜಿಲ್ಲೆಯದೇ ಆದಂಥ ಪ್ರತ್ಯೇಕವಾದ ಕೆಲವು ಸಮಸ್ಯೆಗಳಿವೆ. ಸಾಮಾನ್ಯವಾದಂಥ ರಾಜ್ಯದ ಕಾರ್ಯಕ್ರಮಗಳಿಂದ ಆ ಮೈಕ್ರೋ ಅಪ್ರೋಚ್‌ನ್ನು ಮಾಡುವುದಕ್ಕೆ ನಮಗೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. We should at least provide minimum for Hill Area development programme Rs. 10 Crore ಕೊಡಗಿಗೆ ಇದು ಮಾತ್ರ ಪ್ರತ್ಯೇಕವಾಗಿ ಅನ್ವಯವಾಗುವಂಥ ಕಾರ್ಯಕ್ರಮವಾಗಿದೆ. ಮತ್ತೆ ಅನೇಕಲ್ ಏರಿಯಾ ಕಾರ್ಯಕ್ರಮಕ್ಕೆ ಅನ್ವಯವಾಗುವಂಥ ನಮ್ಮ ಸರ್ಕಾರದ ಕೆಲವು ಆದೇಶಗಳನ್ನು ಬದಲಾವಣೆ ಮಾಡಬೇಕು. ಕೆಲವು ರೆಗ್ಯುಲೇಷನ್‌ಗಳನ್ನು ಬದಲಾವಣೆ ಮಾಡಬೇಕು. ಏಕೆಂದರೆ ಯಾವಾಗ ಯಾವುದೇ ಒಂದು ಬೆನಿಫಿಟ್ ಆ ಜನಗಳಿಗೆ ಸಿಗುವುದಿಲ್ಲವೋ ಆಗ ಅವರಲ್ಲಿ ಪ್ರತ್ಯೇಕತಾ ಭಾವನೆಯ ವಿಷಬೀಜ ಅವರಲ್ಲಿ ಹುಟ್ಟಿಕೊಳ್ಳುವುದಕ್ಕೆ ಅಸ್ಪದವಾಗುತ್ತದೆ. ಇದೇ ರೀತಿಯ ಕಾರ್ಯ ಕ್ರಮ ನೀವು ಎಷ್ಟೇ ಮಾಡಿದರೂ ಕೂಡ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಒಂದು ನಿಮಿಷ ಮೊಯಿಲಿಯವರೇ ಈಲ್ಡ್ ಆಗಬೇಕು. ತಾವು ಕೊಡಗಿನ ಬಗ್ಗೆ ಟಚ್ ಮಾಡುತ್ತಿದ್ದೀರಿ, ಸ್ವಲ್ಪ ಅದರ ಬಗ್ಗೆ ಮಾತನಾಡಬೇಕು.

ಉಪಾಧ್ಯಕ್ಷರು : ಅವರು ಭಾಷಣವನ್ನು ಮುಕ್ತಾಯ ಮಾಡಿಬಿಡಲಿ.

ಶ್ರೀ ಎಂ. ವೀರಪ್ಪಮೊಯಿಲಿ : ಇನ್ನೊಂದು ಬಹಳ ಮುಖ್ಯವಾದ ಬಾರ್ಡ್‌ರ್ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ ಬಗ್ಗೆ ಹೇಳಬೇಕೆಂದರೆ, ನಾನು ಅಂದು ಯೋಜನಾ ಖಾತೆ ಸಚಿವನಾ ಡೆವಲಪ್‌ಮೆಂಟ್ ಪ್ರೋಗ್ರಾಂ ಬಗ್ಗೆ ಹೇಳಬೇಕೆಂದರೆ, ನಾನು ಅಂದು ಯೋಜನಾ ಖಾತೆ ಸಚಿವರಾಗಿದ್ದಾಗ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದರು, ತಮಗೆ ಗೊತ್ತಿರ ಬಹುದು ಈ ಬಾರ್ಡ್‌ರ್ ಏರಿಯಾ ಬಗ್ಗೆ, ತುಮಕೂರಿನ ಕೆಲವು ತಾಲ್ಲೂಕುಗಳಲ್ಲಿ, ಚಿಂಚೋಳಿ, ಗುಲ್ಬರ್ಗಾದ ಕೆಲವು ತಾಲ್ಲೂಕುಗಳಲ್ಲಿ ನಕ್ಸಲೈಟ್ಸ್ ಇವೊತ್ತು ಬಹಳ ವಿಪರೀತವಾದ ಹಾವಳಿಯನ್ನು ಮಾಡುತ್ತಿದ್ದಾರೆ. ರಾಯಚೂರಿನ ಕೆಲವು ತಾಲ್ಲೂಕುಗಳಲ್ಲಿ ನಕ್ಸಲೈಟ್ಸ್ ಚಟುವಟಿಕೆ ಹೆಚ್ಚಾಗಿ ಆಗುತ್ತಿರುವುದಕ್ಕೆ ಮುಖ್ಯಾಕಾರಣವೆಂದರೆ ಅಲ್ಲಿ ಇರತಕ್ಕಂಥ ಶೋಷಣೆಗೊಳಗಾಗಿರುವ ಬಡವರ ಜೀವನದಲ್ಲಿ ಒಂದು ರೀತಿಯ ಕ್ಷೋಭೆ, ಅದು ಎದ್ದಾಗ ಇವೊತ್ತು ನಕ್ಸಲೈಟ್ಸ್ ಚಟುವಟಿಕೆಗಳಿಗೆ ಕರ್ನಾಟಕ ಕೂಡ ಬಲಿಯಾಗುತ್ತದೆ ಎನ್ನುವ ಒಂದು ಅಪಾಯದ ಅಂಚಿನಲ್ಲಿ ಕರ್ನಾಟಕ ರಾಜ್ಯದ ಗಡಿಭಾಗಗಳು ಇರತಕ್ಕಂಥ ಒಂದು ಸಂದರ್ಭದಲ್ಲಿ ನಾವು ಈ ಬಾರ್ಡ್‌ರ್ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂನ್ನು ತೆಗೆದುಕೊಂಡೆವು. ಇನ್ನು ಹೈದ್ರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ವಿಚಾರದಲ್ಲಿಯೂ ಕೂಡ ಆ ಭಾಗದ ಜನರಲ್ಲಿ ಒಂದು ಅಸಮಾಧಾನವಿದ್ದಂಥ ಸಂದರ್ಭದಲ್ಲಿ ಮೊದಲು ಈಗಿನ ನಮ್ಮ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಗಿತ್ತು. ಆಮೇಲೆ ನಾವು ಇದಕ್ಕೆ ಕಾನೂನಿನ ಸ್ವರೂಪವನ್ನು ಕೊಟ್ಟು ಹೈದ್ರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ನಾವು ರಚನೆ ಮಾಡಿದೆವು. ಆಮೇಲೆ ಮಲೆನಾಡು ಏರಿಯಾ ಡೆವಲಪ್‌ಮೆಂಟ್ ಬಗ್ಗೆ ಸಂಬಂಧಪಟ್ಟಂತೆ ಅಲ್ಲಿಯೇ ಕೆಲವು ರೀತಿಯಾದ ಸಮಸ್ಯೆಗಳಿತ್ತು, ಅದುದರಿಂದ ಅದನ್ನೂ ಕೂಡ ನಾವು ಮಾಡಿದೆವು. ಆಮೇಲೆ ಬಯಲು ಸೀಮೆಯ ಬಗ್ಗೆ ಕಾಳಜಿ ತೆಗೆದುಕೊಂಡು ನಮ್ಮ ಕಾಲದಲ್ಲಿಯೇ ಬಯಲು ಸೀಮೆಗೆ ಸಂಬಂಧಪಟ್ಟಂತೆ ಶಾಸನವನ್ನು ಮಾಡಿದೆವು. ಆದುದರಿಂದ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸತಕ್ಕಂಥ ಈ ರೀತಿಯ ಕಾನ್ಸ್‌ನ್‌ಟ್ರೇಟೇಡ್ ಪ್ರೋಗ್ರಾಂನ್ನು ಮಾಡತಕ್ಕಂಥ

ದಿಸೆಯಲ್ಲಿ ತಾವು ಕಾರ್ಯವನ್ನು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ತಾವು ಇದಕ್ಕೆ ಏನು ಆಧ್ಯತೆಯನ್ನು ಕೊಟ್ಟಿದ್ದೀರಿ. ನಾವು ಇಂದು ಕೇಳುತ್ತೇವೆ. ನಾವು 1993-94ರಲ್ಲಿ ಹೆಚ್.ಕೆ.ಡಿ.ಬಿ.ಗೆ ಕೊಟ್ಟಂಥ ಹಣ 53 ಕೋಟಿ 79 ಲಕ್ಷ ರೂ.ಗಳು, 1994-95ರಲ್ಲಿ ನಾವು 66 ಕೋಟಿ ರೂ.ಗಳನ್ನು 36 ಕೋಟಿಗೆ ಇಳಿಸಿದಿರಿ. 1995-96ರಲ್ಲಿ ಬರೇ 45 ಕೋಟಿ ರೂ.ಗಳು, 1996-97ರಲ್ಲಿ 60 ಕೋಟಿ ರೂ.ಗಳನ್ನು ಕೊಟ್ಟಿದ್ದರೂ ಕೂಡ ರಿವೈಸ್ಟ್ ಎಸ್ಟಿಮೇಟ್‌ನಲ್ಲಿ ಖರ್ಚು ಮಾಡಿರುವ ಬಗ್ಗೆ ಏನು ತೋರಿಸಿದ್ದೀರೆಂದರೆ 30.2 ಕೋಟಿ ರೂ.ಗಳನ್ನು ಮಾತ್ರ ನೀವು ಸ್ಪೆಂಡ್ ಮಾಡಿದ್ದೀರಿ. ನಾವು 60 ಕೋಟಿ ರೂ.ಗಳನ್ನು ಕೊಟ್ಟಿದ್ದನ್ನು 100 ಕೋಟಿ ರೂ.ಗಳಿಗೆ ಎತ್ತರಿಸಬೇಕು. ಇದರಿಂದ ಎಸ್.ಇ.ಪಿ. ಹಣ ತೆಗೆಯಬಹುದು. ತೆಗೆದಿರಬಹುದು. ನಾನು ಹೇಳಿದ್ದು ಅಲಾಟ್‌ಮೆಂಟ್ ಬಗ್ಗೆ ಮತ್ತು ಎಕ್ಸ್‌ಪೆಂಡೀಚರ್ ಬಗ್ಗೆ, ವಿಭಾಗ ಯಾವುದಾದರೂ ಇರಬಹುದು, 1993-94ರಲ್ಲಿ ಪ್ರಾರಂಭವಾದಾಗ ಕೊಟ್ಟಂಥ 60 ಕೋಟಿ ರೂ.ಗಳನ್ನೇ ಈಗಲೂ ಕೊಡಲು ಉದ್ದೇಶಿಸಿದ್ದೀರಿ. ಇದರಿಂದ ಜನಗಳಿಗೆ ಏನು ವಿಶ್ವಾಸ ಉಳಿಯುತ್ತದೆ? ಈ ರೀತಿಯಲ್ಲಿ ನೀವು ಪ್ರದೇಶಕ ಅಸಮತೋಲನೆಯನ್ನು ಮಾಡಿ ಮಲೆನಾಡನ್ನು ಕೂಡ ಅದೇರೀತಿಯಲ್ಲಿ ಮಾಡಿದ್ದೀರಿ. 1993-94ನೇ ಸಾಲಿನಲ್ಲಿ 35 ಕೋಟಿ ರೂಪಾಯಿಗಳನ್ನು ನನಗೆ ಕೊಟ್ಟಿದ್ದೀರಿ. ಅದನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಅದರಲ್ಲಿ 33.05 ಕೋಟಿ ರೂಪಾಯಿ ಖರ್ಚಾಯಿತು. 1994-95ನೇ ಸಾಲಿನಲ್ಲಿ 35 ಕೋಟಿ ರೂಪಾಯಿಗಳನ್ನು ನನಗೆ ಕೊಟ್ಟಿದ್ದೀರಿ. ಅದನ್ನು ಖರ್ಚು ಮಾಡಲಿಲ್ಲ ಆ ಉಳಿದ ತಿಂಗಳಲ್ಲಿ. 20 ಕೋಟಿ ರೂಪಾಯಿ ರಿವೈಸ್ಡ್ ಎಸ್ಟಿಮೇಟ್ ಮಾಡಿದಿರಿ. ನಂತರ ಈಗಿನ ಪರಿಸ್ಥಿತಿಯನ್ನು ನೋಡಿ. 1995-96ರಲ್ಲಿ 22.50 ಕೋಟಿ ರೂಪಾಯಿ ಕೊಟ್ಟಿದ್ದರೆ, 1996-97 ರಲ್ಲಿ 30 ಕೋಟಿ ರೂಪಾಯಿ ಕೊಟ್ಟಿದ್ದರೆ ಅದನ್ನು ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 15.15 ಕೋಟಿ ರೂಪಾಯಿ ಮಾಡಿದ್ದಾರೆ. ಅದನ್ನು ಅರ್ಧಕ್ಕೆ ಇಳಿಸಿಬಿಟ್ಟಿರಿ. 1997-98ಕ್ಕೆ ಎಷ್ಟು ಕೊಟ್ಟಿದ್ದೀರಿ? ನಾವು ನಮ್ಮ ಕಾಲದಲ್ಲಿ 35 ಕೋಟಿ ರೂಪಾಯಿಗೆ ಪ್ರಾರಂಭ ಮಾಡಿ ಅದನ್ನು ಈಗ 50 ಕೋಟಿ ರೂಪಾಯಿ ಕೊಡಬೇಕೆಂದು ಲೆಕ್ಕಾಚಾರ ಹಾಕಿದರೆ, ಈಗ ನೀವು ಪ್ರೊವೈಡ್ ಮಾಡಿದ್ದು 30 ಕೋಟಿ ರೂಪಾಯಿ. ಆದರೂ ಕೂಡ ನಾರು ಬಹಳ ಸಮಾಧಾನವಾಗಿ ಎಲ್ಲಾ ಭಾಗದ ಜನರು ಎಷ್ಟು ಸ್ಥಗಿತವಾದರೂ ಕೂಡ ಮೌನವಾಗಿದ್ದೇವೆ. ಇದು ಒಂದು ರೀತಿಯಲ್ಲಿ ಸರ್ಕಾರ ಜನತೆ ಮೇಲೆ ಮಾಡತಕ್ಕಂಥ ಶೋಷಣೆ. ಈ ಶೋಷಣೆ ಬಗ್ಗೆ ಪ್ರತಿಭಟನೆ ಮಾಡತಕ್ಕಂಥ ಶಕ್ತಿ unfortunately, all of us have lost.

ಇಲ್ಲದಿದ್ದರೆ ಈ ರೀತಿಯಲ್ಲಿ ಕಣ್ಣೆದುರಿಗೆ ಇವತ್ತು ಈ ರೀತಿ ವಂಚನೆ, ಈ ರೀತಿಯ ಮೋಸ, ಈ ರೀತಿಯ ಒಂದು ಪ್ರಾದೇಶಿಕ ಅಸಮತೋಲವನ್ನು ಏರ್ಪಾಡು ಮಾಡುವುದಕ್ಕೆ

ಇರತಕ್ಕಂಥ ಕಾರ್ಯಕ್ರಮದ ಬುಡಕ್ಕೆ ಇವತ್ತು ಕೊಡಲಿ ಏಟು ಹಾಕತಕ್ಕಂಥ ಒಂದು ಕೆಲಸ ನಡೆದಿದೆಯೆಂದರೆ ಇದು ರಾಜ್ಯದ ಒಂದು ದುರಂತ. ಮತ್ತೊಂದು ವಿಚಾರವೇನೆಂದರೆ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್, ಈ ಒಂದು ಕಾರ್ಯಕ್ರಮವನ್ನು ನಾವು ಯಾವ ಉದ್ದೇಶಕ್ಕಾಗಿ ಮಾಡಿದ್ದೇವೆ, ಆ ಕಡೆ ಬೆಳಗಾಂ ಬಾರ್ಡರ್‌ಗಳಲ್ಲಿ ಇವತ್ತು ಅಲ್ಲಿ ಮಹಾರಾಷ್ಟ್ರ ಚೆನ್ನಾಗಿ ಇದೆ ಅಲ್ಲೀ ಹೋಗಬೇಕು ಎಂದು ಹೇಳುತ್ತಾರೆ. People should compare our State with other states in neighbouring areas.

ಇವತ್ತು ಏಕೆ ಇಲ್ಲಿ ಬರಬೇಕು. ನೀವು ಸರಿಯಾದಂತಹ ಅಭಿವೃದ್ಧಿಯನ್ನು ಆ ಭಾಗದಲ್ಲಿ ಕೇಂದ್ರಿಕರಿಸದೆ ಇದ್ದರೆ. ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ನಲ್ಲಿ ನಿಜವಾಗಿ ನಾವು 20 ಕೋಟಿ ರೂಪಾಯಿ ನಾವು ಕೊಟ್ಟಿದ್ದೇವೆ. ಅದರಲ್ಲಿ ಖರ್ಚಾಗಿದ್ದು 19.94 ಕೋಟಿ ರೂಪಾಯಿ. 1994-95ನೇ ಸಾಲಿನಲ್ಲಿ 15 ಕೋಟಿ ರೂಪಾಯಿ ನಾವು ಕೊಟ್ಟರೆ ನೀವು ಅದನ್ನು ರಿವೈಸ್ಡ್ ಮಾಡಿ 10 ಕೋಟಿ ರೂಪಾಯಿ ಮಾಡಬೇಕೆಂದು ನಮ್ಮ ಉದ್ದೇಶ ಇದ್ದರೆ ಇದನ್ನು ಪ್ರತಿ ವರ್ಷ ರಿವೈಸ್ಡ್ ಮಾಡಿ ಮಾಡಿನನಗೆ ಅನಿಸುತ್ತದೆ, ಇನ್ನು ಒಂದೆರಡು ವರ್ಷಗಳಾಗುವಾಗ ನೀವು ಅಧಿಕಾರಿದಲ್ಲೆ ಉಳಿದರೆ ಈ ಕಾರ್ಯಕ್ರಮಗಳನ್ನು ನಿರ್ನಾಮ ಮಾಡುತ್ತೀರಿ. ಅದನ್ನೇ ಹೇಳಿದ್ದಾರೆ, ನಮ್ಮ ಪ್ಲಾನಿಂಗ್ ಬೋರ್ಡ್‌ನ ಡೆಪ್ಯೂಟಿ ಚೇರ್‌ಮನ್, ಎಲ್ಲಾ ರಾಜಕೀಯ ಬಾಡಿಗಳಾಗಿವೆ, ಅದುದರಿಂದ ಇದನ್ನೆಲ್ಲಾ ತೆಗೆದು ಹಾಕಬೇಕು ಎಂದು ಈಗಾಗಲೇ ಅಪಸ್ವರ ಬಂದಿದೆ. ಬಹುಶಃ ಎಕ್ಸ್‌ಪೆಂಡಿಚರ್ ಎಲ್ಲಾ ತಾವು ನೋಡಿದಾಗ, ನೀವು ಕೊಡತಕ್ಕಂಥ ಬಜೆಟ್ ಅಲಾಟ್‌ಮೆಂಟ್ ನೋಡಿದಾಗ ಖಂಡಿತ ಕೂಡ ನೀವು ಆ ದಾರಿಯಲ್ಲಿ ಹೋಗುತ್ತಿದ್ದೀರಿ. ಆ ಕಾರ್ಯಕ್ರಮ ನಿರ್ನಾಮ ಮಾಡಿದರೂ ಕೂಡ ಅದಕ್ಕೆ ಶಹಭಾಸ್ ಕೊಡತಕ್ಕಂಥ ಅಭಿಮಾನ ಹೀನವಾದಂತಹ ಜನ ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗ ಇರುವುದರಿಂದ ನೀವು ಇದನ್ನು ಮಾಡಿದ್ದನ್ನು ಜನ ಸರಿಪಡಿಸಿಕೊಂಡು ಹೋಗುತ್ತಾರೆ. ಅದುದರಿಂದ ಅದರಲ್ಲಿ ಹೆದರಬೇಕಾದಂತಹ ಅವಶ್ಯಕತೆ ಖಂಡಿತವಾಗಿ ಇಲ್ಲ.

ಉಪಾಧ್ಯಕ್ಷರು : ನಿಮಗೆ ಇನ್ನು ಎಷ್ಟು ಸಮಯ ಬೇಕು?

ಶ್ರೀ ಎಂ. ವೀರಪ್ಪಮೊಯಿಲಿ : ಇನ್ನು ಇರಿಗೇಷನ್ ಬಗ್ಗೆ ಮಾತನಾಡುತ್ತೇನೆ. ಈ ಇರಿಗೇಷನ್ ಬಗ್ಗೆ ಕೂಡ ಇವತ್ತು ಆಕ್ಸಿಲರೇಟ್‌ಡ್ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಕೇಂದ್ರವು 222 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದು ನಮ್ಮ ಬಜೆಟ್‌ನಲ್ಲಿ ಎಲ್ಲೂ ಕಾಣಲಿಲ್ಲ. ಅದನ್ನು ಯಾವರೀತಿಯಾಗಿ ಖರ್ಚು ಮಾಡುತ್ತೇವೆ, ಆ ಕಾರ್ಯಕ್ರಮ ಏನು ಮಾಡಿದ್ದೇವೆ,

ಆದರೆ ಬಗ್ಗೆ ಸ್ಪಷ್ಟವಾದ ಸ್ವರೂಪ ಕೂಡ ಇಲ್ಲ. ನಮಗೆ ಗೊತ್ತಿದೆ, ಕೇಂದ್ರ ಸರ್ಕಾರದವವು ಏನು ಮಾಡುತ್ತಾರೆ ಅರವರು ಏನು ಮಾಡುತ್ತಾರೆಂದರೆ ಈಗ ಇರಿಗೇಷನ್ ಪ್ರಾಜೆಕ್ಟ್ ಕಾವೇರಿ ಬೇಸಿಸ್ ಬಿಟ್ಟು ಉಳಿದವುಗಳಿಗೆ ಪ್ಲಾನ್ ಅಸಿಸ್ಟೆನ್ಸ್ ಇದೆ. ಆ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಸ್ವಲ್ಪಸ್ವಲ್ಪ ಹಣ ತೆಗೆಯುತ್ತಾರೆ. ಅದನ್ನು ಆಕ್ಸಿಲರೇಟೇಜ್ ಇರಿಗೇಷನ್‌ಗೆ ಹಾಕುತ್ತಾರೆ. ಅಷ್ಟೆ. I have got a copy of the central Budet. I have gone through it. I had a panormic view of that Budget. ಕೇಂದ್ರದ ಬಜೆಟ್ ಕಾಪಿ ನನ್ನ ಹತ್ತಿರ ಇದೆ. I had a panormic view of that. ಆಗ ಸ್ಪಷ್ಟರಾಗಿ ಕಾಣುತ್ತಿದೆ. ಗಾಡ್ಗೀಳ್ ಫಾರ್ಮುಲಾಪ್ರಕಾರ ಪ್ಲಾನ್ ಅಸಿಸ್ಟನ್ಸ್ ಅಸಿಸ್ಟನ್ಸ್ ಪ್ರಕಾರ ಏನು ಹಣ ಕೊಡಬೇಕು ಅದರಲ್ಲಿ ಸ್ವಲ್ಪಸ್ವಲ್ಪ ಈ ಕಿಟ್ಟಿನಿಂದ ತೆಗೆದು ಆಕ್ಸಿಲರೇಟ್‌ಡ್ ಇರಿಗೇಷನ್ ಎಂದು ಮಾಡಿ 222 ಕೋಟಿ ರೂಪಾಯಿ ಕರ್ನಾಟಕಕ್ಕೂ 300 ಕೋಟಿ ರೂಪಾಯಿ ಆಂಧ್ರಕ್ಕೂ ಬಂತು. ಇದು ಬಂದಿದ್ದು ಇಲ್ಲ. ಹೋದದ್ದು ಇಲ್ಲ. ಬಂದರೆ ಒಂದು ಜೇಬಿನಿಂದ ತೆಗೆದು ಇನ್ನೊಂದು ಜೇಬಿಗೆ ಹಾಕತಕ್ಕಂಥ ಒಂದು ಕಾಸ್ಮೆಟಿಕ್ ಸರ್ಜರಿ ಏನಿದೆ ಇದನ್ನು ಕೇಂದ್ರಸರ್ಕಾರ ಮಾಡಿದೆ. ಅದಕ್ಕೆ ನಾವು ಶಹಭಾಸ್‌ಗಿರಿ ಕೋಡೋಣ, ನೀವು ಕಡಿಮೆ ಹಣವನ್ನು ನಿಗದಿ ಮಾಡಿ ಇರಿಗೇಷನ್‌ಗೆ ಖರ್ಚು ಮಾಡುತ್ತೀರಲ್ಲಾ ಆ ಒಂದು ವಿಶ್ವಾಸಕ್ಕೆ ನಾವು ಶಹಭಾಸ್‌ಗಿರಿ ಕೊಡುತ್ತೇವೆ. ಇಲ್ಲದಿದ್ದರೆ ಅದೂ ಕೂಡ ಅರ್ಥವಿಲ್ಲ. ಪುಟ್ಟಣ್ಣಯ್ಯನರೇ ಆಗುವುದು ಇಷ್ಟೇ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ಯಾರ ತಲೆ ಇರಬಹುದು?

ಶ್ರೀ ಎಂ. ವೀರಪ್ಪಮೊಯಿಲಿ : ಯಾರಾದಾದರೂ ತಲೆ ಇರಬಹುದು. ತಲೆಗಳ ಬಗ್ಗೆ ನಾನು ಲೆಕ್ಕಹಾಕುವುದಕ್ಕೆ ಹೋಗುವುದಿಲ್ಲ. ಆದರೆ ಪರಿಸ್ಥಿತಿಯಲ್ಲಿ ಇವತ್ತು ಈ ರೀತಿಯಾಗಿದೆ. ಇನ್ನು ಬೀದರ್‌ನ ಕಾರಂಜಾ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾರಂಜಾ ಪ್ರಾಜೆಕ್ಟ್‌ಗೆ 1995-96ನೇ ಸಾಲಿನಲ್ಲಿ 19.12 ಕೋಟಿ ರೂಪಾಯಿ ಕೊಟ್ಟಿದ್ದು, ಅದು 1996-97ನೇ ಸಾಲಿನ ಬಜೆಟ್‌ನಲ್ಲಿ ಕೊಟ್ಟಿದ್ದು 12 ಕೋಟಿ ರೂಪಾಯಿ. ಮಾನ್ಯ ರೂಪಾಯಿ. ಮಾನ್ಯ ಭೀಮಣ್ಣ ಖಂಡ್ರೆಯವರು ಆತ್ಮಹತ್ತೆ, ಮಾಡಿಕೊಳ್ಳುತ್ತೇನೆ, ಮತ್ತೊಂದು ಮಾಡಿಕೊಳ್ಳುತ್ತೇನೆಂದು ಹೇಳುತ್ತಿದ್ದರು. ನಾವು ಪ್ರತಿ ವರ್ಷ 5-6 ಕೋಟಿ ರೂಪಾಯಿ ಜಾಸ್ತಿ ಮಾಡುತ್ತಾ ಬರುತ್ತಿದ್ದೆ. ಇವತ್ತು ಪಾಪ ಅವರಿಂದ ಆತ್ಮಹತ್ಯೆ ಬೆದರಿಕೆ ಇಲ್ಲ. ಇದನ್ನೆಲ್ಲಾ ನುಂಗಿ ಬಹಳ ಸಮಾಧಾನವಾಗಿ ಇದ್ದಾರೆ. ನಾವು ಇದ್ದಾಗ ಬೆಂಕಿಯಾಗುತ್ತಿದ್ದರು ಯಾವ ಮಂತ್ರಿಗಳು ಬೀದರ್‌ಗೆ ಹೋಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈಗ ಅವರು ಸಪ್ಪೆಯಾಗಿಬಿಟ್ಟಿದ್ದಾರೆ. 1995-96ರಲ್ಲಿ 19.12 ಕೋಟಿ ರೂಪಾಯಿ ಕೊಟ್ಟಿದ್ದು,

1996-97ನೇ ಬಜೆಟ್‌ನಲ್ಲಿ ಕೊಟ್ಟಿದ್ದೇ 12 ಕೋಟಿ ರೂಪಾಯಿ. ಅದನ್ನು ರಿವೈಸ್ ಮಾಡಿ 11.30 ಕೋಟಿ ರೂಪಾಯಿ ಕೊಟ್ಟರು. 1997-98ರಲ್ಲಿ 15 ಕೋಟಿ ರೂಪಾಯಿ ಕೊಟ್ಟಿದ್ದರೆ, ಮೀಡಿಯಂ ರೇಂಜ್ ಪ್ರಾಜೆಕ್ಟ್‌ಗಳ ಹಣೆಬರಹ ಇದೇ ಆಗಿದೆ. ಇದಕ್ಕಿಂತ ಪ್ರತ್ಯೇಕ ಇಲ್ಲ. ನಾನು ಕಾರಂಜಾವನ್ನು ಒಂದು ಉದಾಹರಣೆಯಾಗಿ ತೆಗೆದು ಇವತ್ತು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ಇರಿಗೇಷನ್ ಬಗ್ಗೆ ತಾವು ಮಾಡಿರುವಂತಹ ಖರ್ಚು, ಇದನ್ನೆಲ್ಲಾ ನೋಡಿದಾಗ ಇವತ್ತು ನೀವು ಪೂರ್ತಿ ಮಾಡುವ ಹಾಗೆ ಇಲ್ಲ. ಈಗ ಉದಾಹರಣೆಗೆ for example during 1996-97 you have provided Rs. 1067.35 Crores. ಅದನ್ನು ಈಗ ರಿವೈಸ್ ಮಾಡಿ 696.28 ಕೋಟಿ ರೂಪಾಯಿಗೆ ಇಳಿಸಿದ್ದೀರಿ. ನಂತರ ಅದೇ ಪ್ರಕಾರ ಇವತ್ತು 1995-96ರಲ್ಲಿ 777 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಅದು ಯಾವುದಕ್ಕೂ ಕೂಡ ಖಂಡಿತ ಸಾದ್ಯ ಬರುವುದಿಲ್ಲ. ಯುಕೆಪಿಯಲ್ಲಿ ಕೂಡ ತಾವು ಮಾಡತಕ್ಕಂಥ ಖರ್ಚು ಎಲ್ಲಿದೆ? ತಾವು ದಯಮಾಡಿ ನೋಡಬೇಕಾಗುತ್ತದೆ. ಪುನರ್ ವಸತಿ ಯೋಜನೆ ಬಗ್ಗೆ ಹೇಲುವುದಾದರೆ ಇವತ್ತು ಜನ ಅಲ್ಲಿ ವಿಪರೀತವಾಗಿ ಗಲಾಟೆ ಮಾಡುತ್ತಿದ್ದಾರೆ. ಆದರೆ ಅದಕ್ಕೆ ಹಣ ಕೊಡುವುದು ಹೇಗೆಂದರೆ 1995-96ರಲ್ಲಿ 66.17 ಕೋಟಿ ರೂಪಾಯಿ, 1996-97ರಲ್ಲಿ ಕೊಟ್ಟಿದ್ದೇ 45.38 ಕೋಟಿ ರೂಪಾಯಿ ಅದನ್ನು ರಿವೈಸ್ ಮಾಡಿ 40 ಕೋಟಿ ರೂಪಾಯಿ ಮಾಡಿದ್ದಾರೆ. ಹಣಕಾಸಿನ ಕೊರತೆ ಇಲ್ಲ ಎಂದು. ಹೇಳುತ್ತೀರಿ, ಹಣ ಇಲ್ಲದೆ ಇದ್ದರೆ ಅಲ್ಲಿ ಕಾರ್ಯಕ್ರಮ ಹೇಗೆ ಮಾಡಬೇಕು. ಏಕೆಂದರೆ ಅಲ್ಲಿ ಕಾಂಪನ್ಸೇಷನ್ ಕೊಡಬೇಕಾಗುತ್ತದೆ. ಪುನರ್ ವಸತಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದು ದಾರಾಳನೂ ಇಲ್ಲ. ಯಾವರೀತಿಯಲ್ಲಿ ಕೂಡ ಹಣದ ಪ್ರಾವಿಷನ್ ಖಂಡಿತವಾಗಿ ಇಲ್ಲಿ ಕಾಣುತ್ತಿಲ್ಲ. ಇನ್ನು ಯುಕೆಪಿಯಲ್ಲಿ ಕಾಲುವೆಗೆ 1995-96ರಲ್ಲಿ ಎಷ್ಟು ಖರ್ಚು ಮಾಡಿದ್ದೆ ಎಂದರೆ 67.07 ಕೋಟಿ ರೂಪಾಯಿ. ಅಲಮಟ್ಟಿಗೆ 45.10 ಕೋಟಿ ರೂಪಾಯಿ. ಇದು ಬಹಳ ಮುಖ್ಯ, ಇವರು ಇಲ್ಲಿ ಹೇಳುತ್ತಾರೆ ನಾವು ಆಲಮಟ್ಟಿ ಡ್ಯಾಂ ನಿಲ್ಲಿಸಲಿಲ್ಲ, ಅಲ್ಲಿ ಕೆಲಸವಾಗುತ್ತದೆ ಎಂದು. This is an indication that Almatti dam work has become stagnated financially. 1996-97ಕ್ಕೆ ಬಜೆಟ್‌ನಲ್ಲಿ ಕೊಟ್ಟಿದ್ದು ಅಲಮಟ್ಟಿ ಡ್ಯಾಂಗೆ 18.74 ಕೋಟಿ ರೂಪಾಯಿಗಳು. ರಿವೈಸ್ಡ್ ಬಜೆಟ್ 17.84 ಕೋಟಿ ರೂಪಾಯಿಗಳು. ಅಲ್ಲಿ ಆಲಮಟ್ಟಿ ಕೆಲಸವಾಗುತ್ತಿದೆಯೇ with this kind of meagre amount? ಅವರು ಎಲ್ಲಾ ಹೇಳುತ್ತಾರೆ. ಕೃಷ್ಣಾ ಜಲ ಭಾಗ್ಯ ನಿಯಮದಿಂದ ನಾವು ಹಣ ಕೊಡುತ್ತೇವೆ, ಅದರ ಪ್ರಥಮ ಅಧ್ಯಕ್ಷ ನಾನೇ. ಅದನ್ನು ನಾನೇ ರಚನೆ ಮಾಡಿದ್ದು. ಮಾಡುವಾಗ ನಾನು ಸ್ಪಷ್ಟವಾಗಿ ಹೇಳಿದ್ದೆ, ಕೃಷ್ಣಾ ಜಲ ಭಾಗ್ಯ

ನಿಗಮದಲ್ಲಿ ಎತ್ತತಕ್ಕಂಥ ಹಣ It is an additionality to the Budget and not a substitute to the Budget. ಮೂಲ ಉದ್ದೇಶವನ್ನು ಮರೆತಿದ್ದೀರಿ. During 1997-98 exupt for U.K.P. rehabilitation (Rs. 87 Crores) there is no budgetary support from the Government as far as far as U.K.P. is concerned. Where is your will power?

ಇದು ನನಗನಿಸುತ್ತದೆ, ಈಗ ಜಲಭಾಗ್ಯ ನಿಗಮ ಮಾಡಿ, ನೀವು ಪೂರ್ತಿ ಈ ಕಾರ್ಯಕ್ರಮಗಳ ಹಳಿ ತಪ್ಪಿಸತಕ್ಕಂಥ ಕೆಲಸ ತಾವು ಖಂಡಿತವಾಗಿಯೂ ಕೂಡ ಮಾಡಿದ್ದೀರಿ ಎಂದು ಹೇಳದೆ ವಿಧಿ ಇಲ್ಲ. ಈಗ ಕಾವೇರಿ ವಿಚಾರದಲ್ಲಿ ಹೇಳಿದ್ದಾರೆ, ನಮ್ಮ ಹಿಂದಿನ ಮುಖ್ಯಮಂತ್ರಿಯವರು, ಈಗಿನ ಪ್ರಧಾನಮಂತ್ರಿಯವರು ನೀರಾವರಿ ಬಾಬಿಗೆ ಹಣ ಕೊಡಲಿಲ್ಲ ಎಂದು ರಾಜೀನಾಮೆ ಕೊಟ್ಟರು. ಈಗ ಎಷ್ಟು ಸಾರಿ ರಾಜೀನಾಮೆಯನ್ನು ನೀವು ಮಾಡವಂಥ ಕೆಲಸಗಳಿಗೆ ಕೊಡಬೇಕು? ಕಡಿಮೆ ಪಕ್ಷ ನೀವು ಒಂದು 600 ಕೊಟಿ ರೂಪಾಯಿಯನ್ನಾದರೂ ಕೂಡ ಖರ್ಚು ಮಾಡಬೇಕಾಗಿತ್ತು. ಆದರೆ 1995-96ರಲ್ಲಿ ನೀವು ಖರ್ಚುಮಾಡಿದಂಥ ಹಣ 228.56 ಕೋಟಿ. 1994-95ರಲ್ಲಿ ಒದಗಿಸಿರುವಂಥದ್ದು 245 ಕೋಟಿ ರೂಪಾಯಿಗಳಿಗಿಂತ ಕಡಿಮೆಯಾಗಿದೆ. 1996-97ರಲ್ಲಿ ನೀವು ಆಯವ್ಯಯದಲ್ಲಿ ಒದಗಿಸಿರುವಂತದ್ದು 286 ಕೋಟಿ ರೂಪಾಯಿ. ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 234.59 ಕೋಟಿ. 1997-98ರಲ್ಲಿ 270.77 ಕೋಟಿ ಮಾತ್ರ ಇರೊತ್ತು ಕೊಟ್ಟಿದ್ದೀರಾ? ನಾವು ಆ ಭಾಗದಿಂದ ಬಂದವರು. ತಮಗೆ ಇದರ ಸೂಕ್ಷ್ಮತೆ ಗೊತ್ತಿದೆ. ಇವೊತ್ತು ಅವಾರ್ಡ್ ಬರುತ್ತದೆ, our Cauvery basin project will becam hampi rnins. They only the momuments for the excursion of the Students. that is all. You cannot utilise the water. ಎಷ್ಟು ವೇಗವಾಗಿ ನಡೆಯಬೇಕು, ಏನು ಕಮಿಟ್‌ಮೆಂಟ್ ಇದೆ, ಇದರ ಬಗ್ಗೆ ಯಾವುದೇ ಲಕ್ಷ್ಯ ಇಲ್ಲ ಎಂದು ಹೇಳಿದರೆ ಎಷ್ಟು ದುರಂತ ಎನಿಸುತ್ತದೆ. ಏಕೆಂದರೆ ಇವೊತ್ತು ನಾನು ಎಲ್ಲಾ ನೋಡಿದೆ. ಯಾವುದನ್ನು ನೋಡಿದರೂ ಕೂಡ ಅದರಲ್ಲಿ ಕಡಿಮೆ ಹಣವನ್ನು ಕೊಟ್ಟಿದ್ದೀರಿ. ನಾನು ತುಮಕೂರಿನಹೇಮಾವತಿ ಕೆನಾಲ್‌ಗೆ ಇನ್‌ಸ್ಪೆಕ್ಟ್ ಮಾಡಿದ್ದೆ. ನಾನು ಇನ್‌ಸ್ಪೆಕ್ಟ್ ಮಾಡಿದಾಗ ಅಲ್ಲಿಯ ಇಂಜಿನಿಯರ್ಸ್‌ಗೆ ಹೇಳಿದೆ, "I will provide you Rs. 19 crores every month, take the water to tumkur for water supply." ಅಂತ ಆದರೆ ಆ ವೇಗದಲ್ಲಿ ಕೆಲಸ ನಡೆಯಲಿಲ್ಲ. ಇವೊತ್ತು ನೀವು ಕೊಡತಕ್ಕಂಥ ಹಣದ ವೈಖರಿಯನ್ನು ವರ್ಷಕ್ಕೆ 1995-96ಕ್ಕೆ 99.09 ಕೋಟಿ, 1996-97ಕ್ಕೆ 110 ಕೋಟಿ ಕೊಟ್ಟಿದ್ದೀರಿ, ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 96.54 ಕೋಟಿ

ಕೊಟ್ಟಿದ್ದೀರಿ. ಈ ವರ್ಷ 90 ಕೋಟಿ ಕೊಟ್ಟಿದ್ದೀರಿ. ಆದ್ದರಿಂದ ಇದು ಒಂದು ರೀತಿಯಲ್ಲಿ you will be helping tamil nadu. That's all. I think this Government lacks the patriotism. ನಮ್ಮ ರಾಜ್ಯದ ನೆಲ, ಜಲದ ಬಗ್ಗೆ ಇವೊತ್ತು ಯಾವುದೇರೀತಿಯಾದ ಮಮಕಾರ ಇಲ್ಲದೆ ನಡೆದುಕೊಳ್ಳತಕ್ಕಂಥ Clear picture today it has emerged. ಅದಕ್ಕಾಗಿಯೇ ಅವರು ಹೇಳಿರಬೇಕು, ಮಾನ್ಯ ಪ್ರದಾನಮಂತ್ರಿಯವರು ಕೇಂದ್ರ ಪುರಸತ ಯೋಜನೆ ಬಗ್ಗೆ ಹೇಳಿದರು, ನಾನು ರಿವ್ಯೂ ಮಾಡಬೇಕು ಎಂದರು. ಏನೂ ಇಂಪ್ಲಿಮೆಂಟ್ ಆಗಿಲ್ಲ ಎಂದು ನಾನು ಹೇಳಿದ್ದೇನೆ. ಅದಕ್ಕಾಗಿ ನನಗನಿಸುತ್ತದೆ. ಅವರಿಗೆ ಹೆಚ್ಚು ಸಿಟ್ಟು ಇದರ ಮೇಲೆ ಇರಬೇಕು, ಬಹಳ ಆ ಸಿಟ್ಟಿನಿಂದ ಬಂದಿದ್ದಾರೆ. ಯಾರ್‍ಯಾರ ತಲೆ ಹೋಗುತ್ತದೆ, ಮಾನ್ಯ ಪ್ರಧಾನಿಯವರು ರಿವ್ಯೂ ಮಾಡಿದ್ದಾರೆ ಕಾವೇರಿ ವಿಚಾರದಲ್ಲಿ. ಯಾರ್‍ಯಾರ ತಲೆ ಉರುಳುತ್ತದೆ ಪಾಪ ನಮ್ಮ ಬೈರೇಗೌಡರನ್ನು ಬಹಳ ಟೀಕೆ ಮಾಡಿದರು, ಅವರು ಕೃಷಿ ಸಚಿವರಾಗಿ ಒಳ್ಳೆಯ ಆಸಕ್ತಿಯನ್ನು ತೆಗೆದುಕೊಂಡಿದ್ದರೂ ಸಹ ಅವರ ಎದುರಿಗೇ ಪ್ರದಾನಿಯವರು ಸಿಕ್ಕಪಟ್ಟೆ ಅಂದು ಬಿಟ್ಟರು. ನನಗನ್ನಿಸುತ್ತದೆ ಈ ಸಿಟ್ಟು ಕಾವೇರಿಯ ಮೇಲೆ ಇರಬೇಕು ಎಂದು. ಏಕೆಂದರೆ ಕಾವೇರಿ ಮೇಲೆ ಪಣ ತೊಟ್ಟು. ಏನೋ ಒಂದು ಸ್ಲೋಗನ್ ಇದೆಯಲ್ಲಾ ಕಾವೇರಿ ಮೇಲೆ ಆಣೆ, ದೇವೇಗೌಡರ ಪಣ, ಇವೊತ್ತು ಅವರ ಪಣವೂ ಹೋಗಿದೆ, ಕಾವೇರಿಯ ಆಣೆನೂ ಹೋಗಿದೆ. ಹಾಗದರೆ ಇವೊತ್ತು ಕೊಟ್ಟಂಥ ಆಣೆಯನ್ನು ಮುರಿದಂಥ ಕೆಲಸ ದೇವೇಗೌಡರ ಉತ್ತರಾಧಿಕಾರಿಗಳಾದಂಥ ತಾವು ಮಾಡಿದ್ದೀರಿ. ಅವರ ಉತ್ತರಾಧಿಕಾರಿಗಳಾಗಿ ತಾವು ಇವೊತ್ತು ಹೇಗೆ ಉಳಿಯಲಿಕ್ಕೆ ಸಾಧ್ಯ ಇದೆ ಎಂಬುದನ್ನು ತಾವೇ ಆತ್ಮಶೋಧನೆ ಮಾಡಬೇಕಾದಂಥ ವಿಚಾರ ಇದೆ. ಹೌದೌದು ಎಲ್ಲಾ ಮುಗಿಸಿಬಿಟ್ಟಿದ್ದೀರಿ, ಹೇಳಿದ್ದೀರಿ. ಯಾರು ಮುಗಿಸಿದ್ದು ಎಂತಲೇ ಹೇಳಿದ್ದು ಈಗ. ಐವತ್ತು ವರ್ಷದಲ್ಲಿ ನಾರು ಮುಗಿಸಿದೆವು, ನೀವು ಸಮಾಧಿ ಮಾಡಿದಿರಿ ಅಷ್ಟೆ. ಅದನ್ನೇ ಹೇಳಿ ಹೇಳಿ ವಿಷಯವನ್ನು ಗ್ರಹಿಸದೆ ಈ ಪರಿಸ್ಥಿತಿ ಬಂದಿದೆ. ಈ ತರಹದ ಧಾಟಿಯಿಂದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುತ್ತೇವೆ ಎಂದು ಹೇಳಿದ ಮಾನ್ಯ ಸಿದ್ಧರಾಮಯ್ಯನವರೇ, it is impossible. That means you have no realisation for what is happening around to you, i think you will be doomed. You must have realisation. ಸುಮ್ಮನೆ ನಿಮ್ಮ ಕಾಲದಲ್ಲಿ 50 ವರ್ಷ.

SRI SIDDARAMAIAH : is it not a fact,?

SRI M. VEERAPPA MOILY : It is a fact.

ಶ್ರೀ ಸಿದ್ಧರಾಮಯ್ಯ : ತಾವು 1965ನೇ ಇಸವಿಯಲ್ಲಿ ಪ್ರಾರಂಭ ಮಾಡಿ 1994-95ರವರೇಖರ್ಚು ಮಾಡಿರುವುದು 1300 ಕೋಟಿ ರೂಪಾಯಿ. ನಾವು ಎರಡು ವರ್ಷದಲ್ಲಿ 1200 ಕೋಟಿ ಖರ್ಚು ಮಾಡಿದ್ದೇವೆ. ನಮಗೇನೂ ರಾಜ್ಯದ ಬಗ್ಗೆ ಆಸಕ್ತಿ ಇಲ್ಲ, ಬೆಳವಣಿಗೆ ಬಗ್ಗೆ ಆಸಕ್ತಿ ಇಲ್ಲ ಇಷ್ಟು ವರ್ಷ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಇದು ನಿಜವಾಗಿರತಕ್ಕಂಥದ್ದು, ಅಂಕಿಸಂಖ್ಯೆ ಸಮೇತ ಹೇಳಿದ್ದೇವೆ

ಶ್ರೀ ಸಿದ್ಧರಾಮಯ್ಯ : ಎರಡು ವರ್ಷದಲ್ಲಿ ಅಪ್ಪರ್ ಕೃಷ್ಣಾಗೆ1200 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ನೀವು 1965ರಿಂದ 1994-95ರವರೆಗೆ 1300 ಕೋಟಿ ಖರ್ಚು ಮಾಡಿದಿರಿ.

ಶ್ರೀ ಎಂ. ವೀರಪ್ಪಮೊಯಿಲಿ : 89ರೊಳಗೆ ಸರಾಸರಿ ನೀವು ಖರ್ಚು ಮಾಡಿದ್ದು ಯು.ಕೆ.ಪಿ. ಯೊಳಗೆ 20 ಕೋಟಿ ರೂಪಾಯಿಗಳು ನಾನು 246 ಕೋಟಿ ರೂಪಾಯಿ ಖರ್ಚುಮಾಡಿದ್ದೇವೆ, ಸ್ವಲ್ಪ ದಯಮಾಡಿ ನೋಡಿ. ಕಣ್ಣಿದ್ದವರು ನೋಡಬಹುದು, ಕಣ್ಣಿದ್ದು ಇಲ್ಲದಂಥವರಿಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಕಣ್ಣಿದ್ದು ಕುರಡರಂತೆ ವರ್ತಿಸಿದರೆ ನಮಗೆ ಏನು ಮಾಡಲಿಕ್ಕೆ ಆಗುತ್ತದೆ.

ಶ್ರೀ ಎಸ್. ಕೃಷ್ಣಪ್ಪ : ಇವೊತ್ತು ಈ ಭಾಗದ ಜನರಿಗೆ ಹೇಳುತ್ತೀರಿ, ಎಲ್ಲಾ ನೀವೇ ಇದ್ದೀರಲ್ಲಾ ಎಲ್ಲಿ ಉಪಯೋಗಿಸಿದಿರಿ, ಅಷ್ಟೆರಲ್ಲೇ ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಈ ತರಹ ಫ್ಯೂಡಲ್ ಆಟಿಟ್ಯೂಡಿನಿಂದ ಯಾರ ಸರ್ಕಾರ ಕೂಡ ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವೊತ್ತು ನಮ್ಮ ಅಂಕಿಸಂಖ್ಯೆ ಏನಿದೆ ಅದನ್ನು ಬಿಟ್ಟುಬಿಟ್ಟಿದ್ದೇನೆ, ಅರರ ಅಂಕಿಸಂಖ್ಯೆಯನ್ನೇ ಇವೊತ್ತು ಹೇಳುತ್ತಿದ್ದೇನೆ. ಇವೊತ್ತು ಕೈಗಾರಿಕೆಯ ವಿಚಾರದಲ್ಲಿ ನಾನು ಮುಂದೆ ಬಂದು ಹೇಳುವುದಿದ್ದರೆ ಇವೊತ್ತು ವಿದೇಶಿ ಬಂಡವಾಳದಲ್ಲಿ ಇಷ್ಟೆಲ್ಲಾ ಕ್ಯಾನ್‌ವಾಸ್ ಮಾಡಿದ್ದೇವೆ, ನಿಮ್ಮ ಸ್ಥಾನ ಯಾವುದು?

ನಿನ್ನೆ ಯಾರೋ ಹೇಳಿದರು, ಕರ್ನಾಟಕದ ಪ್ಲೇಸ್ 2.2 ಪರ್ಸೆಂಟ್, ಮಹಾರಾಷ್ಟ್ರ 16.5 ಪರ್ಸೆಂಟ್, ಪಶ್ಚಿಮ ಬಂಗಾಲ 10.6 ಪರ್ಸೆಂಟ್, ಗುಜರಾತ 6.9 ಪರ್ಸೆಂಟ್. ಪಶ್ಚಿಮ ಬಂಗಾಳದ್ದು ಮೊನ್ನೆಮೊನ್ನೆ ಎರಡು ವರ್ಷಗಳ ಹಿಂದೆ ಪ್ರಾರಂಭವಾಯಿತು.

ನಮ್ಮದು ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ವಿಚಾರದಲ್ಲಿ ತಮಗೆ ಗೊತ್ತಿದೆ, ಕೆಲವು ಮೂಲಭೂತವಾದ ವಿಚಾರವನ್ನು ಮಾತ್ರ ನಾನು ಇಲ್ಲಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇವೊತ್ತು ಕೆಲವು ಹೇಳಿಕೆಗಳು ಬಂದವು. ಮುಖ್ಯವಾಗಿ "Reting of Bangalore-software success.- Low pirating of Bangalore Software success. It has come in Economy Times.

ಇದನ್ನು ಏಕೆ ಹೇಳುತ್ತಿದ್ದೇನೆ ಎಂದು ಹೇಳಿದರೆ ಇದು ಬಹಳ ಪ್ರಾಮುಖವಾದ ವಿಚಾರ ಇದೆ. ಇಲ್ಲಿ ಕರ್ನಾಟಕ once upon a time it was known as silicon valley of India. When we took over I also visited silicon valley. ಅಲ್ಲಿ ಒಂದು ಅಭಿಪ್ರಾಯ ಏನು ಬಂತೆಂದರೆ This can be an alternate silicon valley of the globe. ಇವತ್ತು ಆ ದಾರಿಯಲ್ಲಿ ಬರುವುದಕ್ಕಾಗಿ ನಾನು ಮುಖ್ಯವಾಗಿ ಎರಡು ಪ್ರಾಮುಖ್ಯವಾದಂತಹ ಕಾರ್ಯಕ್ರಮಗಳನ್ನು ತಿಳಿಸುತ್ತೇನೆ. ಬೆಂಗಳೂರು ಟೆಕ್ನಾಲಜಿ ಪಾರ್ಕ್ ಅದು ನಿಜವಾಗಿ ಇನ್‌ಫರ್‌ಮೇಷನ್ ಟೆಕ್ನಾಲಿಜಿ ಪಾರ್ಕ್, ಸಿಂಗಪೂರದ ಫಾರಿನ್ ಮಿನಿಸ್ಟರ್ ಕೂಡ ನಮ್ಮ ರಾಜ್ಯಕ್ಕೆ ಬಂದಿದ್ದರು, ಅವರು ಬಂದಿದ್ದು as a transit journey to Bangalore, his destination was Tamil Nadu.

ತಮಿಳುನಾಡಿನಲ್ಲಿ ಈ ಪ್ರಾಜೆಕ್ಟ್ ಹಾಕಬೇಕೆಂದು ಬಂದರು. We immediately Organised things in such a way that within five months, we could project this as an important centre. ಸಿಂಗಪುರದ ಪ್ರಧಾನ ಮಂತ್ರಿಯವರು ಇಲ್ಲಿಗೆ ಬಂದರು, he laid the foundation stone. ಸುಮಾರು 250 ಕೋಟಿ ರೂಪಾಯಿಗಳನ್ನು ಇನ್‌ಪ್ರಾಸ್ಟ್ರಕ್ಚರ್ ಎಕ್ಸ್‌ಪೆಂಡಿಚರ್ ಎಂದು ವರ್ಷಕ್ಕೆ ಸುಮಾರು 2500 ಕೋಟಿ ರೂಪಾಯಿಗಳ ಚರ್ನ್ ಒವರ್‌ನಲ್ಲಿ ಸುಮಾರು 10 ಸಾವಿರ ಕಂಪ್ಯೂಟರ್ ಇಂಜಿನೀಯರ್‌ಗಳನ್ನು ಇಡೀ ಜಗತ್ತಿಗೆ ಕೊಡುವಂತಹ ಒಂದು ವಿಶೇಷವಾದಂತಹ ಪ್ರಕ್ರಿಯೆ ಪ್ರಾರಂಭವಾಯಿತು. ಇದರಿಂದಾಗಿ ಆ ಒಂದು ಪ್ರಾಜೆಕ್ಟ್‌ನಿಂದಾಗಿ ಇವತ್ತು Bangalore is known as alternate silicon valley of the globe. ಇದು ಆಗಬೇಕಾದರೆ ಇಲ್ಲಿ ಇಂಟರ್ ನ್ಯಾಷನಲ್ ಏರ್ ಪೋರ್ಟ್ ಬೇಕಾಗಿದೆ. ಈ ಇಂಟರ್ ನ್ಯಾಷನಲ್ ಏರ್ ಪೋರ್ಟ್ ಇನ್ನು ಎಲ್ಲಿ ಮಾಡಬೇಕೆಂದು ಹೇಳಿ ಗೌರ್ನಮೆಂಟ್ ಆಪ್ ಇಂಡಿಯಾದವರು ಒಂದು ಕಮಿಟಿಯನ್ನು ಮಾಡಿದರು.

ಉಪಾಧ್ಯಕ್ಷರು : ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ? ಇನ್ನು ಬಿ.ಜೆ.ಪಿ ಯವರು ಒಬ್ಬರು ಮಾತನಾಡಬೇಕು, ನಂತರ ಸರ್ಕಾರದಿಂದ ಉತ್ತರವಾಗಬೇಕು. ಮಾನ್ಯ ರಾಜ್ಯಪಾಲರು 9-30 ಗಂಟೆಗೆ ಹೆಲ್ತಿ ಕ್ಲಬ್‌ನ ಕಾರ್ಯಕ್ರಮಕ್ಕೆ ಕರೆದಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಮುಗಿಸುತ್ತೇನೆ. ಎಚ್.ಎ.ಎಲ್. ಪೋರ್ಟ್ ಅನ್ನು ದೇವನ ಹಳ್ಳಿಗೆ ಬದಲಾಯಿಸಬೇಕೆಂದು ಹೇಳಿ Ray than and tata

ಈ ಇಬ್ಬರ ಸಹಯೋಗದಲ್ಲಿ global tender was called. ದೇವನಹಳ್ಳಿಯಲ್ಲಿ ಮಾಡಬೇಕೆಂದು ಡುಸೈಡ್ ಮಾಡಿ ಎರಡು ವರ್ಷಗಳಾಯಿತು. We had finalised everything. ಬಹುಶಃ ನಮ್ಮ ಸರ್ಕಾರ ಇನ್ನು ಎರಡು ತಿಂಗಳುಗಳಿದಿದ್ದರೆ ಕೆಲಸವಾಗುತ್ತಿತ್ತು. Next year, t here would have been an International airport which would have been the biggest in Asia. It was the gift of the century. ಈಗ in the Economy times, there is a threat by the Reycon - Reyton threatens to drop Air;port Venture' ಇದರಲ್ಲಿ ರಾಜಕೀಯ ಪ್ರಾರಂಭವಾಯಿತು, ರಾಜಕೀಯ ಮಾಡಿ ಕೊನೆಗೆ ಮಾನ್ಯ ಪ್ರದಾನಮಂತ್ರಿಯವರು ಒಪ್ಪಿಗೆಯನ್ನು ಕೊಟ್ಟರು. ಇಲ್ಲಿ ಅವರು ಮುಖ್ಯಮಂತ್ರಿಗಳಾಗಿರುವಾಗಲೂ ಒಪ್ಪಿಗೆಯನ್ನು ಕೊಟ್ಟರು. Silicon valley ಆಗಬೇಕಾಗಿತ್ತು. It was a commitment on my behalf and on behalf of the Government of Karnataka to provide the international Airport of the dimansion which is proposed at Devahalli. ಈಗ ತಮಗೂ ಗೊತ್ತಿದೆ, ಎಚ್.ಎ.ಎಲ್. ಏರ್ ಪೋರ್ಟ್ ಅದು ಇಂಟರ್ ನ್ಯಾಷನಲ್ ಫ್ಲೈಟ್ ಬರುವುದಕ್ಕಾಗುವುದಿಲ್ಲ. defence point of view ಹೆಚ್.ಎ.ಎಲ್. ಇದೆ. ನ್ಯಾಷನಲ್ ಏರ್ ಪೋರ್ಟ್ ತಾತ್ಕಲಿಕವಾಗಿ ಮಾಡಬೇಕೆಂದು ಹಣವನ್ನು ಕೇಂದ್ರಸರ್ಕಾರದವರು ಕೊಡದೇ ಇದ್ದಾಗ I gave a commitment of giving crores to HAL and I requested the HAL chairman to commence the work. ಆದರಿಂದ ಇವತ್ತು ಕೆಲವು ಇಂಡಿಯನ್ ಏರ್ ಲೈನ್, ಏರ್‌ಇಂಡಿಯಾ ಫ್ಲೈಟ್ಸ್, ಕಾರ್ಗೋ ಫ್ಲೈಟ್ಸ್ ಕೂಡ ಇವತ್ತು ಅಲ್ಲಿಗೆ ತಾತ್ಕಲಿಕವಾಗಿ ಬರುತ್ತಾ ಇದೆ. ಇವತ್ತು ಇಂತಹ ಒಂದು ಪ್ರಾಜೆಕ್ಟ್‌ಗೆ ನಿಮ್ಮ ಸರ್ಕಾರ ಜವಾಬ್ದಾರಿ ಇದೆ, ಪ್ರಧಾನಮಂತ್ರಿಯವರು ಅಥವಾ ಕೇಂದ್ರದಲ್ಲಿನ Civil Aviation ಮಿನಿಸ್ಟರ್ ಅವರನ್ನು ದೂರುವುದಿಲ್ಲ ಏಕೆಂದರೆ It was the initiative of the State Government, it was the commtment of the Government

ಇದು ಇಡೀ ಕೈಗಾರಿಕಾ ಅಭಿವೃದ್ಧಿಗೆ ಇಂತಹ ಒಂದು ಡಿಸಿಷನ್‌ನಿಂದ ವಿಪರೀತವಾದಂಥ ದೊಡ್ಡ ಅಘಾತವನ್ನು ಉಂಟು ಮಾಡುತ್ತದೆಂದು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವತ್ತು ಬಹಳ ಉದ್ಯಮಿಗಳು ಕೈಗಾರಿಕೆಗಳನ್ನು ಮಾಡುವುದಕ್ಕೆ ಇಲ್ಲಿಗೆ ಬಂದಿದ್ದಾರೆ.

20-30 ವರ್ಷಗಳಿಂದ ಬಾಕಿ ಇದ್ದಂತಹ ವಿಜಯನಗರ ಸ್ಟೀಲ್ ಪ್ಲಾಂಟ್, ಜಿಂದಾಲ್ ಸ್ಟೀಲ್‌ಪ್ಲಾಂಟ್ ಇನ್ನು ಆರು ತಿಂಗಳೊಳಗೆ ಪ್ರೊಡಕ್ಷನ್ ಕಮೆನ್ಸಾಗುತ್ತದೆ. We have done it. ಎಂ.ಆರ್.ಪಿ.ಎಲ್‌ನವರು ಲೆಸನ್ಸ್ ಅನ್ನು ಗುಜರಾತ್‌ಗೆ ವರ್ಗಾವಣೆ ಮಾಡುತ್ತೇವೆಂದು ಹೇಳುವಾಗ We worked out a package ಎಂ.ಆರ್.ಪಿ.ಎಲ್. ಇವತ್ತು ಪ್ರಾರಂಭವಾಗಿದೆ. ಅದೇ ರೀತಿಯಾಗಿ ಬಿ.ಎಸ್.ಎಫ್. ಇನ್ನು ಅನೇಕ ಕಾರ್ಯಕ್ರಮಗಳಿಗೆ ಅಂತಿಮ ಸ್ವರೂಪವನ್ನು ಕೊಟ್ಟರೂ ಕೂಡ ಇವತ್ತು ಕೈಗಾರಿಕೆಗಳು ತಲೆ ಎತ್ತಿಲ್ಲ. ಇದಕ್ಕೆ ಸರಿಯಾದಂತಹ, ಬಿಗುವಾದಂತಹ ಸ್ಪಷ್ಟವಾದಂತಹ ಕೈಗಾರಿಕಾ ನೀತಿ, ರಾಜ್ಯದ ಇಚ್ಛಾಸಕ್ತಿ, ಇವುಗಳ ಕೊರತೆಯಿಂದ ಇವತ್ತು ನಿಜವಾಗಿ ಕಲ್ಕತ್ತಾ, ಗುಜರಾತ್, ಮಹಾರಾಷ್ಟ್ರ ಬಿಟ್ಟರೆ ನಾವು ಮೂರನೆ ಸ್ಥಾನದಲ್ಲಿದ್ದರೆ ಇವತ್ತು ಬೇರೆ ತಮಿಳುನಾಡು ಮತ್ತು ವೆಸ್ಟ್ ಬೆಂಗಲ್ ಇಂತಹ ರಾಜ್ಯಗಳು ನಮ್ಮನ್ನು ಹಿಂದಕ್ಕೆ ಹಾಕಿತಿಯೆಂದರೆ ಇದರ ಬಗ್ಗೆ ವಿವರಗಳು ಇವತ್ತು ಖಂಡಿತವಾಗಿಯೂ ಬೇಕಾಗಿದೆ ಎಂದು ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. Concern for the common man ಜನಸಾಮಾನ್ಯರಲ್ಲಿ ಇವರಿಗೆ ಯಾವ ರೀತಿ ಆಸಕ್ತಿ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. 1994-95ರಲ್ಲಿ for S.C/S.T. and other Backward Classes we had given Rs. 165.62 crores.

ಅದು ಕಡಿಮೆಯಾಗುತ್ತಲೇ ಬಂದಿದೆ, 1995-96ರಲ್ಲಿ 143.40ಕೋಟಿ ರೂಪಾಯಿಗಳಿಗೆ ಬಂತು. 1996-97ರಲ್ಲಿ ರಿವೈಸ್ಡ್ ಇಸ್ಟಿಮೇಟ್‌ನಲ್ಲಿ 221.62 ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ. 1997-98 you have provided only Rs. 153 Crores. ಇವತ್ತು ಎಸ್.ಸಿ, ಎಸ್.ಟಿ ಯವರ ಬಗ್ಗೆ, ಹೌಸಿಂಗ್‌ಬಗ್ಗೆ ಇರುವ ಕಾರ್ಯಕ್ರಮಗಳ ಬಗ್ಗೆ ತಾವು ದಯಮಾಡಿ ನೋಡಬೇಕಾಗುತ್ತದೆ. ಇವತ್ತು ತಾವು ಲಕ್ಷಾಂತರ ಮನೆಗಳ ಬಗ್ಗೆ ಪಟ್ಟಿಯನ್ನು ಹೇಳುತ್ತೀರಿ. ಅದುಯಾವುದೆಂದರೆ ನಾವು ಅರ್ಧ ಮುಕ್ಕಾಲು ಕಟ್ಟಿ ನಿಲ್ಲಿಸಿದಂತಹ ಮನೆಗಳನ್ನು ಇವರು ಕ್ರೆಡಿಟ್‌ನಲ್ಲಿ ತೆಗೆದುಕೊಂಡು ಇವತ್ತು ಲೆಕ್ಕ ಹೇಳುತ್ತಿದ್ದಾರೆ. ಇವರು ಆ ಮನೆಗಳನ್ನು ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಮುಗಿಸ ಬಹುದಾಗಿತ್ತು. ಆದರೆ ಇವತ್ತು ಎರಡೂವರೆ ವರ್ಷಗಳಾದರೂ ಆಗಿಲ್ಲ. ಇವರು 24 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಇವರು ಆಶ್ರಯ ಮನೆಗಳಿಗೆ ಕೊಟ್ಟಿರುವಂಥದ್ದು ನಾರು 1992-93ರಲ್ಲಿ

68.16 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ in 1993-94 highest money was paid. 215.14 ಕೋಟಿ ರೂಪಾಯಿಗಳು ಆದರೆ ಇವತ್ತು 1994-95ರಲ್ಲಿ 143 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, 1995-96ಕ್ಕೆ ಇರುವ ಬಡವರ ಆಶ್ರಯ ಮನೆಗಳಿಗೆ ಖರ್ಚು ಮಾಡಿದಂತಹ ಹಣದ ಬಗ್ಗೆ ನಾಚಿಕೆ ಬರಬೇಕು, 97.48 ಕೋಟಿ ರೂಪಾಯಿಗಳು as against Rs. 215.14 crores which we have spent for housing under Ashraya. ಮಾನ್ಯ ಸದಸ್ಯರಾದ ರಾಜೇಂದ್ರರವರು ಹೇಳಿದರು. ಒಂದು ಮನೆ ಕೂಡ ಬರಲಿಲ್ಲವೆಂದು ಹೇಗೆ ಬರುತ್ತದೆ? ನಾನು ಕೊಟ್ಟಂತಹ ಹಣದ ದಾಮಷಾ ಇದೆ. ಇವತ್ತು ಕನಿಷ್ಟಪಕ್ಷ 300 ಕೊಡಬೇಕಾಗಿದ್ದು ಆದರೆ ಅದು 97 ಕೋಟಿ ರೂಪಾಯಿಗಳಿಗೆ ಇಳಿದಿದೆ. 1996-97ಕ್ಕೆ 142 ಕೋಟಿ ರೂಪಾಯಿಗಳಿಗೆ ಇಳಿದಿದೆ. 1997-98ರಲ್ಲಿ 149 ಕೋಟಿ ರೂಪಾಯಿಗಳಿರುವಾಗ ಇದರಿಂದ ಯಾವ ರೀತಿ ಲಕ್ಷಾಂತರ ಮನೆಗಳನ್ನು ಕೊಡುವುದಕ್ಕೆ ಸಾದ್ಯರಾಗುತ್ತದೆ? ಯಾವಾ ದಮಾಷಾದಲ್ಲಿ ಇವರು ಮನೆಗಳನ್ನು ಕೊಟ್ಟಿದ್ದಾರೆ? ಇದ್ದಹಾಗೆ ಹೇಳಿದರೆ ಮಾನ್ಯ ಸಿದ್ಧರಾಮಯ್ಯನವರಿಗೆ ಬಹಳ ಸಿಟ್ಟು ಬರುತ್ತದೆ. ನಾನು ಮಾತನಾಡುವುದೇ ಬಡವೆಂದು ಏಕೆಂದರೆ ಅವರಿಗೆ ಏಕೆಂದರೆ ಅವರಿಗೆ ಅದನ್ನು ಕೇಳುವುದಕ್ಕೂ ಅಷ್ಟು ತಾಳ್ಮೆ ಇಲ್ಲ. ನಾರು ತಾಳೆ ಇಲ್ಲದವರಿಗೆ ಹೇಳಿ ಏನು ಪ್ರಯೋಜನವಾಗುತ್ತದೆ ಎನ್ನುವ ಅಭಿಪ್ರಾಯದಲ್ಲಿ ನಾನು ಮಾತನಾಡುವುದೇ ಬೇಡವೆಂದು ಕುಳಿತಿದ್ದೆ. ಆದರೆ ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯಲ್ಲಾಗಿದೆ ಎಂಬುದನ್ನು ಹೇಳಬೇಕಾಗುತ್ತದೆನ್ನುವ ದೃಷ್ಟಿಯಿಂದ ಇಲ್ಲಿ ಕರ್ತವ್ಯವೂ ಇರುತ್ತದೆನ್ನುವುದರಿಂದ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. "ಕುರುಡ ಹಿಡಿದದ್ದೇ ಬಡಿಗೆ" ಎಂದು ಹೇಳುತ್ತಾರಲ್ಲಾ ಅದೇ ಗಾದೆಯನ್ನು ಮಾನ್ಯ ಮಂತ್ರಿಗಳು ಹೇಳಿದರೆಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಇವರ ಕೈಗೆಕೀಲಿ ಕೊಟ್ಟರೆ ರಾಜ್ಯದ ಗತಿ ಏನು? ಎಂದು ಯೋಚನೆ ಮಾಡಬೇಕಾಗುತ್ತದೆ. Plan Expenditure on the Housing. ಹೌಸಿಂಗ್‌ಗೆ 1993-94ರಲ್ಲಿ ಶೇ. 7.11ರಷ್ಟು ಬಡವರಿಗೆ ಪ್ರಾಮುಖ್ಯತೆ ಕೊಟ್ಟಿದ್ದೇವೆ, ಯಾರೂ ಕೊಟ್ಟಿಲ್ಲ. ಇವರು 50 ವರ್ಷಗಳಲ್ಲಿ ಏನು ಮಾಡಿದರು ಎಂದು ಹೇಳುತ್ತಾರೆ. 1994-95ರಲ್ಲಿ ಶೇ. 4.8 ರಷ್ಟು ಖರ್ಚು ಮಾಡಿದ್ದು, 1995-96ರಲ್ಲಿ 3.19 ಇದ್ದು ಈಗ ಶೇ. 3.15 ಕೊಟ್ಟಿದ್ದು, ಇಲ್ಲಿ ಯಾವ ಬಡವರನ್ನು ಉದ್ಧಾರ ಮಾಡುವುದಕ್ಕಾಗುತ್ತದೆ? ಯಾವ ಬಡವರಿಗೆ ಸೂರು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅದೇ ರೀತಿಯಲ್ಲಿ ಹೌಸಿಂಗ್‌ನಲ್ಲೂ ಕೂಡ ಏನು ಮಾಡುತ್ತಿದ್ದಾರೆಂದರೆ ಜಿಲ್ಲಾದಿಕಾರಿಗೆ ಹಣವನ್ನು ಮುಟ್ಟಿಸಿ, ತಾಲ್ಲೂಕು ಮಟ್ಟದ ಆಶ್ರಯ ಕಮಿಟಿಯ ಅಧ್ಯಕ್ಷರಿಗೆ ಅದಿಕಾರವನ್ನು ಕೊಟ್ಟು ಭೂಮಿ ಸ್ವಾಧೀನ ಮಾಡಿ ಸೈಟ್‌ಗಳನ್ನು ಮಾಡಿ ಕೊಡುತ್ತೇವೆಂದು

ಹೇಳಿ ಇದನ್ನು ಯಾವ ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆ? ಪ್ರೈವೇಟ್ ಸೈಟ್ you have to account for these things. ಇನ್ನು ಕೊನೆಯದಾಗಿ ಜೆ.ಆರ್.ರೈ ಮತ್ತು ಐ.ಆರ್.ಡಿ.ಪಿಯಲ್ಲಿ ಬಹಳ ಕಡಿಮೆಯಾಗಿದೆ. ಮೈನಾರಿಟಿ ಕಮಿಷನ್ ಬಗ್ಗೆ ಅವರು ಹೇಳಿದರು, ನಾನು ವಿವರವಾಗಿ ಹೇಳುವುದಿಲ್ಲ. Rehaman Khan Committee 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ Techno-Economic Education Survey conducted for the first time in the country. That has been followed by every body, all over the others States. ಅದು ಮಾಡಿದ್ದರೆ ಆ ವರದಿಗಳನ್ನು ಅಚ್ಚು ಮಾಡಿ ಸರ್ಕ್ಯುಲೇಟ್ ಮಾಡಲಿಲ್ಲ. ರೆಕಮಂಡೇಷನ್ ಇಂಪ್ಲಿಮೆಂಟ್ ಮಾಡುವುದಕ್ಕೆ ಒಂದು ನಯಾಪೈಸೆಯನ್ನು ಕೊಟ್ಟಿಲ್ಲ. ಅದನ್ನು ಪ್ರಿಂಟ್ ಮಾಡಿ ಹಂಚುವಂತಹ ಕೆಲಸವನ್ನು ಇವತ್ತಿನವರೆಗೂ ಮಾಡಲಿಲ್ಲ.

ಇದೇ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳು ಕೂಡ ಇವೆ. ಡಾ॥ ವಿಶ್ವೇಶ್ವರಯ್ಯನವರ ತಾಂತ್ರಿಕ ವಿಶ್ವವಿದ್ಯಾಲಯವನ್ನು ಬೆಳಗಾಂನಲ್ಲಿ ಮಾಡಬೇಕೆಂದು ನಾವು ನಿರ್ಣಯವನ್ನು ತೆಗೆದುಕೊಂಡೆವು. The SC/ST Socio-economic survey, for the first time in the country, we have done it. ಅದೂ ಕೂಡ ಕೊನೆಗೆ ಮೂಲೆ ಗುಂಪಾಗಿದೆ. ಪ್ರಿಂಟು ಆಗಲಿಲ್ಲ, ಅನುಷ್ಠಾನವೂ ಆಗಲಿಲ್ಲ. ಡಾ॥ ವಿಶೇಶ್ವರಯ್ಯನವರ ತಾಂತ್ರಿಕ ವಿಶ್ವವಿದ್ಯಾಲಯವನ್ನು ಬೆಳಗಾಂನಲ್ಲಿ ಮಾಡಬೇಕೆಂದು ನಾವು ಶಾಸನವನ್ನು ಮಾಡಿದ್ದೆವು. ಆ ಶಾಸನವನ್ನು ಅನುಷ್ಠಾನ ಮಾಡಲಿಲ್ಲ. ಏಕೆಂದರೆ, ಅವರಿಗೆ ಬೆಳಗಾಂನಲ್ಲಿ ಮಾಡುವುದು ಸಹನೆ ಇಲ್ಲವೇನೋ ಎಲ್ಲವೂ ಬೆಂಗಳೂರಿನಲ್ಲೇ ಆಗಬೇಕು. ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಕೇಂದ್ರ ಸ್ಥಾನವನ್ನು ಮೈಸೂರಿನಲ್ಲಿ ಮಾಡಬೇಕೆಂದು ಶಾಸನ ಮಾಡಿದರೆ, ಇವತ್ತೂ ಕೂಡ ಅದರ ಕೇಂದ್ರ ಸ್ಥಾನ ಬೆಂಗಳೂರಿನಲ್ಲಿದೆ. ಆದುದರಿಂದ, ಪೋಲೀಸ್ ಹೌಸಿಂಗ್ ಕಾರ್ಪೋರೇಷನ್‌ಗೆ ಕೂಡ ಏನೂ ಹಣ ಕೊಟ್ಟಿಲ್ಲ. ಮತ್ತು ಮುಖ್ಯವಾಗಿ ಕನ್ನಡ ಪುಸ್ತಕ ಪ್ರಾಧಿಕಾರವೆಂದು ಪ್ರಾರಂಭ ಮಾಡಿ, ಅದು ಪ್ರಾರಂಭವಾದ ವರ್ಷದಿಂದಲೇ ನಾನು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟೆ, I deposited the money. May be they could not spend the amount. ಈಗ ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ಬರೀ ಅಧ್ಯಕ್ಷರಿಗೆ ಒಂದು ಕಾರು, ಅದು ಇದೆಯೋ ಇಲ್ಲವೋ ಗೊತ್ತಿಲ್ಲ, ಅವರಿಗೊಂದು ತುರಾಯಿ, ಇಷ್ಟುಬಿಟ್ಟರೆ, ಎರಡೂವರೆ ವರ್ಷದಲ್ಲಿ ಯಾವ ಒಂದು ಪುಸ್ತಕವನ್ನು ಖರೀದಿ ಮಾಡಲಿಲ್ಲ, ತಾವು ಆ ಪ್ರಾಧಿಕಾರವನ್ನೇ ರದ್ದು ಮಾಡಬಹುದು. ಇನ್ನು ಕನ್ನಡ ಸಾಹಿತ್ಯ ಪರಿಷತ್ತಿಗೂ ಕೂಡ ತಾವು ಹೆಚ್ಚಿನ ಅನುದಾನವನ್ನು ಕೊಡಬೇಕು ಮತ್ತು ಯಕ್ಷಗಾನ ಕಲಾ

ಅಕಾಡೆಮಿಯನ್ನು ಮಾಡಬೇಕೆಂದು ನನ್ನ ಆಸೆ ಇತ್ತು, ಅದನ್ನೂ ಕೂಡ ಮಾಡಬೇಕೆಂದು ನಾನು ಹೇಳಿ, ತಾವು ನನಗೆ ಬಹಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಣಕಾಸು ಸಚಿವರು ಬರುತ್ತಿದ್ದಾರೆ, ನಾವು ವಿರೋಧಪಕ್ಷದವರ ಸಲಹೆಗಳನ್ನು ಒಪ್ಪಿಕೊಂಡಿದ್ದೇವೆ, ಸಣ್ಣ ತಿದ್ದುಪಡಿ ವಿಧೇಯಕವಿದೆ ಅದನ್ನು ಮಾಡಿಬಿಡೋಣ.

ಉಪಾಧ್ಯಕ್ಷರು : ಹಣಕಾಸು ಸಚಿವರು ಬಂದರು, ನೀವು ಉತ್ತರ ಹೇಳಬೇಕು.

ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೆ ಉತ್ತರ ಹೇಳಲಿ, ನಾವು ಈಗಾಗಲೇ ಮನವಿ ಮಾಡಿಕೊಂಡು ಹೇಳಿದ್ದೇವೆ ಮತ್ತೆ ಪದೇ ಪದೇ ಅದೇ ಹೇಳಿದರೆ ಹೇಗೆ?

ಅಧ್ಯಕ್ಷರು : ಉತ್ತರದ ಬಗ್ಗೆ ನಂತರ ಯೋಚನೆ ಮಾಡೋಣ, ಬಿಜೆಪಿಯ ಇಬ್ಬರು ಸದಸ್ಯರು ಮಾತನಾಡಲಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಕೊಡುವುದಕ್ಕಿಂತ ಮೊದಲು ಈ ಸಣ್ಣ ತಿದ್ದುಪಡಿ ವಿಧೇಯಕ್ಕೆ ಎರಡು ಮೂರು ನಿಮಿಷವಾಗಬಹುದಷ್ಟೆ.

ಅಧ್ಯಕ್ಷರು : ಉತ್ತರ ಈಗಲೇ ಇಲ್ಲ, ಬಿಜೆಪಿಯ ಇಬ್ಬರು ಸದಸ್ಯರು ಮಾತನಾಡುವುದಕ್ಕೆ ನಾನು ಅವಕಾಶ ಕೊಡಬೇಕಾಗುತ್ತದೆ, ಅವರಿಗೆ ಅವಕಾಶ ಕೊಟ್ಟುಬಿಟ್ಟು, ನಂತರ ನೀವೇನೊ ಆ ವಿಧೇಯಕದ ಬಗ್ಗೆ ಮಾತನಾಡಿಕೊಂಡು ಒಡಂಬಡಿಕೆ ಮಾಡಿಕೊಂಡು ಬಂದಿದ್ದೀರಲ್ಲಾ We will take up for discussion ನಾಳೆ ಬೆಳಿಗ್ಗೆ ಯಾವ ಸ್ಪೀಚಸ್ ಇರುವುದಿಲ್ಲ, ರಿಪ್ಲೈ ಅನ್ನು ನಾಳೆ ಬೆಳಿಗ್ಗೆ ಮಾಡಿಸೋಣ We will meet tomorrow at 11-00 a.m. and straightway we will commence deliberations with the reply by the Hon. Deputy chief Minister.

ಈಗ ತಾವು ಪ್ರೆಸ್‌ನವರು ರಿಪ್ಲೈ ಇಲ್ಲವೆಂದರೆ ಹೊರಟು ಹೋಗುತ್ತೀರಿ, ಬೆಳಿಗ್ಗೆ ನಾನು ತಮಗೆ ಹೇಳಲಿಲ್ಲ, ನಾಳೆ ಬೆಳಿಗ್ಗೆ 11-00 ಗಂಟೆಗೆ ನಮ್ಮ ಶಾಸಕರ ಭವನದಲ್ಲಿ ಹೆಲ್ತ್ ಕ್ಲಬ್‌ನ ಉದ್ಘಾಟನಾ ಸಮಾರಂಭಕ್ಕೆ ತಮ್ಮನ್ನು ಆಹ್ವಾನಿಸುತ್ತಿದ್ದೇನೆ, ದಯಮಾಡಿ ತಾವು ಬರಬೇಕು. ಶ್ರೀನಿವಾಸ್ ಹಾಗೂ ಅಪ್ಪಚ್ಚು ರಂಜನ್ ನಿಮ್ಮಿಬ್ಬರಲ್ಲಿ ಅಪ್ಪಚ್ಚು ರಂಜನ್‌ರವರೇ

ಮೊದಲು ನೀವು ಮಾತನಾಡುವುದಿದ್ದರೆ ಮಾತನಾಡಿ ಈಗ ಇಬ್ಬರಿಗೆ ಅವಕಾಶ ಕೊಟ್ಟಿದ್ದೇನೆ, ಬೇಗ ಬೇಗ ಮುಗಿಸಿ.

+ **ಶ್ರೀ ಎಂ. ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) : ಸನ್ಮಾನ್ಯ ಅಧ್ಯಕ್ಷರೆ,** ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯನವರ ಆಯವ್ಯಯವನ್ನು ಮಂಡಿಸಿ ಅದರ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಆಯವ್ಯಯದ ಮೇಲೆ ಈಗಾಗಲೇ ಹಿರಿಯ ನಾಯಕರು ಮಾತನಾಡಿದ್ದಾರೆ. ನಾನು ಈ ಆಯವ್ಯಯದ ವಿಚಾರದ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ನಮ್ಮ ಕೊಡಗು ಜಿಲ್ಲೆಯ ಪರಿಸ್ಥಿತಿಯನ್ನು ತಮಗೆ ಮನವರಿಕೆ ಮಾಡಿಕೊಡುವುದಕ್ಕೆ ನಾನು ನಿಂತಿದ್ದೇನೆ. ಕಳೆದ ವರ್ಷ ಆಯವ್ಯಯವನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಸನ್ಮಾನ್ಯ ಹಣಕಾಸಿನ ಮಂತ್ರಿಗಳು ಪ್ರತಿ ಗ್ರಾಮಪಂಚಾಯಿತಿಗೆ ಗ್ರಾಮಸೇವಕರನ್ನು ಕೊಡುತ್ತೇವೆನ್ನುವ ಮಾತನ್ನು ಆಯವ್ಯಯದಲ್ಲಿ ಮಂಡನೆ ಮಾಡಿದ್ದರು. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಗ್ರಾಮಪಂಚಾಯಿತಿಗೆ ಒಬ್ಬ ಗ್ರಾಮ ಸೇವಕರಲ್ಲ, ಒಂದು ಗ್ರಾಮ ಪಂಚಾಯಿತಿಗೆ ಕಾರ್ಯದರ್ಶಿಯವರನ್ನು ಕೊಡುವಂಥ ಕೆಲಸವನ್ನು ಕೂಡ ಸರ್ಕಾರ ಮಾಡಲಿಲ್ಲ. ಇವತ್ತು ಕೊಡು ಜಿಲ್ಲೆಯಲ್ಲಿರುವ ಗ್ರಾಮಪಂಚಾಯಿತಿಗಳಿಗೆ, ಗ್ರಾಮಪಂಚಾಯಿತಿಯ ಕಾರ್ಯದರ್ಶಿಗಳೂ ಕೂಡ ಇಲ್ಲ. ಮತ್ತೆ ಕೊಡುಗು ಜಿಲ್ಲೆಯಲ್ಲಿ ರಸ್ತೆಯ ವ್ಯವಸ್ಥೆಯನ್ನು ತೆಗೆದುಕೊಂಡಾಗ, ಕರ್ನಾಟಕದಲ್ಲಿ ಇವತ್ತು ಸಾರಿಗೆ ಸಂಸ್ಥೆಯಿಂದಾಗಲಿ ತೆರಿಗೆ ರೂಪದಲ್ಲಿ ನನಗೆ ತಿಳಿದಮಟ್ಟಿಗೆ, ನಾನೂರು ಐವತ್ತು ಕೋಟಿ ರೂಪಾಯಿಗಳಷ್ಟು ತೆರಿಗೆ ಸಂಗ್ರಹವಾಗುತ್ತದೆ. ಆದರೆ ತಾವು ತಮ್ಮ ಆಯವ್ಯಯದಲ್ಲಿ ಕೇವಲ ನೂರಐವತ್ತು ಕೋಟಿ ರೂಪಾಯಿಗಳನ್ನು ರಸ್ತೆ ಕೆಲಸಕ್ಕೆ ಇಟ್ಟುಕೊಂಡಿದ್ದೀರಿ. ಇವತ್ತು ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುವ ಕಾರಣದಿಂದ ಕೊಡಗಿನಲ್ಲಿ ರಸ್ತೆಗಳು ಅವ್ಯವಸ್ಥೆಯಾಗಿವೆ, ಈ ರಸ್ತೆಗಳಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಾ, ಇವತ್ತು ಕೊಡಗಿನಲ್ಲಿ ಪ್ರತ್ಯೇಕ ಕೊಡಗು ರಾಜ್ಯ ಬೇಕೆನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ನಮ್ಮ ಕೊಡಗು ಜಿಲ್ಲೆಯ ಎರಡು ತಾಲ್ಲೂಕಿನಲ್ಲೂ ಕೂಡ ಕೊಡಗು ಮುಕ್ತಿ ಮೋರ್ಚದವರು ಸಮ್ಮೇಳನವನ್ನು ಮಾಡಿದ್ದಾರೆ. ಈ ಸಮ್ಮೇಳನ ಕೊಡಗಿನವೀರಾಜಪೇಟೆ ತಾಲ್ಲೂಕಿನ ಗೋಣಿಕೊಪ್ಪದಲ್ಲಿ ನಡೆದಾಗ ಸಾಧಾರಣವಾಗಿ ಹದಿನೈದು ಸಾವಿರ ಜನರು ಸೇರಿದ್ದಾದರೆ. ಮಡಿಕೇರಿಯಲ್ಲಿ ಒಂದು ಸಮ್ಮೇಳನ ನಡೆದಾಗ ಅಲ್ಲಿ ಸಾಧಾರಣವಾಗಿ ಇಪ್ಪತ್ತೈದು ಸಾವಿರ ಜನಸಂಖ್ಯೆ ಸೇರಿತ್ತು. ಇವತ್ತು ಕೊಡಗಿನಲ್ಲಿ ಬೆಂಕಿಹತ್ತಿಕೊಂಡು ಉರಿಯುವಂಥ ಪರಿಸ್ಥಿತಿ ಇದೆ. ಆದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ

ಕೊಡಗು ಜಿಲ್ಲೆಯನ್ನು ಕಡೆಗಣಿಸಿದ್ದಾರೆ. ಯಾವರೀತಿಯಾಗಿ ಕಡೆಗಣಿಸಿದ್ದಾರೆಂದರೆ, ಕೊಡಗು ಕಲ್ಪವೃಕ್ಷ, ಕಾಮದೇನು ಎಂದು ಹೇಳುವ ರೀತಿಯಲ್ಲಿ ನಮ್ಮ ಕರ್ನಾಟಕ ಸರ್ಕಾರ ಇವತ್ತು ಕೊಡಗಿನಲ್ಲಿ, ಹಸು ಹಾಲನ್ನು ಕೊಡುತ್ತದೆ, ಆ ಹಾಲನ್ನು ಚೆನ್ನಾಗಿ ಕುಡಿದು, ಅದರ ಕರು ಬದುಕ ಬಾರದು, ಕರುವಿಗೆ ಏನೂ ಸಿಗಬಾರದೆನ್ನುವ ಸ್ಥಿತಿಯಲ್ಲಿ ಇವತ್ತು ಕೊಡಗನ್ನು ಇಟ್ಟಿದ್ದಾರೆ. ಇದಕ್ಕೋಸ್ಕರವಾಗಿ ಇವತ್ತು ಪ್ರತ್ಯೇಕ ಕೊಡಗು ರಾಜ್ಯಬೇಕು, ಮೊದಲು ಕೊಡಗು ಪ್ರತ್ಯೇಕ ರಾಜ್ಯವಾಗಿತ್ತು ಎನ್ನುವ ಪರಿಸ್ಥಿತಿಗೆ ಬಂದಿದೆ. ನಮ್ಮ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗಲೂ ಕೂಡ ಕೊಡಗಿನವರು ಏತಕ್ಕೆ ಪ್ರತ್ಯೇಕ ರಾಜ್ಯವನ್ನುಕೇಳುತ್ತಿದ್ದೀರಿ ಎಂದು ಹೇಳಿದರು. ಕಾರಣವೇನೆಂದರೆ, ಇವತ್ತು ಕೊಡಗು ಜಿಲ್ಲೆಯಲ್ಲಿ ಒಂದು ವೈದ್ಯಕೀಯ ಕಾಲೇಜಿಲ್ಲ, ಒಂದು ಇಂಜಿನಿಯರಿಂಗ್ ಕಾಲೇಜಿಲ್ಲ, ಒಂದು ದಂತ ಕಾಲೇಜಿಲ್ಲ.

ಅಧ್ಯಕ್ಷರು : ಕಾಫಿ ತೋಟವಿದೆಯಲ್ಲಾ, ಇವೆಲ್ಲಾ ಇರುವ ಕಡೆಗಳಲ್ಲಿ ಕಾಫಿ ತೋಟವಿಲ್ಲವಲ್ಲಾ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಕಾಫಿತೋಟವಿದೆ, ಆದರೆ ಕರ್ನಾಟಕ ಸರ್ಕಾರ ಅದರ ಮೇಲೂ ಕೂಡ ಕಣ್ಣಿಟ್ಟಿದೆ. ಯಾವುದೇ ಕೃಷಿ ವರಮಾನ ತೆರಿಗೆ ಯಾವುದೇ ಕೃಷಿಗೆಲ್ಲ, ಆದರೆ ಏಲಕ್ಕಿ ಹಾಗೂ ಕಾಫಿ ಬೆಳೆಗೆ ಹಾಕಿದ್ದಾರೆ. ಆದರಿಂದ ಕರ್ನಾಟಕ ಸರ್ಕಾರಕ್ಕೆ ಸಾಧಾರಣವಾಗಿ ನಲವತ್ತೈದು ಕೋಟಿರೂಪಾಯಿಗಳು ಬರುತ್ತಿದೆ. ಆದರೂ ಕೂಡ ಇವತ್ತು ಕೊಡಗು ಜಿಲ್ಲಾಪಂಚಾಯಿತಿಗೆ ಕರ್ನಾಟಕ ಸರ್ಕಾರ ಯೋಜನೆಯಿಂದ 2420 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಯೋಜನೇತರದಲ್ಲಿ ಸಾಧಾರಣ 3185 ಲಕ್ಷ ರೂಪಾಯಿಗಳನ್ನು ಬಿಡಗಡೆ ಮಾಡಿದ್ದಾರೆ. ಇದನ್ನು ಬೇರೆ ಜಿಲ್ಲೆಗೆ ಹೋಲಿಸಿದಾಗ ಸಾಕಷ್ಟು ಕಡಿಮೆಯಾಗಿದೆ. ನಮ್ಮ ಕೊಡಗಿನಿಂದ ಕರ್ನಾಟ ಸರ್ಕಾರಕ್ಕೆ ಸಾಧಾರಣ 300 ಕೋಟಿ ರೂಪಾಯಿಗಳಷ್ಟು ತೆರಿಗೆ ರೂಪದಲ್ಲಿ ಸಂದಾಯವಾಗುತ್ತಿದೆ, ಆದರೂ ಕೂಡ ಇವತ್ತು ಕೊಡಗಿನಲ್ಲಿ ಸರಿಯಾದ ರಸ್ತೆಯಿಲ್ಲ, ಒಂದು ವಾಹನ ಇಪ್ಪತ್ತು ಕಿ.ಮೀ. ಹೋಗಬೇಕಾದರೆ ಇವತ್ತು ಒಂದು ಗಂಟೆ ಸಮಯಬೇಕಾಗುತ್ತದೆ. ಈ ಸ್ಥಿತಿ ಇದೆ. ಇದರಿಂದ ಅಲ್ಲಿಯ ಜನರು ಕೊಡಗನ್ನು ಕಡೆಗಾಣಿಸಿದ್ದಾರೆಂದು ಹೇಳುವ ರೀತಿಯಲ್ಲಿ ಪ್ರತ್ಯೇಕ ಕೊಡಗು ರಾಜ್ಯಬೇಕೆಂದು ಇವತ್ತು ಒಂದು ಗಂಟೆ ಸಮಯಬೇಕಾಗುತ್ತದೆ. ಈ ಸ್ಥಿತಿ ಇದೆ. ಇದರಿಂದ ಅಲ್ಲಿಯ ಜನರು ಕೊಡಗನ್ನು ಕಡೆಗಾಣಿಸಿದ್ದಾರೆಂದು ಹೇಳುವ ರೀತಿಯಲ್ಲಿ ಪ್ರತ್ಯೇಕ ಕೊಡಗು ರಾಜ್ಯಬೇಕೆಂದು

ಇವತ್ತು ಹೋರಾಟ ಮಾಡುವುದಕ್ಕೆ ಹೊರಟಿದ್ದಾರೆ. ಕೊಡಗಿನಲ್ಲಿ ಈ ಕಾವೇರಿ ಮಾತೆಯ ಪುಣ್ಯ ಸ್ಥಳವಾದ ಬಾಗಮಂಡಲಕ್ಕೆ ತಮ್ಮ ಆಯವ್ಯಯದಲ್ಲಿ 50 ಲಕ್, ರೂಪಾಯಿಗಳು ಮುಡುಪಾಗಿಟ್ಟಿದ್ದೀರಿ ಇದು ಏನೇನೂ ಸಾಲದು. ನಿಜವಾಗಿಯೂ ಕೊಡಗಿಗೆ ನೀವೇನು 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಇದು ದೊಡ್ಡ ವಿಚಾರವಲ್ಲ, ತಾವು ಭಿಕ್ಷೆ ಇಟ್ಟಂತೆ ಇಟ್ಟಿದ್ದೀರಿ, ನಮಗೆ ಈ 50 ಲಕ್ಷ ಬೇಕಾಗಿಲ್ಲ, ದಯವಿಟ್ಟು ತಾವು 10 ಕೋಟಿ ರೂಪಾಯಿಗಳನ್ನು ಕೊಡಗು ಜಿಲ್ಲೆಗೆ ಕೊಡಬೇಕು. ಕಳೆದ ಸಾರಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿರವರು ನಾನು ಕೊಡಗಿಗೆ ವಿಶೇಷ ಅನುದಾನ 5 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಅಷ್ಟರೊಳಗೆ ಕಾರಣಾಂತರಗಳಿಂದ ಚುನಾವಣೆ ಬಂತು ಕೊಡಲು ಸಾಧ್ಯವಾಗಲಿಲ್ಲ, ಕೊಟ್ಟಿಲ್ಲ. ಇವತ್ತು ಕಾವೇರಿ ನದಿ ನೀರು ಕೊಡಗಿಗೆ ಮಾತ್ರವಲ್ಲ, ಕರ್ನಾಟಕ ರಾಜ್ಯಕ್ಕೆ, ತಮಿಳು ನಾಡು ರಾಜ್ಯಕ್ಕು ಕೂಡ ಅನ್ನದಾತೆಯಾಗಿದ್ದಾಳೆ. ನಾವೆಲ್ಲಾ ಅದೇ ನೀರನ್ನು ಕುಡಿದು ಅದರಿಂದಲೇ ಬದುಕುತ್ತಿದ್ದೇವೆ. ಕೊಡಗಿನ ಹಾರಂಗಿ ಜಲಾಶಯಕ್ಕೆ ಒಂದು ಅಣೆಕಟ್ಟನ್ನು ಕಟ್ಟಿದ್ದಾರೆ. ಈ ಹಾರಂಗಿ ಜಲಾಶಯವನ್ನು ಕಟ್ಟಿದಂಥ ಸಂದರ್ಭದಲ್ಲಿ ಸುಮಾರು ಎರಡು ಸಾವಿರ ಎಕರೆ ಫಲವತ್ತಾದ ಭೂಮಿ ಮುಳುಗಡೆಯಾಗಿದೆ. ಆದರೂ ಕೂಡ ಕೊಡಗು ಜನತೆ ಸೌಮ್ಯ ರೀತಿಯಿಂದ ಇದ್ದು ಆ ಅಣೆಕಟ್ಟನ್ನು ಕಟ್ಟಿ ಕರ್ನಾಟಕ ರಾಜ್ಯದ ಐವತ್ತಾಲ್ಕು ಸಾವಿರ ಹೆಕ್ಟೆರ್‌ಗೆ ನೀರು ಉಣಿಸುವಂಥ ಕೆಲಸವನ್ನು ಕೂಡ ಮಾಡಿದ್ದೇವೆ. ಇದರಲ್ಲಿ ಕೊಡಗಿಗೆ ಸಾಧಾರಣ 2792 ಎಕರೆಗೆ ಮಾತ್ರ ನೀರು ಬರುತ್ತಿದೆ. ಅರಕಲಗೂಡಿಗೆ 8935 ಎಕರೆ ಪ್ರದೇಶಕ್ಕೆ ನೀರು ಸಿಗುತ್ತದೆ. ಕೆ.ಆರ್.ನಗರಕ್ಕೆ 12.309 ಎಕರೆಗೆ ನೀರು ಹರಿದು ಹೋಗುತ್ತದೆ. ಹುಣಸೂರಿಗೆ 14,079 ಎಕರೆಗೆ ನೀರು ಸಿಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ನನ್ನ ಕ್ಷೇತ್ರವಾದ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಅಲೂರು ಸಿದ್ದಾಪುರ ಎನ್ನುವ ಒಂದು ಗ್ರಾಮ ಇದೆ. ಅಲ್ಲಿ ಸುಮಾರು 15,000 ಎಕರೆಗೆ ಇವತ್ತು ನೀರು ಇಲ್ಲ. ಇದು ಹಾಸನಕ್ಕೆ ಸಮೀಪದ ಸ್ಥಳವಾಗಿರುತ್ತದೆ. ಅಲ್ಲಿಗೆ ಏತ ನೀರಾವರಿ ಯೋಜನೆಯನ್ನು ಮಾಡಿ ಎಂದು ಹೇಳಿದರೂ ಕೂಡ ಕರ್ನಾಟಕ ಸರ್ಕಾರ ಆ ಏತ ನೀರಾವರಿ ಯೋಜನೆ ಮಾಡುವ ಯಾವುದೇ ಗೋಜಿಗೆ ಹೋಗಲಿಲ್ಲ. ಈ ರೀತಿಯಾಗಿ ನಮ್ಮ ಕೊಡಗು ಜಿಲ್ಲೆಯನ್ನು ಕಡೆಗಾಣಿಸುತ್ತಿದ್ದಾರೆ. ಇನ್ನು ಕೊಡಗಿನಲ್ಲಿ ಆಡಳಿತ ಯಾವ ರೀತಿ ನಡೆಯುತ್ತಿದ್ದೆಯೆಂದರೆ, ಕೊಡಗಿನ ಅರಣ್ಯ ಇಲಾಖೆಯಿಂದ ಕರ್ನಾಟಕ ಸರ್ಕಾರಕ್ಕೆ ಹೆಚ್ಚಿನ ಹಣ ಸಂದಾಯವಾಗುತ್ತಿದೆ. ಆದರೆ ಕಡಗಿನಲ್ಲಿ ಈಗ ಅರಣ್ಯ ಲೂಟಿ ಮಾಡುವವರು ಯಾರೆದಂರೆ, ವ್ಯಾಪಾರಸ್ಥರಲ್ಲ, ಅರಣ್ಯ ಇಲಾಖೆಯವರೆ ಅರಣ್ಯವನ್ನು

ಕೊಳ್ಳೆ ಹೊಡೆಯುವ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಅರಣ್ಯ ಲೂಟಿ ಮಾಡುತ್ತಿದ್ದಾರೆ, ಇದನ್ನು ಅರಣ್ಯ ಅಧಿಕಾರಿಗಳೇ ಕಳ್ಳತನ ಮಾಡುತ್ತಿದ್ದಾರೆಂದು ಹೇಳಿ ಕೆಲವು ದಾಖಲೆಗಳು ಇವೆ. ಅದನ್ನು ನಾನು ಕಳುಹಿಸಿ ಕೊಡುವುದಕ್ಕೆ ತಯಾರಿದ್ದೇನೆ. ಇತ್ತೀಚೆಗೆ ವಿರಾಜಪೇಟೆ ತಾಲ್ಲೂಕಿನಲ್ಲಿ ಒಂದು ಸ್ಮಗ್ಲಿಂಗ್ ಜೀಪನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದಾರೆ. ಆ ಜೀಪು ತಮಿಳುನಾಡಿನಲ್ಲಿ ಓಡಾಡುತ್ತಿರುವ ಜೀಪು. ಅರಣ್ಯ ಇಲಾಖೆಯಲ್ಲಿದ್ದಂಥ ಅರಣ್ಯ ಅಧಿಕಾರಿಗಳು ಇದ್ದಾರೆ, ಅವರ ಮನೆಗೆ ತೆಗೆದುಕೊಂಡು ಹೋಗಿ ಆ ಮನೆಯಲ್ಲಿ ಅದನ್ನು ತಮಿಳುನಾಡಿನ ರಿಜಿಸ್ಟ್ರೇಷನ್ ಮಾಡಿಸಿ ಓಡಿಸುವಂಥ ಪರಿಸ್ಥಿತಿ ಇದೆ. ಅದರೂ ಕೂಡ ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಂಡಿದೆ. ಹಾಗೆಯೇ ಇತ್ತೀಚೆಗೆ ನಮ್ಮ ಸೋಮವಾರ ಪೇಟೆಯಲ್ಲಿ ಕೂಡ ರೇಂಜರ್‌ರವರು ಅರಣ್ಯ ಇಲಾಖೆಯ ಲಾರಿಯಲ್ಲಿ ಬೀಟಿ ಮರವನ್ನು ಸಾಗಣೆ ಮಾಡಿದ್ದಾರೆ. ಆದರೆ ಆ ರೇಂಜರ್‌ರವರನ್ನು ಇಲ್ಲಿಯುವರೆಗೆ ಬಂಧನ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಈ ರೀತಿಯಾಗಿ ಅರಣ್ಯ ಇಲಾಖೆಯವರು ಕಳ್ಳಸಾಗಾಣಿಕೆಯನ್ನು ಮಾಡುತ್ತಿದ್ದಾರೆ. ಸರ್ಕಾರ ಮಾತ್ರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದೆ. ಇನ್ನು ಕಾದಯ ಇಲಾಖೆಯವರು ಈ ಫಾರ್ಮ್ 50ನ್ನು ಘೋಷಣೆ ಮಾಡಿದ್ದಾರೆ. ಇದರಲ್ಲಿ ಖುಷ್ಕಿ ಬೆಲೆ ಯಾರು ಮಾಡಿರುತ್ತಾರೆ ಅಂಥ ಖುಷ್ಕಿ ಬೆಲೆ ಮಾಡಿದ್ದನ್ನು ತಾವು ಅಕ್ರಮ ಸಂಕ್ರಮ ಸಮಿತಿಗೆ ಇಟ್ಟು ಗ್ರಾಂಟ್ ಮಾಡಬಹುದೆಂದೂ ಕೂಡ ಹೇಳಿದ್ದಾರೆ. ಆದರೆ ಇದರಲ್ಲಿ ಏಲಕ್ಕಿ, ಕಾಫಿಗೆ ಅವಕಾಶ ಕೊಡಲಿಲ್ಲ. ಆದರೆ ಇವತ್ತು ನಮ್ಮ ಕೊಡಗಿನಲ್ಲಿ ಬಹಳ ಜನ ಏಲಕ್ಕಿ, ಕಾಫಿ ಬೆಳೆಸುವುದರಿಂದ ನಾನು ಈ ಸರ್ಕಾರದವರಲ್ಲಿ ಒತ್ತಾಯ ಮಾಡುವುದೇನೆಂದರೆ, ಮಾನ್ಯ ಕಂದಾಯ ಮಂತ್ರಿಗಳು ಸದನದಲ್ಲಿ ಇಲ್ಲ, ಅಧ್ಯಕ್ಷರೆ, ದಯವಿಟ್ಟು ತಾವು, ಇಲ್ಲಿರುವಂಥ ಮಂತ್ರಿಗಳು, ಈ ಫಾರ್ಮ್ 50ನ್ನು ಇದರಲ್ಲಿ ಕಾಫಿ ಮತ್ತು ಏಲಕ್ಕಿ ಬೆಳೆಯನ್ನು ಸೇರಿಸಿಕೊಂಡು ಅದಕ್ಕೆ ಗ್ರಾಂಟ್ ಕೊಡುವಂತೆ ಸರ್ಕಾರ ಆದೇಶ ಹೊರಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ವಿಷಯದಲ್ಲೂ ನಮ್ಮ ಕೊಡಗನ್ನು ಕಡೆಗಾಣಿಸುತ್ತಿರುವುದರಿಂದ ಕೊಡಗನ್ನು ಪ್ರತ್ಯೇಕ ರಾಜ್ಯವಾಗಿ ಮಾಡಬೇಕೆಂದು ಹೇಳಿ ಬೇಡಿಕೆಯನ್ನು ಎತ್ತಿದ್ದಾರೆ. ತಾವು ಅದನ್ನು ಮನಗಂಡು ಕೊಡಗಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಿ, ಕರ್ನಾಟಕ ಸರ್ಕಾರದಿಂದ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಕೊಡಗಿನ ಅಭಿವೃದ್ಧಿ ಚೆನ್ನಾಗಿ ಆಗುವಂತೆ ಮಾಡಬೇಕು. ನಾನು ಕಲ್ಪವೃಕ್ಷ ಕಾಮದೇನು ಎಂದು ಏನು ಹೇಳಿದ್ದೇನೆ, ಇಲ್ಲಿ ಆ ಕಾಮಧೇನು ಹಸುಉಳಿಯಬೇಕು, ಆ ಕರು ಸಹ ಉಳಿಯಬೇಕು ಮತ್ತು ಕರ್ನಾಟಕಕ್ಕೆ ಹಾಲೂ ಕೂಡ ಸಿಗಬೇಕು, ಆ ರೀತಿ ತಾರು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಈ ಸರ್ಕಾರ ಮಂಡನೆ ಮಾಡಿದಂಥ

ಬಜೆಟ್‌ನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತ, ನನಗೆ ಸಮಯವಕಾಶವನ್ನು ಮಾಡಿ ಕೊಟ್ಟಂಥ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸುತ್ತ ನನ್ನ ಭಾಷಣವನ್ನು ಮುಗಿಸುತ್ತೇನೆ. ವಂದನೆಗಳು.

ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, 1997-98ರ ಆಯುವ್ಯಯದ ಮೇಲೆ ಮಾತನಾಡಲಿಕ್ಕೆ ಅವಕಾಶವನ್ನು ತಾವು ನೀಡಿದ್ದಕ್ಕಾಗಿ ಮಾತನಾಡುವುದರ ಪೂರ್ವಭಾವಿಯಾಗಿತಮಗೆ ಧನ್ಯವಾದಗಳನ್ನರ್ಪಿಸುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಅಧ್ಯಕ್ಷರು : ನನಗೆ ಎರಡು ಚೀಲಕ್ಕೆ ಆಗುತ್ತದೆ ಅಷ್ಟು ಧನ್ಯವಾದಗಳನ್ನು ಹೇಳಿದ್ದೀರಿ ಇಲ್ಲಿ. ಹೊತ್ತುಕೊಂಡು ಹೋಗುವುದಕ್ಕೆ ಚೀಲ ತಂದಿಲ್ಲ. ಬರಿ ಕೈಯಲ್ಲಿ ಬಂದಿದ್ದೇನೆ.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಹಾಗಲ್ಲ, ಈಗ ಏನಾಗಿದೆಯೆಂದರೆ ನಮ್ಮ ಕಷ್ಟವನ್ನೂ ಕೂಡ ಹೇಳುತ್ತೇನೆ. ಏನಾಗುತ್ತದೆಂದರೆ ನಾವು ಮಾತನಾಡಬೇಕೆಂದು ಅಪೇಕ್ಷೆ ಬಹಳಷ್ಟು ದಿವಸದಿಂದ ಇತ್ತು. ಈಗ ಅದು ತಾನಾಗಿ ತಾನು ಒದಗಿಬಂದಿರುವಂಥದ್ದು. ಅದೂ ಸಹ ತಮ್ಮ ಸಮ್ಮುಖದಲ್ಲಿ ಅವಕಾಶ ಸಿಕ್ಕಿದೆಯೆಂದರೆ ಬಹಳಷ್ಟು ರೀತಿಯಲ್ಲಿ ಅದೃಷ್ಟವಂತ. ಅದಕ್ಕೋಸ್ಕರವಾಗಿ ತಮಗೆ ಧನ್ಯವಾದಗಳನ್ನು ಮಾತಿಗೆ ಮುಚಿತವಾಗಿಯೇ ಹೇಳುತ್ತಿದ್ದೇನೆ.

ಅಧ್ಯಕ್ಷರು : ಸರಿ, ನನಗೂ ನಿಮ್ಮಷ್ಟೇ ಸಂತೋಷವಾಗಿದೆ.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಅದ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿರುವಂಥ 20 ಜಿಲ್ಲೆಗಳಲ್ಲಿ ಅತಿ ಸಣ್ಣದಾದ ಜಿಲ್ಲೆಯೆಂದರೆ ನಮ್ಮ ಕೊಡಗು ಜಿಲ್ಲೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂಥ ಹೆಗ್ಗಳಿಕೆಯನ್ನು ನಮ್ಮ ಜಿಲ್ಲೆ ಹೊಂದಿದೆ. ನಮ್ಮ ಜಿಲ್ಲೆಯಿಂದ ವಸೂಲಾಗುತ್ತಿರುವಂಥ ತೆರಿಗೆಯಾಗಲಿ, ನಾವು ಕೊಡುತ್ತಿರುವಂತ ಹಣವೇ ಆಗಲಿ, ಅದನ್ನು ನಾವು ಈ ಸರ್ಕಾರದೊಡನೆ ಹೋಲಿಕೆ ಮಾಡಬೇಕಾಗಿ ಬಂದಿದೆ. ಇದಕ್ಕೆ ಕಾರಣವೇನೆಂದರೆ, ನಾವು ಕೊಡುತ್ತಿರುವಂಥ ತೆರಿಗೆಯಲ್ಲಿ ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಎಷ್ಟು ಪ್ರಮಾಣದಲ್ಲಿ ಕರ್ನಾಟಕ ಸರ್ಕಾರ ಹಣ ನೀಡುತ್ತಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ರೀತಿಯ ಯೋಜನೆಯನ್ನು ಏಕೆ ಮಾಡಬೇಕಾಗಿ ಬಂದಿದೆಯೆಂದರೆ ಅಧಿಕವಾದ ತೆರಿಗೆಯವನ್ನು ನೀಡುವುದಕ್ಕಾಗಿಯೇ ನಮ್ಮ ಜಿಲ್ಲೆ ಇದೆಯೇನೋ ಎನ್ನುವಂಥ ಭಾವನೆ ನಮ್ಮ ಮನಸ್ಸಿನಲ್ಲಿ ಬಂದುಬಿಟ್ಟಿದೆ. ಕಾರಣ, ಕೊಡಗು ಜಿಲ್ಲೆಯಲ್ಲಿರತಕ್ಕಂಥ ರಸ್ತೆಗಳ ವ್ಯವಸ್ಥೆಯಾಗಲಿ, ವಿದ್ಯುತ್ ವ್ಯವಸ್ಥೆಯಾಗಲಿ, ಅಥವಾ

ಇನ್ನಿತರ ಅಭಿವೃದ್ಧಿ ಕೆಲಸವನ್ನಾಗಲಿ ನಾವು ನೋಡಿದಾಗ ರಾಜ್ಯದಲ್ಲಿರುವಂಥ 20 ಜಿಲ್ಲೆಗಳಲ್ಲಿ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಸುಮಾರು 153ಕೋಟಿ ರೂಪಾಯಿಗೂ ಅಧಿಕವಾದಂಥ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ನೀಡುವಂಥ ವ್ಯವಸ್ಥೆಯನ್ನು ಸಮರ್ಪಕವಾಗಿ ಪ್ರತಿವರ್ಷ ನಾವು ಮಾಡಿಕೊಂಡು ಬರುತ್ತಿದ್ದೇವೆ. ಆದರೆ ಕೊಡಗು ಜಿಲ್ಲೆಯಿಂದ ತೆರಿಗೆ ರೂಪದಲ್ಲಿ ಸಂಗ್ರಹಿಸಿದ ಹಣವನ್ನು ಅದೇ ಜಿಲ್ಲೆಯ ಅಬಿವೃದ್ಧಿ ಕೆಲಸಗಳಿಗೆ ನಮ್ಮ ಸರ್ಕಾರ ಎಷ್ಟು ಹಣವನ್ನು ತೊಡಗಿಸಿದ್ದಾರೆಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಪಟ್ಟು ನೋಡಿದಾಗ ನಿಜಕ್ಕೂ ನಮಗೆ ನಿರಾಸೆಯಾಗಿದೆ. ಈಗಾಗಲೆ ನಮ್ಮ ಕೊಡಗಿನ ಸೋಮವಾರ ಪೇಟೆಯ ಕ್ಷೇತ್ರದ ವಿಧಾಸಭಾ ಸದಸ್ಯರಾದಂಥ ಶ್ರೀ ಅಪ್ಪಚ್ಚು ರಂಜನ್‌ರವರು ಕೊಡಗು ಜಿಲ್ಲೆಯಲ್ಲಿ ಪ್ರತ್ಯೇಕತೆಯ ಭಾವನೆ ಎದ್ದಿದೆ ಎನ್ನುವ ಮಾತನ್ನು ಹೇಳಿದರು. ಇದನ್ನು ಇಲ್ಲಿ ಸಮರ್ಥನೆ ಮಾಡುವುದಕ್ಕೆ ನಾನು ನಿಂತಿಲ್ಲ ಅಧ್ಯಕ್ಷರೆ. ಆದರೆ ಅಲ್ಲಿ ಇರುವಂಥ ಜನರಿಗೆ ಆ ಪ್ರತ್ಯೇಕತೆಯ ಭಾವನೆ ಏಕೆ ಬಂತು ಎನ್ನುವುದನ್ನು ನಾವೆಲ್ಲಾ ಯೋಚನೆ ಮಾಡಬೇಕಾಗಿದೆ. ಏಕೆಂದರೆ ಒಂದು ಕುಟುಂಬದಿಂದ ಒಬ್ಬ ಮನುಷ್ಯ ಹೊರಗಡೆ ಹೋಗಬೇಕಾಗಿದೆ. ಅಲ್ಲಿ ಪ್ರತ್ಯೇಕತೆಯ ಭಾವನೆ ಬಂದಂಥ ಸಂದರ್ಭದಲ್ಲಿ ಇಲ್ಲಿ ಸರ್ಕಾರವನ್ನು ನಡೆಸುತ್ತಿರುವಂಥ ರಾಜಕೀಯ ಮುಖಂಡರು ಅಲ್ಲಿರುವಂಥ ಪ್ರತ್ಯೇಕತೆಯ ಕೂಗಿಗೆ, ಅಂದೋಲನವನ್ನು ಮಾಡಲು ಎದ್ದೇಳುವಂಥ, ಮುಖಂಡರೊಡನೆ ಮಾತನಾಡುವಂಥ ಪರಿಸ್ಥಿತಿ ನಿರ್ಮಾಣವಾಗಬೇಕಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕಾರಣ, ಯಾವ ಜಿಲ್ಲೆಯಿಂದ ಅಧಿಕವಾಗಿ ತೆರಿಗೆಯನ್ನು ಕೊಡುತ್ತಿದ್ದಾರೋ ಆ ಜಿಲ್ಲೆಯಲ್ಲಿರುವ ರಸ್ತೆಯನ್ನು ನೋಡಿದರೆ ಬಹಶ ದುಃಖವಾಗುತ್ತದೆ. ಈಗ ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಕೊಡಗಿನ ಅಭಿವೃದ್ಧಿಗೋಸ್ಕರ ಪ್ರತ್ಯೇಕವಾದಂಥ ಹಣವನ್ನು ನಾವು ನೀಡಿದ್ದೆರು ಎಂದು ಹೇಳಿದರು. ಹೀಗೆ ಪ್ರತ್ಯೇಕವಾಗಿ ಹಣವನ್ನು ನೀಡುವಂಥ ಪದ್ಧತಿಯನ್ನು ಈ ಸರ್ಕಾರ ಮುದುವರೆಸಿಕೊಂಡು ಹೋಗಿದ್ದರೆ ನಾವು ಬಹಳಷ್ಟು ಸಂತೋಷ ಪಡುತ್ತಿದ್ದೆವು. ಆದರೆ ಇದರ ಬಗ್ಗೆ ಪ್ರಂಯತ್ನವನ್ನು ಮಾಡುವುದಿರಲಿ, ಯಾವ ಒಂದು ಯೋಜನೆ ಇತ್ತೋ ಆ ಯೋಜನೆಯುನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದನ್ನು ನೆನೆಸಿಕೊಂಡರೆ ತಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ನಾವು ಕೇವಲ ನಮ್ಮ ಜಿಲ್ಲೆಯಿಂದ ತೆರಿಗೆಯನ್ನು ಸರ್ಕಾರಕ್ಕೆ ನೀಡುವುದಕ್ಕೋಸ್ಕರವೇ ಜನ್ಮ ತಾಳಿದ್ದೇವೋ ಏನೋ ಎನ್ನುವ ಒಂದು ಭಾವನೆ ನಮ್ಮ ಕೊಡಗಿನಲ್ಲಿರುವಂಥ ಪ್ರತಿಯೊಬ್ಬರ ಮನಸ್ಸಿನಲ್ಲಿ ಕೂಡ ಬಂದಿದೆ. ಇನ್ನು ತಲಕಾವೇರಿ ಬಗ್ಗೆ ಮಾತನಾಡುವುದಾದರೆ ಸದನದಲ್ಲಿ

ಕಾವೇರಿ ವಿಷಯದ ಬಗ್ಗೆ ಮಾತನಾಡುವ ಪ್ರತಿ ಸಂದರ್ಭದಲ್ಲೂ ಉದ್ವೇಗಕ್ಕೆ ಒಳಗಾಗುತ್ತಾರೆ. ಇದನ್ನು ತಾವು ಕೂಡ ತಿಳಿದುಕೊಂಡಿದ್ದೀರಿ. ಆದರೆ ಕಾವೇರಿ ಉಗಮವಾಗುವಂಥ ಆ ಪ್ರದೇಶವನ್ನು ಏಕೆ ನಿರ್ಲಕ್ಷ್ಯಕ್ಕೊಳಪಡಿಸಿದ್ದಾರೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಕಾವೇರಿ ಮಾತೆ ದಣಿದವರಿಗೆ ದಾಹವನ್ನು ತೀರಿಸುವುದರ ಜೊತೆಗೆ ಹಸಿದವರಿಗೆ ಹೊಟ್ಟೆ ತುಂಬಿಸುವಂಥ ಕೆಲಸವನ್ನು ಮಾಡುತ್ತಿದ್ದಾಳೆ. ಕೇವಲ ನಮ್ಮ ರಾಜ್ಯದವರಿಗೆ ಅಲ್ಲದೆ ಇತರ ಎರಡು ರಾಜ್ಯದವರಿಗೂ ಕೂಡಿ ಹಸಿದ ಹೊಟ್ಟೆಗೆ ಅನ್ನವನ್ನು ನೀಡುವ ಮಾತೆ ಆಗಿದ್ದಾಳೆ ಕಳೆದ 1996-97ನೇ ಸಾಲಿನಲ್ಲಿ ಮಡಿಕೇರಿ ಶಾಸಕರಾದಂಥ ಶ್ರೀ ಡಿ. ಎಸ್. ಮಾದಪ್ಪನವರು ಮತ್ತು ನಾವು ತಲಕಾವೇರಿ ಅಭಿವೃದ್ಧಿಗೋಸ್ಕರ ಸುಮಾರು 4 ಕೋಟಿ ರೂಪಾಯಿಯ ಅಂದಾಜು ವೆಚ್ಚದ ಅಭಿವೃದ್ಧಿ ಯೋಜನೆಯನ್ನು ಈ ಸರ್ಕಾರಕ್ಕೆ ನೀಡಿದ್ದೇವು. ಆ 4 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕು, ತಲಕಾವೇರಿ ಪ್ರದೇಶವನ್ನು ಅಭಿವೃದ್ಧಿ ಪಡಿಸಬೇಕು, ಆ ನೀರನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಪಡೆಯುತ್ತಿರುವವರಿಂದ ಯಾವುದಾದರೂ ರೂಪದಲ್ಲಿ ತಾವು ತೆರಿಗೆಯನ್ನು ಸಂಗ್ರಹ ಮಾಡುತ್ತಿದ್ದೀರಿ, ಆ ಹಣವನ್ನು ಕಾವೇರಿ ಉಗಮ ಸ್ಥಾನದ ಅಭಿವೃದ್ಧಿಯಲ್ಲಿ ತೊಡಗಿಸಿದರೆ ನಿರಂತರವಾಗಿ ಆ ಹೆಸರು ತಮ್ಮ ಸರ್ಕಾರಕ್ಕೆ ಕೂಡ ತಲುಪಲಿ ಎನ್ನುವ ಒಂದು ಭಾವನೆಯಿಂದ ಆ ಯೋಜನೆಯನ್ನು ಸರ್ಕಾರಕ್ಕೆ ಕೊಟ್ಟಿದ್ದೆವು. ಈ ಸಂದರ್ಭದಲ್ಲಿ ನಾವು ನೋವಿನಿಂದ ಹೇಳಬೇಕಾಗಿದೆ, ಕೇವಲ 50 ಲಕ್ಷ ರೂಪಾಯಿ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ. ಆದರೂ ಕೂಡ ನಾವು ಸಂತೋಷ ಪಡುತ್ತಿದ್ದೇವೆ. ಏಕೆಂದರೆ ಈ ಹಿಂದೆ ಯಾರು ಮಾಡದೇ ಇರುವಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ಆದರೆ ಮುಂದಿನ ದಿನಗಳಲ್ಲಿ ಅತಿ ಹೆಚ್ಚಿನ ಹಣವನ್ನು ತಲಾಕಾವೇರಿಗೆ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತಿದ್ದೇನೆ. ಮತ್ತೆ ಕೊಡಗು ಜಿಲ್ಲೆಯ ವಿಶೇಷತೆಯನ್ನು ಕೂಡ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ. ನಮ್ಮ ಜಿಲ್ಲೆಗೆ ಒತ್ತಿಕೊಂಡಿರುವ ಹಾಗೆ ಗಡಿನಾಡು ಕೇರಳ ರಾಜ್ಯ ಇದೆ. ಆ ಕೇರಳ ರಾಜ್ಯಕ್ಕೆ ಬೇಕಾದಷ್ಟು ದಿವಸಕ್ಕೆ ಸಾವಿರಾರು ಬಸ್‌ಗಳು ಅಥವಾ ಕಾರುಗಳು ಅಥವಾ ಜೀವಿಗಳು ಬೇಕಾದಷ್ಟು ಸಾರಿಗೆ ಸಂಪರ್ಕದವರು ಅಲ್ಲಿಗೆ ಹೋಗಿ ಬರುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಅಲ್ಲಿರುವಂತಹ ರಸ್ತೆಗಳ ದುಸ್ಥಿತಿಯನ್ನು ಸರಿಪಡಿಸುವುದಕ್ಕೆ ಹೆಚ್ಚಿನ ಹಣವನ್ನು ಈ ವರ್ಷ ನಮ್ಮ ಸರ್ಕಾರ ನೀಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಈಗ ನೀಡಿರುವಂತಹ ಹಣ ಯಾವುದಕ್ಕೂ ಸಹ ಸಾಲುವುದಿಲ್ಲ. ಅದುದರಿಂದ ದಯವಿಟ್ಟು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಇನ್ನೂ ಕೊಡಗು ಜಿಲ್ಲೆಯ ನೀರಾವರಿಯ ಬಗ್ಗೆ ನಾನು ಇಲ್ಲಿ ಪ್ರಸ್ತಾವನೆಯನ್ನು ಮಾಡಿದಂತಹ ಸಂದರ್ಭದಲ್ಲಿ ನಿಮಗೆ ಏಕೆ ನೀರು ಎನ್ನುವಂತಹ ಧಾಟಿಯಲ್ಲಿ ತಾವು ಕೂಡ ಹಾಸ್ಯಭರಿತವಾಗಿ ಹೇಳಿದ್ದೀರಿ. ಸಾಕಷ್ಟು ಮಳೆಯಾಗುತ್ತದೆ ನಿಮ್ಮ ಜಿಲ್ಲೆಯಿಂದ ನಮ್ಮ ರಾಜ್ಯಕ್ಕೆ ಅಲ್ಲದೇ ಹೊರ ರಾಜ್ಯಗಳಿಗೂ ನೀರನ್ನು ಕೊಡುತ್ತಿದ್ದೀರಿ ಎಂದು. ಆದರೆ ಅಲ್ಲಿಯ ನೀರಾವರಿಯ ಯೋಜನೆಗಲಿಗೆ ಬಹಳಷ್ಟು ಹಣವನ್ನು ನೀಡದೇ ಸಂಪೂರ್ಣವಾಗಿ ಕುಂಠಿತವಾಗಿದೆ. ಸುಮಾರು 4 ಕೋಟಿಗಳಿಗೂ ಅಧಿಕವಾಗಿ ನೀರಾವರಿ ಕಾಮಗಾರಿಯನ್ನು ನಮ್ಮ ಜಿಲ್ಲೆಯಲ್ಲಿ ನಾವು ತೆಗೆದುಕೊಳ್ಳಬೇಕಾಗಿದೆ. ಇವೊತ್ತು ಆ ನೀರಾವರಿಯ ಕಾಮಗಾರಿಗಳಿಗೆ ಯಾವುದೇ ಆದ್ಯತೆಯನ್ನು ಸಹ ಕೊಟ್ಟಿಲ್ಲ. ಹಿಂದೆ ಇದ್ದಂತಹ ಸರ್ಕಾರ ಒಂದು ಉಪ ವಿಭಾಗವನ್ನು ಕೊಡಗು ಜಿಲ್ಲೆಯಲ್ಲಿ ತೆರೆದಿತ್ತು, ಆದರೆ ಬಹುಶಃ ಯಾವ ಕಾರಣದಿಂದ ಆ ಉಪ ವಿಭಾಗ ಬೇರೆ ಜಿಲ್ಲೆಗೆ ವರ್ಗಾವಾಯಿತ್ತೋ ಗೊತ್ತಾಗುತ್ತಿಲ್ಲ. ಆದರೆ ಈ ಸದನದಲ್ಲಿ ಒಮ್ಮೆ ಪ್ರಸ್ತಾವನೆಯನ್ನು ಮಾಡಿದಂತಹ ಸಂದರ್ಭದಲ್ಲಿ ತಕ್ಷಣವೇ ಒಂದು ಉಪ ವಿಭಾಗವನ್ನು ತೆರೆಯುತ್ತೇವೆ ಎನ್ನುವಂತಹ ಭರವಸೆಯನ್ನು ನೀಡಿದರು. ಆ ಭರವಸೆಯು ನೆರವೇರಲಿಲ್ಲ ಮತ್ತೆ ಈ ಸಾರಿ ಸದನ ಸೇರಿದಂತಹ ಸಂದರ್ಭದಲ್ಲಿ ಅದೇ ಪ್ರಶ್ನೆಯನ್ನು ಹಾಕಿದಾಗ ಮತ್ತೆ ಉತ್ತರ ಬಂತು. ತಕ್ಷಣವೇ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಿದರು. ನಾನು ತಮ್ಮ ಮೂಲಕ ಈ ವಿಚಾರವಾಗಿ ಒತ್ತಾಯವನ್ನು ಮಾಡುವುದೇನೆಂದರೆ ನೀರಾವರಿಯ ಉಪ ವಿಭಾಗವನ್ನು ಆದಷ್ಟು ಶೀಘ್ರವಾಗಿ ತೆರೆದು 4 ಕೋಟಿ ರೂಪಾಯಿಗಳಿಗೂ ಅಧಿಕವಾದಂತಹ ವೆಚ್ಚ ಮಾಡಬೇಕಾಗಿರುವಂತಹ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಳ್ಳ ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗಾಗಲೇ ನಾನು ಹೇಳಿದ ಹಾಗೆಯೇ ನಮ್ಮ ಜಿಲ್ಲೆ ಗಡಿ ಪ್ರದೇಶವಾಗಿರುವುದರಿಂದ ಗಡಿನಾಡು ಅಭಿವೃದ್ಧಿಯಿಂದ ಹೆಚ್ಚಿನ ಮೊತ್ತವನ್ನು ಈ ರಸ್ತೆಗಳನ್ನು ಸರಿಪಡಿಸುವುದಕ್ಕೆ ಆಗಲಿ, ಅಥವಾ ಉತ್ತಮವಾದಂತಹ ಸೇತುವೆಗಳನ್ನು ಮಾಡಿಸುವುದಕ್ಕೆ ಆಗಲಿ, ತಾವು ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ಗಡಿನಾಡು ಅಭಿವೃದ್ಧಿಗೆ ಇಟ್ಟಿರುವುಂತಹ ಹಣ ಏನೇನಕ್ಕೂ ಸಾಲದು ಕೇವಲ ಪ್ರತಿ ವರ್ಷಕ್ಕೆ 5 ಲಕ್ಷ ರೂಪಾಯಿಗಳನ್ನು ನಮಗೆ ಕೊಡುತ್ತಾರೆ, 5 ಲಕ್ಷ ರೂಪಾಯಿಗಳಲ್ಲಿ ನಾವು ಏನು ಕೆಲಸವನ್ನು ಮಾಡುವುದಕ್ಕೆ ಆಗುತ್ತದೆ? ಯಾವುದಾದರೂ ಒಂದು ಸೇತುವೆ ದುಸ್ಥಿತಿಯನ್ನು ಮಾಡಿಸಬೇಕು ಎಂದರೂ ಆ 5 ಲಕ್ಷ ರೂಪಾಯಿಗಳಲ್ಲಿ ಸಾಧ್ಯವಾಗುವುದಿಲ್ಲ. ಆದುದರಿಂದ ಗಡಿನಾಡು ಎಲ್ಲೆಲ್ಲಿ ಇದೆಯೋ ಅಲ್ಲಿ ಎಲ್ಲ ಸಮರ್ಪಕವಾದಂತಹ ರಸ್ತೆಯ ವ್ಯವಸ್ಥೆ ಮತ್ತು ಸೇತುವೆಯ ವ್ಯವಸ್ಥೆಗೆ ಆದ್ಯತೆಯನ್ನು

ನೀಡಬೇಕು ಎಂದರೆ ಅತಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಅದಕ್ಕೆ ಸರ್ಕಾರ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ವಿಶ್ವದಲ್ಲಿಯೇ ಪ್ರಸಿದ್ಧವಾದಂತಹ ಒಂದು ನಾಗರಹೊಳೆ ಅರಣ್ಯವನ್ನು ನಾವು ಹೊಂದಿರುತ್ತೇವೆ. ಆ ನಾಗರಹೊಳೆ ಅರಣ್ಯವನ್ನು ವೀಕ್ಷಿಸಲು ಬೇಕಾದಷ್ಟು ಜನರು ಬರುತ್ತಾರೆ. ಇವೊತ್ತು ನಾಗರಹೊಳೆ ಅರಣ್ಯಕ್ಕೆ ಇಷ್ಟೊಂದು ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆ. ಆ ಅರಣ್ಯವನ್ನು ಸಂರಕ್ಷಿಸಬೇಕು, ಆ ಅರಣ್ಯದಲ್ಲಿರುವ ಪ್ರಾಣಿಗಳನ್ನು ಸಂರಕ್ಷಿಸಬೇಕು ಇದು ನಮ್ಮ ಆದ್ಯತೆ. ಆದರೆ ತಲಾತಲಾಂತರದಿಂದ ನೂರಾರು ವರ್ಷಗಳಿಂದ ಬದುಕಿ ಬಾಳಿದಂತಹ ಆ ನಾಗಹೋಳೆಯಲ್ಲಿರುವ ಗಿರಿಜನರ ಬಗ್ಗೆ ಸರ್ಕಾರ ಯಾವುದೇ ಒಂದು ಯೋಚನೆಯನ್ನು ಮಾಡಲಿಲ್ಲ. ಒಂದು ಕನಿಷ್ಟ, ಒಬ್ಬ ಮನುಷ್ಯ ಬದುಕಬೇಕು ಎಂದರೆ ಮೂಲ ಮಾಡಲಿಲ್ಲ. ಒಂದು ಕನಿಷ್ಟ, ಒಬ್ಬ ಮನುಷ್ಯ ಬದುಕಬೇಕು ಎಂದರೆ ಮೂಲ ಭೂತ ಸೌಕರ್ಯಗಳಾದಂತಹ ನೀರೇ ಆಗಲಿ, ಅಥವಾ ಒಂದು ಸೂರನ್ನೇ ಆಗಲಿ ಕಲ್ಪಿಸುವಂತಹ ಕೆಲಸವನ್ನು ಹಿಂದೆ ಇದ್ದಂತಹ ಸರ್ಕಾರ ಕೂಡ ಮಾಡಲಿಲ್ಲ, ಈಗ ಇರುವಂತಹ ಸರ್ಕಾರ ಕೂಡ ಇದನ್ನು ಮಾಡುವುದಕ್ಕೆ ಪ್ರಯತ್ನವನ್ನು ಪಡುತ್ತಿಲ್ಲ. ಇದರ ಬಗ್ಗೆ ನಾನು ನೊಂದುಕೊಂಡು ಹೇಲುತ್ತಿದ್ದೇನೆ ಅರಣ್ಯ ಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಅಲ್ಲಿಗೆ ಬೇಟಿಯನ್ನು ನೀಡಿದ್ದಾರೆ ಅದರೆ ಅವರ ಅಂದರೆ ಗಿರಿಜನರ ಮನಸ್ಸನ್ನು ಒಲಿಸುವಂತಹ ಯಾವುದೇ ರೀತಿಯ ಪ್ರಯತ್ನವನ್ನು ಮಾಡಲಿಲ್ಲ. ಬರುತ್ತಾರೆ, ಭೇಟಿಯನ್ನು ಮಾಡುತ್ತಾರೆ, ಮತ್ತೆ ಅವರ ಸಮೀಕ್ಷೆ ಮಾಡಿದ್ದನ್ನು ಬೆಂಗಳೂರಿಗೆ ಹೋದ ನಂತರ ತಿಳಿಸುತ್ತೇವೆಂದು ಹೇಳಿ ಹೋಗುತ್ತಾರೆ. ಆದರೆ ಈ ರೀತಿಯ ಭೇಟಿಗಳನ್ನು ಮಾಡುವುದರ ಬದಲು ನಿಜವಾಗಿಯೂ ಈ ಸರ್ಕಾರಕ್ಕೆ ಆ ಗಿರಿಜನರ ಬಗ್ಗೆ ಕಾಳಜಿ ಇದ್ದರೆ. ಆ ಗಿರಿಜನರನ್ನು ನಾವು ಸಂರಕ್ಷಿಸುತ್ತೇವೆ. ಎಲ್ಲಾ ಸಮಾಜದಲ್ಲಿರುವಂತಹ ಸಮಾನ ನಾಗರಿಕ ಹಕ್ಕುಗಳನ್ನು ಅವರಿಗೆ ದೊರೆಯುವಂತೆ ಮಾಡುತ್ತೇವೆ ಎನ್ನುವಂತಹ ಪ್ರಯತ್ನವನ್ನು ಈ ಸರ್ಕಾರದವರು ಇವತ್ತಾದರೂ ಪ್ರಾರಂಭ ಮಾಡಲಿ. ಏಕೆಂದರೆ ಸರ್ಕಾರ ಅಧಿಕಾರಕ್ಕೆ ಒಂದು ಎರಡು ವರ್ಷಕ್ಕೂ ಅಧಿಕವಾಯಿತು , ಇವತ್ತಾದರೂ ಪ್ರಾರಂಭ ಮಾಡಿದರೆ ಮುಂದಿನ ದಿನಗಳಲ್ಲಿ ಅವರ ಬದುಕಿನಲ್ಲಿ ಆಸಾಕಿರಣ ಬರುತ್ತದೆ. ಆಶಾಕೀರಣಗಳನ್ನು ನೆನಸಿಕೊಳ್ಳುವಾಗ ಪ್ರತಿಸಾರಿಯೂ ನೆನಪು ಮಾಡಿಕೊಂಡು ಬದುಕತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಸಲುವಾಗಿ ಈ ಒಂದು ಸರ್ಕಾರ ಈ ಸಾರಿಯಾದರೂ ಹೆಚ್ಚಿನ ಹಣವನ್ನು ಮೀಸಲು ಇಡಬೇಕು ಮತ್ತೆ ಅದನ್ನು ಕಾರ್ಯಗತ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ಪರಿಶಿಷ್ಟ

ಜಾತಿ ಮತ್ತು ಪಂಗಡದವರ ಬಗ್ಗೆ ಒಂದೆರಡು ಅಂಶಗಳನ್ನು ಉಲ್ಲೇಖಿಸುವುದು ಇಲ್ಲಿ ಅಗತ್ಯವೆಂದು ನಗೆ ಅನ್ನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ನಾಗರಹೊಳೆ ಅಬ್ಯಾರಣ್ಯದಲ್ಲಿ ಗುಡ್ಡಾಗಾಡಿನ ಜನರು ಇದ್ದಾರೆ, ಗಿರಿಜನರು ಇದ್ದಾರೆ. ಅವರು ವಾಸ ಮಾಡತಕ್ಕಂತಹ ರೀತಿ ನೀತಿಗಳು ಇಂದಿಗೂಅದೇ ರೀತಿಯಲ್ಲಿದೆ ಯಾವುದೇ ರೀತಿಯಲ್ಲಿಯೂ ಬದಲಾವಣೆಯಾಗಿಲ್ಲ. ಇವರನ್ನು ಸ್ಥಳಾಂತರಿಸಬೇಕು ಮತ್ತು ಅವರಿಗೆ ಪುನರ್ ವಸತಿಯನ್ನು ಕಲ್ಪಿಸಿಕೊಡ ಬೇಕೆಂದು ಹೇಳಿ ಹುಣಸೂರು ತಾಲ್ಲೂಕಿನಲ್ಲಿ ಕೆಲವು ಜಮೀನುಗಳನ್ನು ಗುರುತು ಮಾಡಿದ್ದಾರೆ. ಆದರೆ ಆ ಜನರು ಅಲ್ಲಿಗೆ ಬರುವುದಕ್ಕೆ ಸಿದ್ದರಿಲ್ಲ. ಏಕೆಂದರೆ ನಾನು ಒಂದು ಸಾರಿ ಅದನ್ನು ವಿಮರ್ಶೆ ಮಾಡಿ ನೋಡಿದೆ. ಅವರಿಗೋಸ್ಕರವಾಗಿ ಕಾದಿರಿಸಿರತಕ್ಕಂತಹ ಜಮೀನು ಹುಣಸೂರು ತಾಲ್ಲೂಕಿನಲ್ಲಿದೆ ಬಾರ್ಡರ್ ಗಡಿ ಪ್ರದೇಶದಲ್ಲಿ ಬರುತ್ತದೆ. ತಾವು ಈ ನಿಟ್ಟಿನಲ್ಲಿ ಅವರ ಮನವೊಲಿಸಿದರೆ, ಅವರನ್ನು ಅಗತ್ಯವಾದಂತಹ ರೀತಿಯಲ್ಲಿ, ಅದಕ್ಕೆ ನಾನು ಹೋದಾಗ ಕೂಡ ಪುನರ್ ವಸತಿ ಎಂದು ಹೇಳಿದರೆ ಕೆಲವು ಅಭ್ಯಾಸಗಳು ಇದೆ, ಒಂದು ರಸ್ತೆ ಮಾಡಿಸುವುದು, ಒಂದು ಶಾಲೆಯನ್ನು ಕಟ್ಟಿಸಿಕೊಡುವುದು ಅದು ಆಗುವುದಿಲ್ಲ, ಈಗಿನ ನೀತಿಯಲ್ಲಿ ಅದಕ್ಕೆ ಭೂಮಿ ಕೃಷಿಗೆ, ಮತ್ತು ನೀರಿಗೆ ಎಲ್ಲಾ ವ್ಯವಸ್ಥಿತವಾದಂತಹ ಕಾಲೋನಿಗಳನ್ನು ಮಾಡಿ ಅವರನ್ನು ಪುನರ್ ವಸತಿ ಮಾಡತಕ್ಕಂತಹ ಕೆಲಸವನ್ನು ಮಾಡಿದರೆ ಮಾನ್ಯ ಸದಸ್ಯರಾದವರು ಇವೊತ್ತು ಆ ಪ್ರದೇಶದ ಜನರನ್ನು ಮನವೊಲಿಸಿದರೆ ಅಂತಹ ಕಡೆ ತಂದು ಹಾಕಬಹುದಲ್ಲಾ ಏಕೆಂದರೆ ಕೆಲವು ಸೇವಾ ಸಂಸ್ಥೆಗಳು ಏನು ಮಾಡುತ್ತಿವೆ ಎಂದರೆ ಅವರುಗಳು ಅಲ್ಲಿಯೇ ಇರಬೇಕು. ಅವರಿಗೆ ಪರಂಪರಾಗತವಾಗಿ ಬಂದಂತಹ ಸಾಂಸತಿಕ ಜೀವನ ಕಳಚಿ ಬೀಳಾಬಾರದು ಎನ್ನುವಂತಹ ಒತ್ತಾಯ ಒಂದು ಕಡೆ ಇದೆ. ಒಂದು ಕಡೆ ಪುನರ್ ವಸತಿ ಮಾಡಬೇಕು ಎನ್ನುವುದು ಇದೆ ಈಗ ನಾವು ಒಂದು ಅಲ್ಲ ಒಂದು ಕಾಲದಲ್ಲಿ ಇಂತಹ ಗುಡ್ಡಗಾಡಿನ ಕಾಡಿನಲ್ಲಿಯೇ ಜೀವನ ಮಾಡಿರತಕ್ಕಂತಹ ಪರಿಸ್ಥಿತಿಯನ್ನು ನೋಡಿದ್ದೇವೆ. ಇನ್ನು ನಾವು ಆ ರೀತಿಯ ಜೀವನದಲ್ಲಿಯೇ ಇರಬೇಕು ಎನ್ನತಕ್ಕಂತಹ ಅಪೇಕ್ಷೆ ನಮ್ಮಂಥ ವಿದ್ಯಾವಂತರಾಗಿ ಬಂದ ಮೇಲೆ ಒಪ್ಪುವುದಕ್ಕೆ ಸಾಧ್ಯವಿಲ್ಲ. ನಾವೂ ಕೂಡ ನಾಗರೀಕ ಜೀವನವನ್ನು ಅನುಸರಿಸಿರತಕ್ಕಂಥದ್ದು ಸ್ವಾಭಾವಿಕವಾಗಿ ತಿಳಿದು ಬಂದಿರತಕ್ಕಂತಹ ವಿಚಾರ. ಅದಕ್ಕೆ ಮಾನ್ಯ ಶ್ರೀ ಹೆಚ್. ಡಿ. ಬಸವರಾಜುರವರಲ್ಲಿ ವಿನಂತಿಯನ್ನು ಏನು ಮಾಡಿ ಕೊಳ್ಳುತ್ತೇನೆಂದರೆ ತಮ್ಮಂಥವರು ಅವರಿಗಾಗಿ ಕಾದಿರಿಸಿರತಕ್ಕಂತಹ ಭೂಮಿ ವಗ್ಯೆರೆ ಏನಿದೆ ಅಲ್ಲಿಗೆ ಅವರುಗಳು ಹೋಗುವುದಕ್ಕೆ ಪ್ರೇರೆಪಣೆ ಮಾಡಿದರೆ ಅದಕ್ಕೆ ಬೇಕಾದಂತಹ ಪುನರ್ ವಸತಿಯ

ಕಾರ್ಯಕ್ರಮವನ್ನು ತಮ್ಮ ಅನಿಸಿಕೆಯ ಪ್ರಕಾರವೇ ರೂಪುಗೊಳಿಸಿ ಕಾರ್ಯಗತ ಮಾಡುವುದಕ್ಕೆ ತಾವು ಸರ್ಕಾರವನ್ನು ಏಕೆ ಒತ್ತಾಯಿಸಬಾರದೆಂದು ನನಗೆ ಅನಿಸಿತು.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಿಚಾರವನ್ನು ಹೇಳಿದರು ಪುನರ್ ವಸತಿ ಬಗ್ಗೆ ಅಲ್ಲಿಯ ಗಿರಿಜನರು ಯಾವುದೇ ಪ್ರತಿಕ್ರಿಯೆಗೆ ಸ್ಪಂದಿಸಲಿಲ್ಲ, ಅಭಿಪ್ರಾಯ ವ್ಯಕ್ತಿಪಡಿಸಲಿಲ್ಲವೆಂದು. ಆದರೆ ಅಲ್ಲಿ ಆಗಿರತಕ್ಕಂತಹ ಅನಾಹುತವನ್ನು ಹೇಳಿದರೆ ನಾವು ಕಣ್ಣೀರು ಹಾಕಬೇಕಾಗುತ್ತದೆ. ಅಲ್ಲಿರತಕ್ಕಂತಹ ಗಿರಿಜರನ್ನು ನಾಗರಹೊಳೆಯಿಂದ ಬೇರೆ ಕಡೆಗೆ ಕರೆದುಕೊಂಡು ಬರುವುದಕ್ಕೆ ಪ್ರಯತ್ನವನ್ನು ಏನೋ ಮಾಡಿದ್ದಾರೆ, ಹಾಗೆ ಪ್ರಯತ್ನವನ್ನು ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಎಂತಹ ಪ್ರಯತನ್ವನ್ನು ಮಾಡಿದ್ದಾರೆಂದರೆ ನಾನು ಹೇಳುವುದಿಲ್ಲ. ಆದರೆ ಎಂತಹ ಪ್ರಯತ್ನವನ್ನು ಮಾಡಿದ್ದಾರೆಂದರೆ ದುರಂತದ ಪ್ರಯತ್ನವನ್ನು ಮಾಡಿದ್ದಾರೆ. ನಾಗರಹೊಳೆಯಲ್ಲಿರತಕ್ಕಂತ ಮುಗ್ಧ ನಿವಾಸಿಗಳನ್ನು ಕರೆದುಕೊಂಡು ಬಂದು ನಿಮಗೆ ಪ್ರತಿ ಸೌಲಭ್ಯ ಸೌಕರ್ಯವನ್ನು ನೀಡುತ್ತೇವೆಂದು ಹೇಳಿ ಅವರು ಇವೊತ್ತು ಬೀದಿ ಬೀದಿ ಅಲೆಯುವಂತಹ ಒಂದು ಅಲೆಮಾರಿ ಜನಾಂಗವನ್ನಾಗಿ ಸೃಷ್ಟಿ ಮಾಡಿದ್ದಾರೆ. ಇವೊತ್ತು ಕಾಡಿನಲ್ಲಿದ್ದಂತಹ ಜನಾಂಗ ಹೊರಗಡೆ ಬಂದರೆ ಪುನರ್ ಪುನರ್ ವಸತಿಯನ್ನು ಕಲ್ಪಿಸುತ್ತೇವೆ, ಮನೆಯನ್ನು ಕೊಡುತ್ತೇವೆ, ಜೊತೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಜೊತೆಗೆ ನಿಮಗೆ ಸಾಕಷ್ಟು ಭೂಮಿಯನ್ನು ಕೊಡುತ್ತೇವೆಂದು ನಂಬಿಸಿ ಒಮ್ಮೆ ನಾನು ಅವರನ್ನು ಕರೆದುಕೊಂಡು ಬಂದ ನಂತರ, ಆ ಜನರನ್ನು ಅಲೆಮಾರಿಗಳನ್ನಾಗಿ ಬಿಟ್ಟ ನಂತರ ಮತ್ತೆ ಅಲ್ಲಿರುವಂತಹ ಮುಗ್ಧ ನಿವಾಸಿಗಳು ನಮ್ಮ ಮೇಲೆ ನಂಬಿಕೆಯನ್ನು ಇಡುತ್ತಾರಾ? ನಾವು ಯೋಜನೆಯನ್ನು ಮಾಡಬೇಕಾಗಿದೆ ಅವರ ಪರವಾಗಿ ನಾವೇನಾದರೂ ಒಂದೇ ಒಂದು ಕೆಲಸವನ್ನು ಮಾಡಿದ್ದರೆ ನಮ್ಮನ್ನು ಬಹುಶಃ ನಂಬುತ್ತಿದ್ದರು, ಆದರೆ ಒಂದೇ ಒಂದು ಕೆಲಸವನ್ನು ಇವೊತ್ತು ಮಾಡಿಲ್ಲ. ಅವರಿಗೆ ಕುಡಿಯುವಂತಹ ನೀರನ್ನು ಒದಗಿಸುವುದಕ್ಕೆ ನಾವು ಅಸಮರ್ಥರಾಗಿದ್ದೇವೆ. ನಿಮ್ಮ ಸರ್ಕಾರದ ಯೋಜನೆಗಳು ಎಲ್ಲಿ ಹೋಯಿತು? ಅವರಿಗಾಗಿ ಮುಡುಪಿಟ್ಟ ಹಣ ಏನಾಯಿತು? ಅದರ ಬಗ್ಗೆ ಯಾವುದೇ ಒಂದು ಸರ್ಕಾರ ಚಕಾರವನ್ನು ಎತ್ತಿಲ್ಲ. ಅದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅವರ ಒಂದು ಸಮೀಕ್ಷೆ ಮಾಡಿ. ನಾಗರಹೊಳೆ ಅರಣ್ಯದಿಂದ ಬಂದಂಥ ವ್ಯಕ್ತಿಗಳ ಕುಟುಂಬಗಳು ಎಷ್ಟಿವೆ ಅವರಿಗೆ ಪುನರ್‌ವಸತಿ ಮಾಡಿ. ಮೊದಲು ಆ ಒಂದು ಕೆಲಸ ಮಡಿ ಈ ಅರಣ್ಯದೊಳಗೆ ಇರತಕ್ಕ ಮುಗ್ದ ಗಿರಿಜನರ ಮನ ಒಳಿಸುವ ಕೆಲಸವನ್ನು

ಮಂದೆ ಮಾಡೋಣ. ಆ ಪ್ರಯತ್ನ ಮಾಡದೆ ಅಲೆಮಾರಿಗಳನ್ನಾಗಿ ಅವರನ್ನು ಬಿಟ್ಟು, ನಾವು ನಿಮಗೋಸ್ಕರ ಇಷ್ಟು ಮಾಡಿದ್ದೇವೆ, ನೀವು ಬನ್ನಿ ಎಂದರೆ ಬರುತ್ತಾರೆಯೆ? ಅದುದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾವು ಅವರಿಗೆ ಪ್ರಾಮಾಣಿಕವಾಗಿ ಒಳ್ಳೆಯದು ಮಾಡಿದರೆ ಖಂಡಿತವಾಗಿ ಮುಗ್ಧ ಜನರು ಮತ್ತು ನಾಗರೀಕರಾಗಿ ಬಾಳಬೇಕೆಂದು ಬಯಸುತ್ತಿರುವವರು ಖಂಡಿತ ಪುನರ್‌ವಸತಿಗೆ ಒಪ್ಪಿಕೊಳ್ಳಬಹುದೆಂದು ನನ್ನ ಭಾವನೆ ಇದೆ. ಪುನರ್‌ವಸತಿಗೆ ಅವರನ್ನು ಒಪ್ಪಿಸುವುದು ಬಹಳಷ್ಟು ಕಷ್ಟ ಇದೆ. ಏಕೆಂದರೆ ಸರ್ಕಾರ ಮಾಡಿದಂಥ ಈ ಅನಾಚಾರದಿಂದ, ದುರಂತದಿಂದ ಅವರು ದುರಂತದ ಬಾಳನ್ನು ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ.

ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಮ್ಮ ಜನತಾ ದಳದ ಸರ್ಕಾರ ಬಂದನಂತರ ಯಾವ ರೀತಿ ಅವರ ಸಲುವಾಗಿ ಹಣವನ್ನು ಮುಡುಪಿಟ್ಟಿದೆ ಎಂಬುದನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 1995-96ನೇಸಾಲಿನಲ್ಲಿ 195 ಕೋಟಿ 98 ಲಕ್ಷ ರೂಪಾಯಿ ಹಣವನ್ನು ಮೀಸಲಿಟ್ಟಿದೆ, 1996-97ರಲ್ಲಿ 168 ಕೋಟಿ 76 ಲಕ್ಷ ರೂಪಾಯಿಗಳು. ಅಂದರೆ ಎಷ್ಟು ಹಣವನ್ನು ಕಡಿಮೆ ಮಾಡಿದೆ ಎಂಬುದನ್ನು ಇವರು ಯೋಜನೆ ಮಾಡಿದ್ದಾರೆಯೇ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಷ್ಟು ಬೇಗ ಉದ್ಧಾರವಾಗಿ ಹೋಗಿದ್ದಾರೆಯೇ ಅಥವಾ ಅವರಿಗೆ ಅಷ್ಟೊಂದು ಹಣವನ್ನು ಮೀಸಲಿರಿಸುವುದು ಬೇಡ ಎಂಬ ಅಭಿಪ್ರಾಯಕ್ಕೆ ಬಂದರೋ ಗೊತ್ತಿಲ್ಲ. 1997-98ರ ಬಗ್ಗೆ ಯೋಜನೆ ಮಾಡಿದರೆ ಅವರ ಸಲುವಾಗಿ ಮೀಸಲಿಟ್ಟಿರುವ ಹಣ 153 ಕೋಟಿ ರೂಪಾಯಿಗಳು. ಅಂದರೆ ಪ್ರತಿ ವರ್ಷ ಈ ಜನಾಂಗದವರ ಸಲುವಾಗಿ ನೀವು ಬಹಳಷ್ಟು ಅಭಿವೃದ್ಧಿ ಮಾಡುತ್ತಿದ್ದವೆಂದು ಹೇಳುತ್ತಿದ್ದೀರೇ ಹೊರತು ಯಾವ ರೀತಿ ಮಾಡುತ್ತಿದ್ದೀರಿ? ಹಣ ಮೀಸಲಿರಿಸುವುದು ಇರಲಿ, ಮೀಸಲಿರಿಸಿದ ಹಣದಲ್ಲಿ ಕೂಡ ನೀವು ಕಡಿತ ಮಾಡಿಕೊಂಡು ಬರುತ್ತಿದ್ದರೆ ನಿಜವಾಗಿ ಆ ಜನಾಂಕದ ಬಗ್ಗೆ ನಿಮಗೆ ಎಷ್ಟು ಕಾಳಜಿ ಇದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಅದಕ್ಕಿಂತ ಹೆಚ್ಚಾಗಿ ಇನ್ನೊಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 1995-96ರಲ್ಲಿ ಮೀಸಲಿಟ್ಟಿದ್ದು 195.98 ಕೋಟಿ ರೂಪಾಯಿಗಳಿಗೂ ಜಾಸ್ತಿ ಇರಬಹುದು. ಆದರೆ ಖರ್ಚು ಮಾಡಿದ್ದು ಮಾತ್ರ 186.14 ಕೋಟಿ ರೂಪಾಯಿಗಳು. ಅಂದರೆ ಮೀಸಲಿಟ್ಟ ಹಣದಲ್ಲಿ ಪೂರ್ತಿ ಭಾಗವನ್ನು ವೆಚ್ಚ ಮಾಡಲಿಲ್ಲ. ಇದನ್ನು ನಾವು ನೆನಸಿಕೊಂಡರೆ ಈ ಸರ್ಕಾರಕ್ಕೆ ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡದ ಬಗ್ಗೆ ಎಷ್ಟು ಕಾಳಜಿ ಇದೆ ಎಂಬುದು ತಿಳಿಯುತ್ತದೆ. ಅಂದರೆ 9.83 ಕೋಟಿ ರೂಪಾಯಿ ಹಣವನ್ನು ಇವರು ಖರ್ಚು ಮಾಡಲಿಲ್ಲ. ಈ ಒಂದು ಇಲಾಖೆಯಲ್ಲಿರತಕ್ಕ ವ್ಯಕ್ತಿಗಳು ಯೋಜನೆಯನ್ನು ಏನು ತಯಾರು ಮಾಡುತ್ತಿದ್ದಾರೆ ಅವರೇ ಈ ಜನಾಂಗಕ್ಕೋಸ್ಕರ ಎಷ್ಟು ಹಣ ಬೇಕೆಂಬ ಅಂದಾಜನ್ನು ಸರ್ಕಾರಕ್ಕೆ ತಿಲಿಸುತ್ತಾರೆ, ಆದರೆ ಅದೇ ವ್ಯಕ್ತಿಗಳು ಸರ್ಕಾರ ಮೀಸಲಾಗಿಟ್ಟು ಹಣವನ್ನು ತಂದು ಆ ಜನಾಂಗವನ್ನು ಉದ್ಧಾರ ಮಾಡುವ ಕೆಲಸ ಮಾಡುವುದಿಲ್ಲ ಅಂದರೆ ಇದು ಅಧಿಕಾರಿಗಳ ವೈಫಲ್ಯತೆಯಿಂದ ಹಣ ವೆಚ್ಚವಾಗಿಲಿಲ್ಲವೆಂದು ನಾನು ನೇರವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನೀವು ಈ ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳನ್ನು ಶಿಕ್ಷಿಸುವ ಕೆಲಸ ಬೇಕಾಗುತ್ತದೆ. ನೀವು ವೈಫಲ್ಯಕ್ಕೆ ಕಾರಣರಾದ ಅಧಿಕಾರಿಗಳನ್ನು ಶಿಕ್ಷಿಸುವ ಕೆಲಸ ಮಾಡಲಿಲ್ಲ. ಎಷ್ಟು ಹಣ ಮೀಸಲಿಟ್ಟಿದ್ದೇವೆ ಅದು ಯಾವುದೇ ಕಾರಣಕ್ಕೂ ಉಳಿಕೆ ಆಗಬಾರದು ಉಳಿಕೆಯಾದರೆ ನೇರವಾದ ಹೊಣೆಗಾರರು ನೀವು ಆಗುತ್ತೀರಿ, ನಿಮ್ಮ ಮೇಲೆ ನೇರವಾಗಿ ಶಿಕ್ಷೆ ಕೈಗೊಳ್ಳುತ್ತೇವೆಂಬ ಕ್ರಮವನ್ನು ಸರ್ಕಾರದವರು ಮಾಡಿದ್ದಾರೆ ಬಹುಶಃ 1995-96ರಲ್ಲಿ ಹಣ ಉಳಿಕೆಯಾಗುತ್ತಿರಲಿಲ್ಲ. ಮತ್ತೆ 1996-97ರ ಒಂದು ಅಂಕಿ ಅಂಶವನ್ನು ನೋಡಿದರೆ ತಾವು ಶೋಜಿಗಪಡುತ್ತೀರಿ. ಮೀಸಲಿಟ್ಟ ಹಣ 168.76 ಕೋಟಿ ರೂಪಾಯಿಗಳು, ಇವರು ಖರ್ಚು ಮಾಡಿದ ಹಣ ಡಿಸೆಂಬರ್‌ವರೆಗೆ ಕೇವಲ 70 ಕೋಟಿ ರೂಪಾಯಿಗಳು. 70 ಕೋಟಿ ರೂಪಾಯಿಗಳು ಅಂದಾಗ ನಾವು ಯೋಚನೆ ಮಾಡಬೇಕಾಗುತ್ತದೆ. ಇನ್ನು ಉಳಿದ 3 ತಿಂಗಳಲ್ಲಿ ಮಿಕ್ಕ ಸುಮಾರು 99 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತಾರೆಯೇ? ಏಕೆಂದರೆ ಹಿಂದಿನ ಒಂದು ಪ್ರಗತಿಯನ್ನು ನೋಡಿದಾಗ ಹಣ ಮೀಸಲಿರಿಸುವುದು ಒಂದು ಪದ್ಧತಿಯಾಗಿದೆ. ಅದನ್ನು ಖರ್ಚು ಮಾಡದೆ ಇರುವಂಥ ಒಂದು ರೀತಿಯ ಉದಾಸೀನ ಮನೋಭಾವ ಈ ಇಲಾಖೆಯಲ್ಲಿ ಜಡ್ಡುಗಟ್ಟಿ ಹೋಗಿದೆ. ಅದ್ದರಿಂದ ಈ ಇಲಾಖೆಯನ್ನು ಸಂಪೂರ್ಣ ಪುನಶ್ಚೇತನ ಮಾಡಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ, ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟ ಹಾಗೆ ಆಗುತ್ತದೆ. ಏಕೆಂದರೆ ಮೀಸಲಿಟ್ಟ ಹಣವನ್ನು ಖರ್ಚು ಮಾಡುವುದಿಲ್ಲ ಮತ್ತು ಅದರ ಜೊತೆಗೆ ಪ್ರತಿ ವರ್ಷ ಹಣವನ್ನು ಕೂಡ ಕಡಿತ ಮಾಡುತ್ತಿದ್ದೀರಿ. ಅವರು ಏನು ಮಾಡುತ್ತಾರೆ, ಯಾವ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡದೆ ನಿರ್ಲಕ್ಷ್ಯತೆ ವಹಿಸಿ ಅವರು ಯಾವುದೇ ಅಭಿವೃದ್ಧಿ ಕಾರ್ಯವನ್ನು ಮಾಡುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನೊಂದು ವಿಷಯವನ್ನು ಮನಸ್ಸು ನೊಂದು ಹೇಳುತ್ತಿದ್ದೇನೆ. ಕೆಲವು ಅನುಪಯುಕ್ತವಾಗತಕ್ಕ ಕೆಲಸಕಾರ್ಯಗಳಿಗೆ ಈ ಹಣವನ್ನು ಖರ್ಚು ಮಾಡಲಿಕ್ಕೆ ಈ ಸಲ ಸರ್ಕಾರಕ್ಕೆ ಇಷ್ಟವಿಲ್ಲ.

ಇದನ್ನು ಯಾರು ಹೇಳುತ್ತಾರೆ ಗೊತ್ತೆ? ನಮ್ಮ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳು ಹೇಳುತ್ತಿದ್ದಾರೆ. ಅಂದರೆ 1995-96ರಲ್ಲಿ ಈ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿತ್ತು ಆ ಯೋಜನೆಗಳು ಅನುಪಯುಕ್ತವೆಂದು 1996-97ರಲ್ಲಿ ಹೇಳುತ್ತಾರೆ. ಅದೂ ಕೂಡ ಅದೇ ಸರ್ಕಾರದ ಮಂತ್ರಿಗಳು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಸರಿಯಾಗುತ್ತದೆ, ಈ ಸರ್ಕಾರದವರೇ ರೂಪಿಸಿದಂಥ ಮತ್ತು ಹಿಂದಿ ಮಂತ್ರಿಗಳು ಮಾಡಿದ್ದನ್ನು ಬದಲಾದ ಮಂತ್ರಿಗಳು ಹೇಳುತ್ತಾರೆ, ಇದು ನಿರುಪಯುಕ್ತ ಕೆಲಸ ಎಂದು. ಅಂದರೆ ಉಪಯುಕ್ತ ಕೆಲಸ ಯಾವುದು ಇದೆ? ಅದನ್ನು ತಾವು ಯೋಚನೆ ಮಾಡಬೇಕಾಗಿದೆ. ಇವರು ಬಂದ ಮೇಲೆ ಅದನ್ನು ಏತಕ್ಕೆ ಮಾಡಲಿಲ್ಲ? ವರ್ಷದ ಕೊನೆಯಲ್ಲಿ ಮಾಡುತ್ತಾರೆ. 24 ಇಲಾಖೆಗಳಲ್ಲಿರುವ ಹಣವನ್ನು ತಗೆದು ಕೇವಲ 3 ಇಲಾಖೆಗಳಿಗೆ ಹಂಚುತ್ತಾರೆ. ಅಂದರೆ 24 ಇಲಾಖೆಗಳಲ್ಲಿ ಅಲ್ಪಸ್ವಲ್ಪ ಹಣ ಇದ್ದುದನ್ನು ನೀವು ಖರ್ಚು ಮಾಡಿದೆ ಇದ್ದವರು 24 ಇಲಾಖೆಗಳಲ್ಲಿ ಅಲ್ಪಸ್ವಲ್ಪ ಹಣ ಇದ್ದುದನ್ನು ನೀವು ಖರ್ಚು ಮಾಡದೆ ಇದ್ದವರು 3 ಇಲಾಖೆಗಳಿಗೆ ವರ್ಗಾವಣೆ ಮಾಡಿದರೆ ಹೇಗೆ? 117 ಕೋಟಿ ರೂಪಾಯಿ ಹಣವನ್ನು ಈ ರೀತಿ ವರ್ಗಾವಣೆ ಮಾಡಿದ್ದಾರೆ. ಈ ರೀತಿ ವರ್ಗಾವಣೆ ಮಾಡುವುದಕ್ಕೆ ಮುಂಚೆ ಈ ಸದನವನ್ನು ಗೌರವಿಸಿ, ಈ ಸದನದಲ್ಲಿ ಮಂಜೂರಾತಿ ಪಡೆದುಕೊಂಡಿರಾ? ಇಲ್ಲ. ಆ ಇಲಾಖೆಗಳಲ್ಲಿರತಕ್ಕ ಹಣ ಖರ್ಚಾಗಲಿಲ್ಲವೆಂದರೆ ಅದಕ್ಕೆ ನೇರವಾದ ಹೊಣೆ ಯಾರು ಅಧಿಕಾರಿಗಳು. ಅವರನ್ನು ಮೊದಲು ಶಿಕ್ಷಿಸಿ. ಅವರು ಫಲಾನುಭವಿಗಳನ್ನು ಹುಡುಕುವುದರಲ್ಲಿ ನಿಷ್ಕ್ರಿಯರಾಗಿದ್ದಾರೆ. ಅವರು ಫಲಾನುಭವಿಗಳನ್ನು ಹುಡುಕುವುದಕ್ಕೆ ಇಷ್ಟವಿಲ್ಲ. ಅವರು ಕೆಲವು ಟಿಪ್ಪಣಿಗಳನ್ನು ತಮಗೆ ನೀಡುತ್ತಾರೆ. ಆ ಟಿಪ್ಪಣಿಯಗಳನ್ನನುಸರಿಸಿ ತಾವು ಏನು ಮಾಡುತ್ತೀರಿ? ಹಣ ಖರ್ಚಾಗದೆ ಇರುವುದನ್ನು ನೀರು ಬೇರೆ ರೀತಿಯಲ್ಲಿ ಬೇರೆ ಯಾವುದೇ ಒಂದು ಇಲಾಖೆಯ ಮೂಲಕ ಖರ್ಚು ಮಾಡೋಣ ಎಂಬ ರೀತಿಯಲ್ಲಿ ತಾವು ಖರ್ಚು ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಿ. ಇದನ್ನು ನಾವು ನೊಂದುಕೊಂಡು ಹೇಳಬೇಕಾಗಿದೆ. ಇದರಿಂದ ನೀವು ಸಫಲರಾಗುವುದಿಲ್ಲ. ಈ ಜನಾಗಂವನ್ನು ಖಂಡಿತವಾಗಿ ಮೇಲೆತ್ತುವುದಕ್ಕೆ ಸಾಧ್ಯವಾಗುವುದಿಲ್ಲ. 1995-96ರ ಕೆಲವು ಅಂಕಿಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಹತ್ತಿರ ಇರುವ ಎಲ್ಲಾ ಮಾಹಿತಿಯನ್ನು ಓದುತ್ತಾ ಕುಳಿತರೆ ಸರ್ಕಾರ ಮಾಡಿರುವ ಅನ್ಯಾಯವನ್ನು ಸಹಿಸುವುದಕ್ಕಾಗುವುದಿಲ್ಲ. ಅವರು ಅನ್ಯಾಯ ಮಾಡಿ ಹೋಗಿದ್ದಾರೆ. ಅದರಲ್ಲಿ ಒಂದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೀರೆ ಮತ್ತು ಧೋತಿ ಎಂಬ ಒಂದು ಯೋಜನೆ ಇತ್ತು 7.71 ಕೋಟಿ ರೂಪಾಯಿ ಹಣವನ್ನು ಆ ಯೋಜನೆಯ ಸಲುವಾಗಿ ಮೀಸಲಿಟ್ಟಿತ್ತು. ಇದೇ ಅಧಿವೇಶನದಲ್ಲಿ ಶ್ರೀಮತಿ ಲಲಿತಾ ನಾಯಕ್ ಅವರು,

ನಾನು ಮತ್ತು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸರ್ಕಾರಕ್ಕೆ ಒಂದು ಮನವಿ ಮಾಡಿಕೊಂಡೆವು. ಬಡವರಾಗಿರುವವರಿಗೆ ಸೀರೆ ಮತ್ತು ಧೋತಿ ಕೊಡುವುದಕ್ಕೆ ಈ ಸರ್ಕಾರದಲ್ಲಿ ಒಂದು ಯೋಜನೆ ಇದೆ, ದಯವಿಟ್ಟು ಆ ಯೋಜನೆಯ ಮೂಲಕ ಸೀರೆ ಮತ್ತು ಧೋತಿ ಕೊಡಿಸುವ ಪ್ರಯತ್ನ ಮಾಡಿ ಎಂದು ಹೇಳಿದೆವು. ಆದರೆ ಈ ಯೋಜನೆಯ ಹಣವನ್ನು ಒಂದು ಪೈಸೆಯನ್ನು ಕೂಡ ಖರ್ಚು ಮಾಡಲಿಲ್ಲ. ಅಂದಾಗ ಈ ಯೋಜನೆಯನ್ನು ಏತಕ್ಕೆ ಇಟ್ಟರು? ಈ ಯೋಜನೆಗೆ ಕಾರಣಕರ್ತರು ಯಾರು? ಆ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ವಿಫಲರಾದ ಅಧಿಕಾರಿಗಳಿಗೆ ಏತಕ್ಕೆ ಶಿಕ್ಷೆ ವಿಧಿಸುವುದಿಲ್ಲ? ಆ ಯೋಜನೆಯ ಹಣವನ್ನು ತೆಗೆದುಕೊಂಡು ಗಂಗಾ ಕಲ್ಯಾಣಕ್ಕೆ ಹಾಕಿದ್ದೀರಿ. ಗಂಗಾ ಕಲ್ಯಾಣಕ್ಕೆ ಬೇರೆ ರೂಪದಲ್ಲಿ ಹಣವನ್ನು ಮೀಸಲಿಡಬೇಕಾಗಿತ್ತು. ಬಡವರಿಗೆ ಸೀರೆ-ಧೋತಿ ಹಂಚಬೇಕಾದ ಹಣವನ್ನು ಗಂಗಾ ಕಲ್ಯಾಣ ಯೋಜನೆಗೆ ಕೊಡುತ್ತೀರಾ? ಇದು ನ್ಯಾಯವೇ? ಸೀರೆ-ಧೋತಿ ಕೊಡದೆ ಇದ್ದವರು ನಿಜವಾಗಿ ಗಂಗಾ ಕಲ್ಯಾಣ ಯೋಜನೆ ಮಾಡಿಕೊಡುತ್ತಾರೆಯೇ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಇಲ್ಲಿ ನನ್ನ ಉದ್ದೇಶ ಸರ್ಕಾರವನ್ನು ಟೀಕೆ ಮಾಡುವುದಲ್ಲ. ಸರ್ಕಾರ ಹೊಣೆಗೇಡಿ ಅಧಿಕಾರಿಗಳನ್ನು ರಕ್ಷಿಸುತ್ತಿರುವುದನ್ನು ನಾನು ಟೀಕೆ ಮಾಡುತ್ತಿದ್ದೇನೆ. ಆ ಹೊಣೆಗೇಡಿ ಅಧಿಕಾರಿಗಳನ್ನು ಶಿಕ್ಷಿಸುವ ಕೆಲಸವನ್ನು ಪ್ರಾರಂಭ ಮಾಡಿ ಪ್ರಾರಂಭ ಮಾಡಿದರೆ ಮುಂದಿನ ದಿನಗಳಲ್ಲಿ ಫಲಿತಾಂಶ ಸಿಗುತ್ತದೆ. ಆಗ ಈ ಜನಾಂಗದಲ್ಲಿರತಕ್ಕ ಬಡತನವನ್ನು ಅಳಿಸುವ ಕೆಲಸವನ್ನು ಇವರು ಪ್ರಾಮಾಣಿಕವಾಗಿ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರೇ, ನಮ್ಮ ಸಮಾಜ ಕಲ್ಯಾಣ ಸಚಿವರಲ್ಲಿ ನಾನು ಕೊನೆಯದಾಗಿ ಕೇಳಿಕೊಳ್ಳುತ್ತಿರುವುದೇನೆಂದರೆ ಅನುಪಯುಕ್ತ ಎಂದು ಸದನದಲ್ಲಿ ಏನು ಹೇಳಿದ್ದೀರಿ ಆ ಮಾತುಗಳನ್ನು ಮುಂದೆ ದಯವಿಟ್ಟು ಹೇಳಬೇಡಿ. ಉಪಯುಕ್ತವಾಗಿರುವುದನ್ನು ನೀವು ಮಾಡಿ. ಆದರೆ ನಿಮ್ಮ ಸರ್ಕಾರದಲ್ಲಿದ್ದಂಥ ಹಿಂದಿನ ಮಂತ್ರಿಗಳನ್ನು ಟೀಕಿಸುವಂಥ ಕೆಲಸವನ್ನು ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಸೀರೆ ಧೋತಿ ಕೊಡುವುದು ಅನುಪಯುಕ್ತವೇ ಅಧ್ಯಕ್ಷರೆ? ಕೇವಲ ಇದೊಂದನ್ನು ನಾನು ಪಾಯಿಂಟ್ ಔಟ್ ಮಾಡಿದ್ದೇನೆ. ಇದರಲ್ಲಿ ಸುಮಾರು 140 ಇಲಾಖೆಗಳಿಂದ ಹಣವನ್ನು ತೆಗೆದಿದ್ದೀರಿ. ಟ್ರೈಸ್ಂ, ಐ.ಆರ್.ಡಿ.ಪಿ. ಪ್ರತಿಯೊಂದರಲ್ಲೂ. ಇವೆಲ್ಲಾ ಅನುಪಯುಕ್ತವೇ? ಉಪಯುಕ್ತ ಎಂಬುದು ಸರ್ಕಾರ ಬಂದ ತಕ್ಷಣ ಗೊತ್ತಾಗಲಿಲ್ಲವೆ? ಒಂದು ವರ್ಷದ ನಂತರ ಗೊತ್ತಾಯಿತೇ? ಈ ರೀತಿಯ ಟೀಕೆಯನ್ನು ಒಬ್ಬ ಮಂತ್ರಿ ಇನ್ನೊಬ್ಬ ಮಂತ್ರಿಯ ಮೇಲೆ ಮಾಡುವಂಥ ಪ್ರಯತ್ನವನ್ನು ಮಾಡಕೂಡದು ಎಂದು ಈ ಸಂದರ್ಭದಲ್ಲಿ ವಿನಯಪೂರ್ವವಾಗಿ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ನಮ್ಮ

ಜನಾಂಗದವರು ಅವರದೇ ಕಿತ್ತಾಡುತ್ತಿದ್ದಾರೆ. ಆ ಜನಾಂಗದ ಬಗ್ಗೆ ನಿಮಗೆ ಕಳಕಳಿ ಇತ್ತು ಎಂದರೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ. ರೂಪಿಸಿಬಿಟ್ಟು ಅದಕ್ಕೆ ಬೇಕಾದ ಹಣವನ್ನು ಮೀಸಲಾಗಿರಿಸಿ. ಆದರೆ ಒಂದಕ್ಕೆ ಮೀಸಲಾಗಿಟ್ಟಂಥ ಹಣವನ್ನು ಇನ್ನೊಂದಕ್ಕೆ ವರ್ಗಾವಣೆ ಮಾಡುವ ಕೆಲಸವನ್ನು ಮುಂದೆ ಮಾಡಬೇಡಿ ಎಂದು ಕೇಳಿಕೊಂಡು 1997-98ಕ್ಕೆ ಕೇವಲ 153 ಕೋಟಿ ರೂಪಾಯಿ ಇಟ್ಟಿರುವಂಥ ಹಣ ಯಾವುದೇ ಕಾರಣಕ್ಕೂ ಸಾಲದು. 1994-95ರಲ್ಲಿ ಎಷ್ಟು ಹಣ ಇಟ್ಟಿದ್ದರೋ ಹಿಂದಿನ ಸರ್ಕಾರಗಳು, ಅವರ ಬಗ್ಗೆ ಏನು ಕಾಳಜಿ ತೋರಿಸಿದ್ದವೋ, ಅಷ್ಟು ಕಾಳಜಿಯನ್ನಾದರೂ ತೋರಿಸುವಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ಕೇಳಿಕೊಂಡು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : 1997-98ನೇ ಆಯವ್ಯಯ ಮುಂಗಡಪತ್ರದ ಮೇಲಿನ ಸಾಮಾನ್ಯ ಚರ್ಚೆ ಇಲ್ಲಿಗೆ ಮುಗಿಯಿತು. ಮಾನ್ಯ ಉಪ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡಲಿದ್ದಾರೆ. ಈಗ ಮಸೂದೆ ಏನಿದೆ ಅದನ್ನು ತೆಗೆದುಕೊಳ್ಳೋಣ.

10) ಶಾಸನ ರಚನಾ ಕಾರ್ಯ ಕಲಾಪಗಳು

1) ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು (ಉತ್ಪಾದನೆ, ಸರಬರಾಜು, ಹಂಚಿಕೆ, ಮತ್ತು ಮಾರಾಟದ ನಿಯಂತ್ರಣ) (ತಿದ್ದುಪಡಿ) ಪರ್ಯಾಲೋಚನೆ ಪ್ರಸ್ತಾಪ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸದನದಲ್ಲಿ ಕೆಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದಂತೆ ಕೆಲವು ಮಾನ್ಯ ಸದಸ್ಯರು ತಮ್ಮ ಕೋಣೆಯಲ್ಲಿ ಸೇರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮಾನ್ಯ ಸದಸ್ಯರುಗಳು ಹೇಳಿದಂಥ ತಿದ್ದುಪಡಿಗಳನ್ನು ನಾವು ತರುವುದಕ್ಕೆ ಸಿದ್ಧರಿದ್ದೇವೆ. ಅದನ್ನು ಈಗಾಗಲೇ ಸಭೆಯ ಮುಂದೆ ಸಹ ಇಟ್ಟಿದೆ. ಈಗಾಗಲೇ ಮಂಡಿಸಿಯಾಗಿದೆ. ಆದ್ದರಿಂದ ಚರ್ಚೆಯಿಲ್ಲದೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಮಾತನಾಡಿದ ಪ್ರಕಾರ ಕೆಲವು ಭರವಸೆಗಳನ್ನು ಕೊಟ್ಟಿದ್ದರು. ಭರವಸೆ ಕೊಡುತ್ತೇವೆಂದು ಹೇಳಿದ್ದರು.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಈಗಾಗಲೇ ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದ ಪ್ರಕಾರ ಅನುಮೋದನೆ ಕೊಟ್ಟಿದ್ದೇವೆ. ನಾವೆಲ್ಲ ಒಪ್ಪಿದ್ದೇವೆ. ಆದರೆ ಟ್ರೇಡರ್ಸ್ ಎಂದು ಏನಿದೆ ಅದು ಬಿಟ್ಟು ವೀವರ್ಸ್ ಮತ್ತು ಟ್ವಿಸ್ಟರ್ಸ್‌ಗೆ ಒಂದು ಕೆ.ಜಿ.ಯಿಂದ